بِسْمِ اللّٰہِ الرَّحْمٰنِ الرَّحِیْمِ　نَحْمَدُہٗ وَنُصَلِّی عَلٰی رَسُوْلِہِ الْکَرِیْمِ　وَعَلٰی عَبْدِہِ الْمَسِیْحِ الْمَوْعُوْدِ

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

ಕನ್ನಡ **ಬದರ್** ವಾರ ಪತ್ರಿಕೆ
WEEKLY BADAR QADIAN KANNADA

ವರ್ಷ: 02
ಸಂಚಿಕೆ: 37

ವಾರ್ಷಿಕ ಶುಲ್ಕ ರೂ.575/-
ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

**16 ಸೆಪ್ಟೆಂಬರ್ 2021, 16 ತಬೂಕ್ 1400 ತಬ್‌ಲೀಗ್ ಹಿಜರಿ ಶಮ್‌ಸಿ, 08 ಸಫರ್ 1443 ಹಿಜರಿ ಖಮರಿ.**


### ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ– **ಆಮೀನ್**

اَللّٰهُمَّ اَيِّدْ اِمَامَنَا بِرُوْحِ الْقُدُسِ
وَبَارِكْ لَنَا فِيْ عُمُرِهٖ وَاَمْرِهٖ۔

### ಅಲ್ಲಾಹನ ಉಪದೇಶ

وَاِذَا سَمِعُوْا مَاۤ اُنْزِلَ اِلَى الرَّسُوْلِ تَرٰۤى اَعْيُنَهُمْ تَفِيْضُ مِنَ الدَّمْعِ مِمَّا عَرَفُوْا مِنَ الْحَقِّ ۚ يَقُوْلُوْنَ رَبَّنَاۤ اٰمَنَّا فَاكْتُبْنَا مَعَ الشّٰهِدِيْنَ (المائدہ:84)

**(ಅಲ್‌ಮಾಇದ: 84)**
**ಅಂದರೆ: ಈ ಸಂದೇಶವಾಹಕನಿಗೆ ಅವತೀರ್ಣವಾದುದನ್ನು (ಖುರ್‌ಆನನ್ನು) ಅವರು ಆಲಿಸುವಾಗ ಅವರಿಗೆ ಸತ್ಯವನ್ನು ಮನಗಾಣಲು ಸಾಧ್ಯವಾದುದರಿಂದ ಅವರ ಕಣ್ಣುಗಳಿಂದ ಭಾಷ್ಪ ಸುರಿಯುವುದನ್ನು ನೀನು ಕಾಣುವೆ. 'ನಮ್ಮ ಪ್ರಭೂ, ನಾವು ನಂಬಿರುವೆವು. ಆದ್ದರಿಂದ ನಮ್ಮನ್ನು (ಸತ್ಯಕ್ಕೆ) ಸಾಕ್ಷ್ಯ ವಹಿಸಿದವರೊಂದಿಗೆ ದಾಖಲಿಸು' ಎಂದು ಅವರು ಹೇಳುವರು.**

### ಪ್ರವಾದಿ ಮುಹಮ್ಮದ್[ಸ]ರವರ ಉಪದೇಶ

**ಜಿಪುಣತನದಿಂದ ತಡೆಯಲಾಗಿದೆ ಮತ್ತು ಸದ್‌ಖಾ (ದಾನ) ನೀಡಲು ಉತ್ತೇಜಿಸಲಾಗಿದೆ.**

(1427) ಹಝ್‌ರತ್ ಹಕೀಮ್ ಬಿನ್ ಹಝಾಮ್ ವರದಿ ಮಾಡುತ್ತಾರೆ. ನಬಿ(ಸ) ನುಡಿದರು. ಮೇಲಿನ ಕೈ ಕೆಳಗಿನ ಕೈಗಿಂತ ಉತ್ತಮವಾಗಿದೆ. ಮೊದಲು ಯಾರಿಗೆ ನೀವು ಪೋಷಿಸುತ್ತೀರೋ ಅವರಿಗೆ ನೀಡಿ ಅದೇ ಸದ್‌ಖಾ (ದಾನ) ಉತ್ತಮವಾಗಿದೆ. ಅವರ ಅಗತ್ಯ ಪೂರೈಸಿದ ನಂತರ ಉತ್ತಮವಾದ ದಾನವೆಂದರೆ, ಯಾರು ಬೇಡುವ ಪ್ರವೃತ್ತಿ ಹೊಂದಿರುವುದಿಲ್ಲವೋ. ಅಲ್ಲಾಹನು ಅವನನ್ನು ರಕ್ಷಿಸುವನು ಮತ್ತು ಅಲ್ಲಾಹನು ಸ್ವಾಭಿಮಾನಿಯ ಸ್ವಾಭಿಮಾನ ಕಾಪಾಡುವನು.

(1431) ಹಝ್‌ರತ್ ಇಬ್ನು ಅಬ್ಬಾಸ್(ರ) ವರದಿ ಮಾಡುತ್ತಾರೆ, ನಬಿ(ಸ) ಹಬ್ಬದ ದಿನ ಹೊರಗೆ ಬಂದರು. ಎರಡು ರಕ್‌ಅತ್ ನಮಾಝ್ ನಿರ್ವಹಿಸಿಕೊಟ್ಟರು. ಅದರ ಮುಂಚೆಯು ನಮಾಝ್ ನಿರ್ವಹಿಸಲಿಲ್ಲ. ಅದರ ನಂತರ ಸಹ, ಮತ್ತೆ ಸ್ತ್ರೀಯರತ್ತ ಗಮನ ಹರಿಸಿದರು. ಅವರ ಜೊತೆ ಹಝ್‌ರತ್ ಬಿಲಾಲ್(ರ) ಇದ್ದರು. ಪ್ರವಾದಿ(ಸ) ಅವರಿಗೆ ಉಪದೇಶ ನೀಡುತ್ತಾ ನುಡಿದರು ದಾನ ನೀಡಿರಿ ಎಂದಾಗ, ಸ್ತ್ರೀಯೊಬ್ಬಳು ಬಳೆಯನ್ನು ಕೊಟ್ಟರೆ ಒಬ್ಬಳು ಕಿವಿ ಓಲೆಯನ್ನು ಕೊಟ್ಟರು.

(1433) ಹಝ್‌ರತ್ ಅಸ್ಮಾ(ರ) ವರದಿ ಮಾಡುತ್ತಾರೆ, ನಬಿ(ಸ) ನನ್ನೊಡನೆ ಹೇಳಿದರು. ಕಟ್ಟಿ ಇಡಬೇಡಿರಿ ಇಲ್ಲದಿದ್ದರೆ ನಿಮ್ಮಿಂದ ತಡೆಹಿಡಿಯಲಾಗುವುದು.

* ಉಸ್ಮಾನ್ ಬಿನ್ ಅಬಿಶೇಖ, ಅಬ್ದುಲ್ಲರಿಂದ ವರದಿ ಮಾಡುತ್ತಾ ಅದೇ ಹದೀಸ್ ನಮ್ಮೊಡನೆ ಹಂಚಿಕೊಂಡರು. ಮತ್ತು ಈ ಪದಗಳನ್ನು ಉಚ್ಚರಿಸಿದರು. ಎಣಿಸುತ್ತಾ ಇರಬೇಡಿ, ಇಲ್ಲದಿದ್ದರೆ ಅಲ್ಲಾಹನು ಸಹ ನಿಮಗೆ ಎಣಿಸಿ ಎಣಿಸಿಯೇ ನೀಡುವನು. **(ಸಹೀಹ್ ಬುಖಾರಿ, ಸಂಪುಟ-3, ಕಿತಾಬುಝ್ಝಕಾತ್, ಮುದ್ರಣ 2008 ಖಾದಿಯಾನದ)**

**ಮಾನವ ಜೀವನದ ಉದ್ದೇಶ ಹಾಗೂ ಗುರಿ ಸರಿಯಾದ ಮಾರ್ಗದಲ್ಲಿ ನಡೆಯುವುದು ಆಗಿದೆ. ಅದನ್ನು ಈ ಅಧ್ಯಾಯದಲ್ಲಿ ಹೀಗೆ ನಿರೂಪಿಸಲಾಗಿದೆ. ಇಹ್‌ದಿನಸ್ಸಿರಾತಲ್ ಮುಸ್ತಖೀಮ್ ಸಿರಾತಲ್ಲಝೀನ ಅನ್‌ಅಮ್‌ತ ಅಲೈಹಿಮ್ (ಓ ದೇವಾ), ನೀನು ನಮ್ಮನ್ನು ಸರಿಯಾದ ಮಾರ್ಗದಲ್ಲಿ ನಡೆಸು, ನಿನ್ನ ಅನುಗ್ರಹಕ್ಕೆ ಪಾತ್ರರಾದವರ ಮಾರ್ಗದಲ್ಲಿ.**

### ಸಯ್ಯದುನಾ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

#### ಅಲ್ಲಾಹನ ಪ್ರೀತಿ ಹಾಗೂ ಅವನ ಅನುಗ್ರಹ

ಪ್ರೀತಿಯು ಒಂದು ಎಂತಹ ವಸ್ತು ಆಗಿದೆ ಎಂದರೆ ಅದು ಮನುಷ್ಯನ ಕೆಟ್ಟ ಗುಣಗಳನ್ನು ಭಸ್ಮಗೊಳಿಸಿ ಒಂದು ಹೊಸ ಹಾಗೂ ಪವಿತ್ರ ಮನುಷ್ಯನನ್ನಾಗಿ ಮಾಡುತ್ತದೆ. ಮತ್ತೆ ಅವನು ಮೊದಲು ಕಾಣದಂತ ಅನುಭವ ಕಾಡತೊಡಗುತ್ತಾನೆ, ಮೊದಲು ಆಲಿಸದಂತಹದ್ದನ್ನು ಆಲಿಸತೊಡಗುತ್ತಾನೆ. ಅಂತೂ ಅಲ್ಲಾಹನು ಏನೆಲ್ಲಾ ತನ್ನ ಅನುಗ್ರಹ ಔದಾರ್ಯಗಳನ್ನು ಮನುಷ್ಯನಿಗಾಗಿ ಸಿದ್ಧಪಡಿಸಿದ್ದಾನೆ. ಮನುಷ್ಯನನ್ನು ದಯಪಾಲಿಸುತ್ತಾನೆ. ಅದನ್ನು ಪಡೆಯಲು ಮತ್ತು ಫಲಾನುಭವಿಯಾಗಲು ಆ ರೀತಿಯ ಸಾಮರ್ಥ್ಯಗಳನ್ನು ಸಹ ಒದಗಿಸಿರುತ್ತಾನೆ. ಒಂದು ವೇಳೆ ಅವನು ಸಾಮರ್ಥ್ಯಗಳನ್ನು ಒದಗಿಸಿ ಅದನ್ನು ಪಡೆಯಲು ಮಾರ್ಗದರ್ಶನ ಮಾಡದಿರುತ್ತಿದ್ದರೆ ಅದೊಂದು ನ್ಯೂನತೆ ಆಗುತಿತ್ತು. ಮಾರ್ಗಗಳನ್ನು ತೋರಿಸಿ ಸಾಮರ್ಥ್ಯಗಳನ್ನು ಒದಗಿಸುತ್ತಿರಲಿಲ್ಲ ಎಂದಾದರೆ, ಅಲ್ಲ ಹಾಗಲ್ಲ ಅವನು ಸಾಮರ್ಥ್ಯಗಳನ್ನು ನೀಡಿದ್ದಾನೆ. ಮತ್ತು ಮಾರ್ಗಗಳನ್ನು ಸಹ ತೋರಿಸಿದ್ದಾನೆ. ಉದಾಹರಣೆಗೆ ಒಂದೆಡೆ ರೊಟ್ಟಿ ಒದಗಿಸಿರಬೇಕು, ಇನ್ನೊಂದೆಡೆ ಕಣ್ಣು, ನಾಲಿಗೆ, ಹಲ್ಲುಗಳು ಮತ್ತು ಜಠರವು ನೀಡಿದ್ದಾನೆ, ಯಕೃತ್ ಮತ್ತು ಜೀರ್ಣಾಂಗಗಳನ್ನು ಸಿದ್ಧಪಡಿಸಿದ್ದಾನೆ. ಅವೆಲ್ಲದರ ಕಾರ್ಯ ಆಹಾರದ ಮೇಲೆ ನಿಂತಿದೆ, ಒಳಗೆ ಏನೂ ಹೋಗದಿದ್ದರೆ ಹೃದಯದಲ್ಲಿ ರಕ್ತ ಹೇಗೆ ಬರುವುದು, ಶಕ್ತಿ ಹೇಗೆ ದೊರೆಯುವುದು.

ಅದೇ ರೀತಿ ಪ್ರಾಥಮಿಕ ನೆಲೆಯಲ್ಲಿ ಅಲ್ಲಾಹನು ತೋರಿದ ಔದಾರ್ಯವೆಂದರೆ ಹಝ್‌ರತ್ ರಸೂಲುಲ್ಲಾಹ್(ಸ) ಅವರಿಗೆ ಇಸ್ಲಾಮ್ ಎಂಬ ಪರಿಪೂರ್ಣ ಧರ್ಮ ಕೊಟ್ಟು ಕಳುಹಿಸಿದ್ದಾನೆ. ಮತ್ತು ಅವರನ್ನು ಖಾತಮನ್ನಬಿಯೀನ್‌ನನ್ನಾಗಿ ಮಾಡಿದ್ದಾನೆ. ಮತ್ತು ಪವಿತ್ರ ಖುರ್‌ಆನ್‌ನ್ನು ಎಂತಹ ಪರಿಪೂರ್ಣ ಮತ್ತು ಖಾತಮಲ್ ಕುತುಬ್ (ಅಂತಿಮ ಗ್ರಂಥ) ನೀಡಿದ್ದಾನೆಂದರೆ ಇದೀಗ ಅಂತ್ಯ ದಿನದವರೆಗೆ ಯಾವ ಗ್ರಂಥವಾಗಲಿ ಅಥವಾ ಯಾವ ಹೊಸ ಶರೀಅತ್ ಆಗಲಿ ಅವತರಿಸುವುದಿಲ್ಲ. ಅದಾಗ್ಯೂ ಅಲ್ಲಾಹನು ನಮಗೆ ನೀಡಿರುವಂತಹ ಶಕ್ತಿ ಗುಣಗಳಿಂದ ಕಾರ್ಯ ಸಾಧನೆ ಮಾಡಲಿಲ್ಲ ಎಂದಾದರೆ ಮತ್ತು ಅಲ್ಲಾಹನೆಡೆ ಮುನ್ನಡೆಯಲಿಲ್ಲ ಎಂದಾದರೆ ಅದು ನಮ್ಮ ಘೋರ ಅಸಡ್ಡೆ, ಅಂತ್ಯ ಹಾಗೂ ಕೃತಜ್ಞತೆ ಆದೀತು.

*(ಪುಟ ಸಂಖ್ಯೆ-10 ರಲ್ಲಿ ಮುಂದುವರಿಸಲಾಗಿದೆ)*

**ಸಾಮಾನ್ಯವಾಗಿ ಜನರು ದೇವವಾಣಿಯಾದರೆ ತಮ್ಮನ್ನು ದೊಡ್ಡ ವ್ಯಕ್ತಿ ಎಂದು ತಿಳಿದುಕೊಳ್ಳುತ್ತಾರೆ. ಆದರೆ ಅಷ್ಟು ಸಾಕಾಗುವುದಿಲ್ಲ.**

**ದೇವವಾಣಿ ಮಾತ್ರ ಮುಖ್ಯವಲ್ಲ, ಬದಲು ಆ ದೇವವಾಣಿಯು ಅಲ್ಲಾಹನಿಂದ ಅವನ ಪ್ರೀತಿಯ ಇಂಗಿತ ಅಥವಾ ಆ ದಾಸನ ಪ್ರತಿ ಸ್ಥಾನಮಾನ ಕುರಿತು ಸೂಚನೆಯು ಇದೆಯೇ?**

ಸಯ್ಯದನಾ ಹಝ್‌ರತ್ ಮುಸ್ಲಿಹ್ ಮೌಊದ್ (ರ) ಸೂರ: ಅಲ್-ಹಿಜ್‌ರ ವಚನ 9 **ಮಾ ನುನಝ್ಝಿಲುಲ್ ಮಲಾಯಿಕತ ಇಲ್ಲಾ ಬಿಲ್ ಹಖ್ಖಿ ವಮಾ ಕಾನೂ ಇಝುಮ್ಮುನ್‌ಝಿರೀನ್** ಸರಿಯಾದ ಅವಶ್ಯಕ್ಕಾಗಿ ಹೊರತು ನಾವು ದಿವ್ಯದೂತರನ್ನು ಇಳಿಸುವುದಿಲ್ಲ. ಆ ಬಳಿಕ ಅವರಿಗೆ ಕಾಲಾವಾಕಾಶವನ್ನು ನೀಡಲಾಗುವುದಿಲ್ಲ ಎಂಬ ವ್ಯಾಖ್ಯಾನ ಮಾಡುತ್ತಾ ಹೇಳುತ್ತಾರೆ. ಸತ್ಯ ಎಂಬುದರ ಅರ್ಥ ಹಿಂದೆಯೇ ತಿಳಿಸಲಾಗಿದೆ. ಇಲ್ಲಿ ಅದರ ಅರ್ಥ ಸತ್ಯವಾಣಿ ಎಂದಾಗುತ್ತದೆ. ಅದರ ಅರ್ಥ ದೇವದೂತರು ದೈವಿಕವಾಣಿಯೊಂದಿಗೆ ಅವತರಿಸುತ್ತಾರೆ ಎಂದು. ಆದರೆ ನಿಮ್ಮ ಮೇಲೆ ದೇವವಾಣಿ ಅವತರಿಸಲು ನೀವು ಪ್ರವಾದಿಯು ಅಲ್ಲ, ಅದಕ್ಕೆ ಅರ್ಹರಾಗುವ ವ್ಯಕ್ತಿಯೂ ಅಲ್ಲ, ಇಲ್ಲಿ ಸತ್ಯ ಎಂಬ ಅರ್ಥ ಹಕ್ಕು ಎಂದಾಗಿದೆ. ಅಂದರೆ ಅವರ ಅವರ ಸಾಮರ್ಥ್ಯಕ್ಕನುಗುಣವಾಗಿ

*(ಪುಟ ಸಂಖ್ಯೆ-11ರಲ್ಲಿ ಮುಂದುವರಿಸಲಾಗಿದೆ)*

لَآ اِلٰهَ اِلَّا اللّٰهُ مُحَمَّدٌ رَّسُوْلُ اللّٰهِ

## ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಬಹುಮಾನದ ಪಂಥಾಹ್ವಾನ

**ಹರ್ ಮುಖಾಲಿಫ್ ಕೊ ಮುಖಾಬಿಲ್ ಪೆ ಬುಲಾಯ ಹಮ್ ನೇ**

ಎಲ್ಲಾ ವಿರೋಧಿಯರನ್ನು ಪ್ರತಿವಾದಿಸಲು ಆಹ್ವಾನಿಸಿದೆವು ನಾವು.

إِنَّ السُّمُوْمَ لَشَرُّ مَا فِي الْعَالَمِ ۞ شَرَّ السُّمُوْمِ عَدَاوَةُ الصُّلَحَاءِ

## ವಿವಾದದ ನಂತರ ಅಬ್ದುಲ್ ಹಖ್ ಅವರಿಗೆ ಅವಮಾನವಾಗಿಲ್ಲ ಎಂದು ನ್ಯಾಯಾಧೀಶರು ಪ್ರಮಾಣ ಮಾಡಿದರೆ ಮೌಲ್ವಿ ಅಬ್ದುಲ್ ಹಕ್ ಘಜ್ನವಿಗೆ ಐದು ನೂರು ರೂಪಾಯಿಗಳ ಬಹುಮಾನ

**ಅಬ್ದುಲ್ ಹಖ್ವ್‌ನಿಗೆ ದೈವಿಕ ನಿಯಮಾನುಸಾರ ಒಂದು ವಿಶೇಷ ರೀತಿಯ ಅಪಮಾನಗಳ ಸರಣಿ**

**ಮುಬಾಹಲದ ಪ್ರಭಾವ ತೋರಿಸಲು ಭವಿಷ್ಯವಾಣಿ ನುಡಿದಿದ್ದನು. ಗಂಡು ಮಗು ಆಗುವುದು ಎಂದು ಆದರೆ ಏನೂ ಆಗಲಿಲ್ಲ.**

ಮೌಲ್ವಿ ಅಬ್ದುಲ್ ಹಖ್‌ನ ಅಜ್ಞಾನ ಮತ್ತು ಮೂಢತೆಯ ಮೇಲೆ ಆಶ್ಚರ್ಯವಿದೆ. ಮೌಲ್ವಿ ಅನಿಸಿಕೊಳ್ಳುವವನಿಗೆ ಈ ತರಹದ ಅಜ್ಞಾನತೆ ಮತ್ತು ಮೂಢತೆ ಅಲ್ಲಾಹನ ಅಭಯ ಇಂತಹ ಮೂಢ ಮತ್ತು ದಿಮಾಖಿನ ಮೇಲೆ ಮೌಲ್ವಿ ಅಬ್ದುಲ್ ಹಖ್ ಗಝ್ನವಿ ದೇವವಾಣಿ ಪಡೆಯುವವನು ಅಂದುಕೊಳ್ಳುತ್ತಿದ್ದ ಮತ್ತು ದೊಡ್ಡ ದೊಡ್ಡ ವಿದ್ಯಾವಂತ ವರ್ಗ ಅವನ ಚೇಲಾಗಳಾಗಿದ್ದರು. ಅಂದ ಮೇಲೆ ಏಕೆ ಎಲ್ಲಿಂದ ಈ ಅಜ್ಞಾನತೆ ಮತ್ತು ಮೂಡತೆ ಬಂತು? ಇದು ನಿಶ್ಚಿತವಾಗಿಯೂ ಪ್ರವಾದಿ ಓರ್ವನನ್ನು ದಿಕ್ಕರಿಸಿದ ಫಲವಾಗಿದೆ. ಮುಬಾಹಲ ನಂತರ ಅವನು ದಾವೆ ಮಾಡಿದ್ದನು. ನನಗೆ ಗಂಡು ಮಗು ಆಗುವುದು ಎಂದು. ಬಹುಶಃ ಅವನು ಭಾವಿಸಿರಬೇಕು. ಗಂಡು ಮಗು ಆಗುತ್ತಲೆ ಇರುತ್ತವೆ. ಗಂಡು ಮಕ್ಕಳಿಂದ ಯಾವ ಮನೆ ಖಾಲಿ ಇದೆ ಒಂದೆರಡು ಬಿಟ್ಟರೆ. ನನ್ನ ಮನೆಯಲ್ಲೂ ಗಂಡು ಮಗು ಆಗಬಹುದು. ಅದನ್ನು ನೆಪ ಮಾಡಿ ನನಗೂ ಏನಾದರೂ ಹೇಳಲು ಅವಕಾಶ ದೊರೆಯಬಹುದು. ಆದರೆ ನೋಡಿರಿ ಮುಬಾಹಲದ ಪರಿಣಾಮ ನಾನು ಹೇಳಿದ್ದೆ, ನನಗೆ ಗಂಡು ಮಗು ಆಗುವುದು, ಅದು ಆಯಿತು. ಅಕಟಾಕಟ! ಅವನ ಬುದ್ಧಿಯ ಮೇಲೆ ಗಂಡು ಮಗು, ಒಂದೆಡೆ ಇರಲಿ ಅಲ್ಲಾಹನ ಆಜ್ಞೆ ಇಲ್ಲದಿದ್ದರೆ ಒಂದು ಎಲೆಯು ಅಲ್ಲಾಡುವುದಿಲ್ಲ. ಅವನಿಗೆ ಇಷ್ಟೂ ಹೊಳೆಯಲಿಲ್ಲ. ಅಲ್ಲಾಹನ ಆಜ್ಞೆ ಇಲ್ಲದಿದ್ದರೆ ಹೇಗೆ ತಾನೇ ಗಂಡು ಮಗು ಆಗುವುದು. ಇದು ಅಹಂಕಾರದಿಂದ ಕೂಡಿದ ಸುಳ್ಳಾಗಿತ್ತು, ಅಥವಾ ತಮ್ಮ ಚೇಲಾಗಲೆದುರು ಮಿಥ್ಯ ಹೊಗಳಿಕೆ ಪಡೆಯಲು ಏನು ನಿರ್ವಾಹವಿಲ್ಲದೆ ವಿವಶನಾಗಿ ಹೂಡಿದ ಸುಳ್ಳು? ಅಲ್ಲಾಹನೆ ಚೆನ್ನಾಗಿ ಬಲ್ಲವನಾಗಿದ್ದಾನೆ. ಅಹಂಕಾರದಿಂದ ಕೂಡಿದ ಸುಳ್ಳಾಗಿದ್ದರೆ ನಾವು ಹಝ್ರತ್ ಮಸೀಹ್ ಮೌಊದ್(ಅ) ರವರ ಈ ಅಧ್ಯಾಪನೆ ಪ್ರಸ್ತುತಪಡಿಸುವೆವು. ಅವರು(ಅ) ಹೇಳುತ್ತಾರೆ. ನೆನಪಿರಲಿ. ಅಹಂಕಾರ ಮತ್ತು ಸುಳ್ಳು ಒಂದಕ್ಕೊಂದು ಅನಿವಾರ್ಯವಾಗಿವೆ. ಅಲ್ಲದೆ ಅಹಂಕಾರದಿಂದ ಕೂಡಿದ ಸುಳ್ಳು ಅತೀ ಅಪವಿತ್ರವಾದ ಸುಳ್ಳಾಗಿರುತ್ತದೆ. ಅದೇ ಕಾರಣದಿಂದ ಅಲ್ಲಾಹನು ಎಲ್ಲರಗಿಂತ ಮೊದಲು ಅಹಂಕಾರಿಯ ತಲೆಯನ್ನು ತಗ್ಗಿಸುತ್ತಾನೆ. (ಆಯಿನಾ ಕಮಾಲಾತೆ ಇಸ್ಲಾಂ, ರೂಹಾನಿ ಖಝಾಇನ್, ಸಂಪುಟ–5, ಪುಟ–599)

ಅಂದ ಹಾಗೆ ಅಲ್ಲಾಹನು ಅವನ ಅಹಂಕಾರ ಮತ್ತು ಮತ್ಸರ ಎಲ್ಲವೂ ನುಚ್ಚು ನೂರಾಗಿಸಿದನು. ಹಾಗೆ ಸುಮ್ಮನೆ ಗಂಡು ಮಗು ಆಗುವ ದಾವೆ ಸಾರಿದ್ದನು. ಆದರೆ ವರ್ಷಾನು ವರ್ಷ ಕಳೆದು ಹೋದ ನಂತರವು ಗಂಡು ಮಗು ಹುಟ್ಟಲಿಲ್ಲ. ಅಬ್ದುಲ್ ಹಖ್, ಅಲ್ಲಾಹನು ನನಗೆ ಹೇಳಿರುವನು ಎಂದು ದಾವೆ ಮಾಡಿರಲಿಲ್ಲ. ಹಾಗೆ ಸುಮ್ಮನೆ ತಮಾಷೆಯಾಗಿ ಒಂದು ಮಾತು ಹೇಳಿಬಿಟ್ಟಿದ್ದ. ಆದರೆ ಅದರ ಎದುರಿನಲ್ಲಿ ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಅಲ್ಲಾಹನಿಂದ ಸುದ್ದಿ ಪಡೆದು ಭವಿಷ್ಯವಾಣಿ ನುಡಿದಿದ್ದರು. ಅವರಿಗೆ(ಅ) ಅಲ್ಲಾಹನು ಗಂಡು ಮಗು ದಯಪಾಲಿಸುವನು. ಈ ಭವಿಷ್ಯವಾಣಿ ಪೂರ್ಣ ಆಗುವವರೆಗೆ ಅಬ್ದುಲ್ ಹಖ್ ಮೃತ್ಯು ಹೊಂದುವುದಿಲ್ಲ ಅವನ ಮುಂದೆ ಈ ಭವಿಷ್ಯವಾಣಿ ಪೂರ್ಣಗೊಳ್ಳುವುದು. ಅವರು(ಅ) ಘಂಟಾಘೋಷವಾಗಿ ಈ ಭವಿಷ್ಯವಾಣಿ ಮಾಡಿದ್ದರು. ತನ್ನ ವಿವಿಧ ಗ್ರಂಥಗಳಲ್ಲಿ ಈ ಭವಿಷ್ಯವಾಣಿಯನ್ನು ಪ್ರಕಟಪಡಿಸಿದ್ದರು. ಅಂದ ಹಾಗೆ ಇದು ಅಬ್ದುಲ್ ಹಖ್ವನಿಗೆ ಒಂದು ವಿಶೇಷ ರೀತಿಯ ಅಪಮಾನವಾಯಿತು. ಹಝ್ರತ್ ಮಸೀಹ್ ಮೌಊದ್(ಅ) ರವರ ಭವಿಷ್ಯವಾಣಿ ಪೂರ್ಣಗೊಂಡಿತು ಮತ್ತು ಅಬ್ದುಲ್ ಹಖ್ ಈ ಭವಿಷ್ಯವಾಣಿಯನ್ನು ಪೂರ್ಣಗೊಂಡದ್ದು ನೋಡಿದನು. ಆದರೆ ಅವನ ಭವಿಷ್ಯವಾಣಿ ಪೂರ್ಣಗೊಂಡಿಲ್ಲ. ಎಂತಹ ದುರಾಸೆಯ ಅಗ್ನಿ ಅವನ ಮನಸ್ಸನ್ನು ಸುಡುತ್ತಿತ್ತು. ಅದನ್ನು ಊಹಿಸುವುದು ಕಷ್ಟವಾಗಿದೆ. ಈ ಪೈಕಿ ನಾವು ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರವರ ಅಧ್ಯಾಪನೆಗಳು ಅವರ ಕೆಲ ಗ್ರಂಥಗಳಿಂದ ಪ್ರಸ್ತುತಪಡಿಸುವೆವು.

**ಅಬ್ದುಲ್ ಹಖ್ ಗಝ್ನವಿ ಸಂತಾನದಿಂದ ವಂಚಿತನಾಗುವನು ಸಯ್ಯದನಾ ಹಝ್ರತ್ ಮಸೀಹ್ ಮೌಊದ್(ಅ) ರವರ ಭವಿಷ್ಯವಾಣಿ**

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ.

“ನಾನು ನನ್ನ ಗ್ರಂಥ ಅನ್ವಾರುಲ್ ಇಸ್ಲಾಮ್‌ನಲ್ಲಿ ಭವಿಷ್ಯವಾಣಿಯ ನೆಲೆಯಲ್ಲಿ ಅಬ್ದುಲ್ ಹಖ್ವ್‌ನಿಗೆ ಈ ಮತು ಸ್ಪಷ್ಟಪಡಿಸಿದೆ. ಅವನು ಸಂತಾನದಿಂದ ವಂಚಿತನಾಗುವನು. ಅವನು ಬೇಕಾದರೆ ಎಲ್ಲ ರೀತಿಯ ಪ್ರಯತ್ನಗಳನ್ನು ಮಾಡಿ ನೋಡಲಿ ಮತ್ತು ಪರಿಣಾಮ ನಿರಾಕರಿಸಲಿ. ಅಂದ ಹಾಗೆ ಅವನು ಇಲ್ಲಿಯವರೆಗೂ ನಿಸ್ಸಂತಾನನಾಗಿದ್ದಾನೆ. ಈ ದಿನಾಂಕದವರೆಗೆ 28 ಸೆಪ್ಟೆಂಬರ್ 1906 ಆಗಿದೆ, 13 ವರ್ಷಗಳು ಕಳೆದ ನಂತರವೂ ಮುಬಾಹಲದಿಂದಾಗಿ ಇಲ್ಲಿಯವರೆಗೆ ಸಂತಾನದಿಂದ ವಂಚಿತನಾಗಿದ್ದಾನೆ. (ಹಖೀಬತುಲ್ ವಹಿ, ರೂಹಾನಿ ಖಝಾಇನ್, ಸಂಪುಟ–22, ಪುಟ–365 ಟಿಪ್ಪಣಿ)

**ಒಂದು ಮೃತ ಹೆಣ್ಣು ಹುಟ್ಟಿದ್ದರೂ ನಾವು ಅದನ್ನು ಮುಬಾಹಲದ ಪರಿಣಾಮ ಎಂದು ಸ್ವೀಕರಿಸುವೆವು.**

ಇದೀಗ ನಾವು ನೋಡುತ್ತೇವೆ. ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಮೌಲ್ವಿ ಅಬ್ದುಲ್ ಹಖ್ ಗಝ್ನವಿ ಸಂತಾನರಹಿತನಾಗುವ ಬಗ್ಗೆ ತನ್ನ ಗ್ರಂಥ ಅನ್ವಾರುಲ್ ಇಸ್ಲಾಮ್‌ನಲ್ಲಿ ಏನು ಭವಿಷ್ಯವಾಣಿ ಮಾಡಿದ್ದರು ಮತ್ತು ಅವರು ಯಾವ ಪದಗಳನ್ನು ಬಳಸಿದ್ದರು? ವಿಷಯವೇನೆಂದರೆ ಮುಬಾಹಲ ನಂತರ ಅಬ್ದುಲ್ ಹಖ್‌ನ ಸಹೋದರ ತೀರಿಹೋದನು. ಅವನ ವಿಧವೆಯನ್ನು ಅಬ್ದುಲ್ ಹಖ್ ವಿವಾಹ ಮಾಡಿಕೊಂಡನು. ಅವಳಿಂದ ಗಂಡು ಮಗು ಆಗುವ ದಾವೆ ಹೂಡಿದ್ದನು. ಮತ್ತು ಒಂದು ಪತ್ರಿಕೆ ಸಹ ಪ್ರಕಟಪಡಿಸಿದನು. ಅನ್ವಾರುಲ್ ಇಸ್ಲಾಮ್ ಗ್ರಂಥದಲ್ಲಿ ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಅಲ್ಲಾಹನ ಕಡೆಯಿಂದ ತಮಗೆ ದೊರೆಯುತ್ತಿರುವ ನೆರವಿನ ವಿವರ ನೀಡಿದ ನಂತರ ಹೇಳಿದರು.

ಇದು ದೈವಿಕ ನೆರವು, ಸಹೋದರನು ತೀರಿ ಹೋದನು ಮತ್ತು ಅವರ ವಿಧವೆಯನ್ನು ತನ್ನೆಡೆ ಸೆಳೆದುಕೊಂಡನು ಮತ್ತು ಕನ್ಯೆಯಿಂದ ವಯಸ್ಸು ಪೂರ್ತಿ ವಂಚಿತರಾದರು. ಏನಿದು ಕಾರುಣ್ಯ, ಏನದು ನಾಚಿಕೆ. ಆ ವಿಧವೆಯಿಂದ ಇನ್ನೂ ಸಂತಾನ ಆಗಲಿಲ್ಲ. ಮೊದಲೆ ಸಂತಾನ ಆಗುವ ದಾವೆ, ಮತ್ತು ಈಗಿನಿಂದಲೆ ಅದನ್ನು ಮುಬಾಹಲದ ಪರಿಣಾಮ ಎಂಬ ಊಹೆ, ಭೇಷ್, ಶೇಖ್ ಚಿಲ್ಲಿಯ ಸಹೋದರನೆ ಹೌದು ಅದಕ್ಕಾಗಿ ಅಂದರೆ ಸಂತಾನಕ್ಕಾಗಿ ಹಗಲಿರುಳು ಪ್ರಯತ್ನಪಡುತ್ತಿರಲಿ, ಓರ್ವ ಮೃತ ಬಾಲೆಯೇ ಹುಟ್ಟಿದರೂ ನಿಸ್ಸಂಶಯವಾಗಿ ಹೇಳಬಹುದು. ಇದು ಮುಬಾಹಲದ ಪರಿಣಾಮ ಆಗಿದೆ ಎಂದು ಘಂಟಾಘೋಷವಾಗಿ ಈ ಮಾತು ಆಲಿಸಲಾಗುವುದು. (ಅನ್ವಾರುಲ್ ಇಸ್ಲಾಮ್, ರೂಹಾನಿ ಖಝಾಇನ್, ಸಂಪುಟ–9, ಪುಟ–40).

ಇದಾಗಿತ್ತು ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರವರ ಭವಿಷ್ಯವಾಣಿ ಸಂತಾನಕ್ಕಾಗಿ ಹಗಲಿರುಳು ಪ್ರಯತ್ನಪಡುತ್ತಿರಿ. ಓರ್ವ ಮೃತ ಬಾಲೆ ಹುಟ್ಟಿದರೂ, ನಿಸ್ಸಂಶಯವಾಗಿ ಹೇಳಬಹುದು ಇದು ಮುಬಾಹಲದ ಪರಿಣಾಮವಾಗಿದೆ ಎಂದು.

ಅಲ್ಲಾಹ್! ಅಲ್ಲಾಹ್! ಎಷ್ಟೊಂದು ವೈಭವಭರಿತ ಭವಿಷ್ಯವಾಣಿಯಾಗಿದೆ. ಹಗಲಿರುಳು ತಿಂಗಳವಾರು, ವರ್ಷಂಪ್ರತಿ ಪ್ರಯತ್ನಪಡುತ್ತೀರಿ. ಬಾಲಕ ಏಕೆ ಬಾಲಕಿ ಸಹ ಹುಟ್ಟುವುದಿಲ್ಲ. ಜೀವಂತವೇನು ಮೃತನಾಗಿಯೂ ಹುಟ್ಟುವುದಿಲ್ಲ. ಒಂದು ವೇಳೆ ಮೃತನಾಗಿಯೇ ಹುಟ್ಟಿದರೂ ನಾವು ಅದನ್ನು ಮುಬಾಹಲದ ಪರಿಣಾಮ ಎಂದು ಭಾವಿಸುವೆವು. ಈ ಭವಿಷ್ಯವಾಣಿ ಪೂರ್ಣ ವೈಭವದೊಂದಿಗೆ ಪೂರ್ಣಗೊಂಡಿತು. ಅಬ್ದುಲ್ ಹಖ್ ಗಝ್ನವಿ ಬಳಿ ಯಾವುದೇ ಮಗು ಹುಟ್ಟಲಿಲ್ಲ. ಆ ಬಗ್ಗೆ ನಾವು ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರವರ ಕೆಲ ಅಧ್ಯಾಪನೆಗಳು ಪ್ರಸ್ತುತಪಡಿಸುತ್ತೇವೆ.

**ಮಸೀಹ್ ಮೌಊದ್(ಅ) ರವರ ನಾಲ್ಕನೆ ಪುತ್ರನ ದೃಷ್ಟಾಂತ ಅಬ್ದುಲ್ ಹಖ್ ಗಝ್ನವಿಗೆ ತೋರಿಸಲಾಯಿತು.**

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ. ಅಬ್ದುಲ್ ಹಖ್ ಗಝ್ನವಿ ಸಯ್ಯದ್‌ನಾ ಹಝ್ರತ್ ಮಸೀಹ್(ಅ) ಹೇಳುತ್ತಾರೆ. ಅಬ್ದುಲ್ ಹಖ್ ಗಝ್ನವಿ ತನ್ನ ಪತ್ರಿಕೆಯಲ್ಲಿ ನಿರರ್ಥಕವಾಗಿ ವಿಜಯಿಯಾಗುವ ತುಂಬ ವಿಚಾರ ವಿನಿಮಯಗಳ ನಂತರ ಈ ದಾರಿ ಹುಡುಕಿದ. ಸಹೋದರ ತೀರಿಹೋದ ಕಾರಣ ಅವನ ವಿಧವೆ ನನ್ನ ವಶ ಬರುವಳು ಮತ್ತು ಅವಳಿಂದ ಮುಂದೆ ಗಂಡು ಮಗು ಆಗುವುದು ಎಂಬ ಆಶಾವಾದ ಹೊಂದಿದ್ದ. ಅದಕ್ಕೆ ಉತ್ತರವಾಗಿ ನಮ್ಮ ಪತ್ರಿಕೆ ಅನ್ವಾರುಲ್ ಇಸ್ಲಾಮಿನಲ್ಲಿ ಬರೆಯಲಾಗಿತ್ತು. ಸಹೋದರನ ಮೃತ್ಯು ಮತ್ತು ಅವರ ವೃದ್ಧ ವಿಧವೆ ವಿವಾಹದಲ್ಲಿ ಬರುವುದು ಯಶಸ್ವಿಯ ಸಂಕೇತವೇನಲ್ಲ. ಬದಲು ಅದನ್ನು ಹೇಳಿಕೊಳ್ಳುವುದೇ ನಾಚಿಕೆಯ ವಿಷಯವಾಗಿದೆ. ಆ ವೃದ್ಧೆ ತನ್ನ ಯೌವನದ ಬಹು ಭಾಗ ಕಳೆದುಕೊಂಡಿದ್ದಳು. ಅವಳನ್ನು ವಿವಾಹ ಮಾಡಿಕೊಂಡು ವಿನಾಕಾರಣ ಅಬ್ದುಲ್ ಹಖ್ ಅವಳ ಖರ್ಚು ತನ್ನ ಕೊರಳಿಗೆ ಹಾಕಿಕೊಂಡರು. ಈಗ ಅರ್ಥವಾಗಿರಬೇಕು. ಅಂತಹ ನಿಷ್ಪ್ರಯೋಜಕ ವಿವಾಹದಿಂದ ದು:ಖ ಪಡೆದನೋ ಅಥವಾ ಸಂತೋಷ, ಉಳಿದ ವಿಷಯ ಗಂಡು ಮಗು ಆಗುವುದು, ಇಲ್ಲಿಯವರೆಗೂ ಅಬ್ದುಲ್ ಹಖ್ ಯಾವ ಪತ್ರಿಕೆಯೂ ಹೊರಡಿಸಲಿಲ್ಲ. ಬಹುಶಃ ಅದು ಹೊಟ್ಟೆಯ ಒಳಗೆಯೇ ಕಳೆದು ಹೊಯೀತೇನು? ಅಥವಾ ಖುರ್‌ಆನ್ ವಚನದನ್ವಯ ಹೆಣ್ಣು ಮಗು ಆಗಿ ಮುಖ ಕಪ್ಪಿಟ್ಟಿತ್ತೇನು? ಆದರೆ ನಮಗೆ ಅಲ್ಲಾಹನು ಅಬ್ದುಲ್ ಹಖ್ವ್‌ನ ವಾಚಾಳಿತನದ ಉತ್ತರವಾಗಿ ಸುವಾರ್ತೆ ನೀಡಿದ್ದನು. ಒಂದು ಗಂಡು ಮಗು ನೀಡಲಾಗುವುದು. ಅದನ್ನು ನಾವು ಅದೇ ಪತ್ರಿಕೆ ಅನ್ವಾರುಲ್

*(ಪುಟ 10 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

**ಅನಾನುಕೂಲ ಪರಿಸ್ಥಿತಿಯಲ್ಲಿ ನಿಸ್ವಾರ್ಥವಾಗಿ ಸೇವೆ ಸಲ್ಲಿಸಿದ ಎಲ್ಲ ಕಾರ್ಯಕರ್ತರಿಗೆ ನಾನು ಕೃತಜ್ಞತೆ ಅರ್ಪಿಸುತ್ತೇನೆ.**

**ಜಲ್ಸ ಸಾಲಾನ ಬ್ರಿಟನ್ 2021ರ ಬಗ್ಗೆ ಲೋಕದ ವಿವಿಧ ದೇಶಗಳಿಂದ ಜಲ್ಸದ ಬಗ್ಗೆ ಅಭಿಪ್ರಾಯಗಳು ಮತ್ತು ಅದನ್ನು ಕೇಳಿದ ನಂತರ ಅದರ ಉತ್ತಮ ಪರಿಣಾಮಗಳ ಬಗ್ಗೆ ನಮ್ಮವರು ಅನ್ಯರು ಅಸಾಧಾರಣವಾಗಿ ತಮ್ಮ ಭಾವನೆಗಳನ್ನು ವ್ಯಕ್ತಪಡಿಸಿದ್ದಾರೆ ಅದರ ಪ್ರಸ್ತಾವನೆ**

**ಈ ವರ್ಷ ಪ್ರಥಮ ಸಾರಿ ಲೈವ್ ಸ್ಟ್ರೀಮಿಂಗ್ ಮುಖಾಂತರ ವಿವಿಧ ಜಮಾಅತ್‌ಗಳು ತಮ್ಮ ಸ್ಥಳಗಳಲ್ಲಿಯೇ ಕುಳಿತುಕೊಂಡು ಜಲ್ಸದಲ್ಲಿ ಭಾಗವಹಿಸಿದುವು.**

**ಅಲ್ಲಾಹನ ಅನುಗ್ರಹದಿಂದ ಎಂ.ಟಿ.ಎ. ಆಫ್ರಿಕದೊಂದಿಗೆ ಬೇರೆ ಸ್ಥಳೀಯ ಟಿವಿ ಚ್ಯಾನಲ್‌ಗಳು ಸಹ ಜಲ್ಸದ ಕಾರ್ಯಕ್ರಮಗಳನ್ನು ಪ್ರಸಾರ ಮಾಡಿದುವು.**

**ಅಲ್ಲಾಹನು ಈ ಜಲ್ಸದ ದೂರಗಾಮಿ ಪರಿಣಾಮಗಳನ್ನು ಉಂಟುಮಾಡುವವನಾಗಲಿ. ಸಾತ್ವಿಕ ಆತ್ಮಗಳನ್ನು ಹೊಂದಿದ ಜನರು ಅಹ್ಮದಿಯ್ಯತ್ ಎಂಬ ನೈಜ ಇಸ್ಲಾಮ್ ಕಡೆಗೆ ಮೊದಲಿಗಿಂತ ಮಿಗಿಲಾಗಿ ಗಮನಸುವವರಾಗಲಿ.**

**ಜಲ್ಸ ನೋಡಿದ ಮತ್ತು ಖ಼ಲೀಫತುಲ್ ಮಸೀಹರ ಭಾಷಣಗಳನ್ನು ಕೇಳಿದ ನಂತರ ನಮ್ಮ ಕುಟುಂಬದಲ್ಲಿ ಖ಼ಿಲಾಫತಿನೊಂದಿಗೆ ಪ್ರೀತಿಯ ಒಂದು ಹೊಸ ಚೈತನ್ಯ ಸೃಷ್ಟಿಯಾಗಿದೆ.**

**ಜಲ್ಸದ ಮೂರು ದಿನಗಳು ನಮಗೆ ಹಬ್ಬವಾಗಿತ್ತು. ಅಲ್ಲಿ ನಾವು ಅಲ್ಲಾಹನು ಅನುಗ್ರಹಗಳು ಇಳಿಯುತ್ತಿರುವುದನ್ನು ಮತ್ತು ಹಝ್ರ಼ತ್ ಮಸೀಹ್ ಮೌಊದ್‌ರೊಡನೆ ಅಲ್ಲಾಹನು ಮಾಡಿದ ವಾಗ್ದಾನಗಳು ಈಡೇರುತ್ತಿರುವುದನ್ನು ನೋಡಿದೆವು.**

**ಈ ವರ್ಷ ಎಂ.ಟಿ.ಎ. ಆಫ್ರಿಕ, ಎಂ.ಟಿ.ಎ ಘಾನವಲ್ಲದೇ ಜಲ್ಸದ ಕಾರ್ಯಕ್ರಮಗಳನ್ನು ಘಾನದ ಇತರ ಮೂರು ಟಿ.ವಿ. ಚಾನಲ್‌ಗಳಲ್ಲೂ ನೋಡಬಹುದಾಗಿತ್ತು.**

**ಜಲ್ಸದ ಒಂದು ಮುಖ್ಯ ಸಂಗತಿ ಅಹ್ಮದಿಯ ಜಮಾಅತಿನ ಇಮಾಮಿನ ಭಾಷಣಗಳಾಗಿವೆ. ಜಮಾಅತಿನ ಖ಼ಲೀಫ ಪ್ರತಿಯೊಂದು ಮಾತನ್ನು ಪವಿತ್ರ ಖುರ್‌ಆನ್ ಮತ್ತು ಹದೀಸಿನಿಂದ ಹೇಳುತ್ತಾರೆ. ಅದು ನನ್ನ ಹೃದಯವನ್ನು ಬಹಳ ಪ್ರಭಾವಿತಗೊಳಿಸಿತು. ಖಂಡಿತವಾಗಿಯೂ ಈ ಜಮಾಅತ್ ಮತ್ತು ಖ಼ಲೀಫ ಅಲ್ಲಾಹನ ಕಡೆಯಿಂದಾಗಿದೆ.**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **13–08–2021** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ - بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعٰلَمِيْنَ ۔ اَلرَّحْمٰنِ الرَّحِيْمِ ۔ مٰلِكِ يَوْمِ الدِّيْنِ ۔

اِيَّاكَ نَعْبُدُ وَاِيَّاكَ نَسْتَعِيْنُ ۔ اِهْدِنَا الصِّرَاطَ الْمُسْتَقِيْمَ ۔

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ۔

ಅಲ್‌ಹಮ್‌ದುಲಿಲ್ಲಾಹ್ ಬ್ರಿಟನಿನ ಜಲ್ಸಾ ಸಾಲಾನ ಎರಡು ವರ್ಷಗಳ ನಂತರ ಕಳೆದ ಶುಕ್ರವಾರ ದಿನ ಪ್ರಾರಂಭವಾಗಿ ಮೂರು ದಿನಗಳ ತನಕ ತನ್ನ ಆಧ್ಯಾತ್ಮಿಕ ಪರಿಸರದ ದೃಶ್ಯಗಳನ್ನು ತೋರಿಸುತ್ತಾ ಕಳೆದ ರವಿವಾರ ಮುಕ್ತಾಯವಾಯಿತು. ಕೊರೋನ ರೋಗದ ಕಾರಣದಿಂದ 2020ರಲ್ಲಿ ಜಲ್ಸ ನಡೆಯಲಿಲ್ಲ. ಕೊರೋನ ರೋಗದ ಹಾವಳಿಯ ಕಾರಣದಿಂದ ಈ ವರ್ಷ ಸಹ ಪರಿಸ್ಥಿತಿಗಳು ಅನುಕೂಲವಾಗಿರಲಿಲ್ಲ. ಈ ವರ್ಷ ಸಹ ಜಲಸ ಸಮಾವೇಶ ನಡೆಸಲು ಸಾಧ್ಯವಾಗದೆಂದು ವ್ಯವಸ್ಥಾಪಕರು ಭಾವಿಸುತ್ತಿದ್ದರು. ಈ ಭಾವನೆಯ ಕಾರಣದಿಂದ ತಯಾರಿಯ ಕಡೆಗೆ ಗಮನವಿರಲಿಲ್ಲ. ಇನ್‌ಶಾ ಅಲ್ಲಾಹ್ ಈ ವರ್ಷ ಜಲ್ಸ ನಡೆಸಲಾಗುವುದೆಂದು ಅವರೊಂದಿಗೆ ಹೇಳಲಾದಾಗ ಅವರು ತಯಾರಿ ಶುರು ಮಾಡಿದರು. ಅದರ ಬಗ್ಗೆ ನಾನು ಕಳೆದ ಖುತ್‌ಬದಲ್ಲಿ ಹೇಳಿದ್ದೆ. ಆದರೆ ಪೂರ್ಣ ಶ್ರದ್ಧೆಯಿಂದ ತಯಾರಿ ಮಾಡುತ್ತಿಲ್ಲವೆಂದು ನನಗೆ ಅನಿಸುತ್ತಿತ್ತು. ವ್ಯವಸ್ಥಾಪಕರು ಹೀಗೆ ರಿಲೇಕ್ಸ್ ಆದರೆ ಸ್ವಯಂಸೇವಕರು ಸಹ ಹೀಗೆ ಇರಬಹುದು ಎಂದು ನನಗೆ ಚಿಂತೆಯಿತ್ತು. ಆದರೆ ಅಲ್ಲಾಹನು ಜಲ್ಸದ ಏರ್ಪಾಡು ಇನ್‌ಶಾ ಅಲ್ಲಾಹ್ ಉತ್ತಮ ರೀತಿಯಲ್ಲಿ ಮಾಡುವನು ಮತ್ತು ಕೆಲಸ ಮಾಡುವವರು ಸಹ ಲಭಿಸುವುದು ಎಂದು ಅಲ್ಲಾಹನಲ್ಲಿ ಭರವಸೆಯೂ ಇತ್ತು. ಹೇಗಿದ್ದರೂ ನನ್ನ ಜಲ್ಸದ ವ್ಯವಸ್ಥೆ ಮಾಡುವವರು ಜಲ್ಸ ಜರಗಿಸಲು ಪ್ರಾರಂಭಿಸಿದರೂ ಅವರು ಪೂರ್ಣವಾದ ಆತ್ಮಸಂತೃಪ್ತಿಯಿಂದ ಸಿದ್ಧತೆಗಳನ್ನು ಮಾಡುತ್ತಿರಲಿಲ್ಲ. ಆದುದರಿಂದ ಒಂದು ಸಂದರ್ಭದಲ್ಲಿ ನಾನು ಕಟುವಾಗಿ ಹೇಳಬೇಕಾಯಿತು. ಜಲ್ಸ ಜರಗುವುದೋ ಇಲ್ಲವೋ ಎಂದು ಯೋಚಿಸಿ ನೀವು ಹೃತ್ಪೂರ್ವಕವಾಗಿ ಕೆಲಸವನ್ನು ಮಾಡುವುದಿಲ್ಲವಾದರೆ ನಾನು ಜಲ್ಸ ಜರಗಿಸಲು ಹೊಸ ವ್ಯವಸ್ಥಾಪಕರನ್ನು ನೇಮಿಸುತ್ತೇನೆ. ನನ್ನ ಈ ಮಾತುಗಳು ಅವರನ್ನು ಬಡಿದೆಬ್ಬಿಸಿದುವು. ಅವರು ವೇಗವಾಗಿ ಕೆಲಸ ಮಾಡಲು ತೊಡಗಿದರು. ಲೇಟಾಗಿ ಶುರುವಾದರೂ ಕೂಡ. ಕಾರ್ಯಕರ್ತರು ಜಲ್ಸದ ವಾಸ್ತವಿಕ ಕಾರ್ಯ ನಿರ್ವಾಹಕರಾಗಿದ್ದಾರೆ. ಅವರೇ ಮುಖ್ಯ ಶಕ್ತಿ. ಅವರು ಸೇವೆ ಮಾಡಲು ಬಹಳ ಆಸಕ್ತರಾಗಿದ್ದರೆಂದು ತೋರುತ್ತದೆ. ಪ್ರತಿಯೊಂದು ಕಡೆಯಿಂದಲೂ ಸ್ವಯಂ ಸೇವಕರು ದೊರಕಲು ಪ್ರಾರಂಭವಾಯಿತು. ಜಲ್ಸದ ಸಮಯದಲ್ಲಿ ಡ್ಯೂಟಿ ಮಾಡುವವರ ಸಾಲು ಉಂಟಾಯಿತು. ಆದರೆ ಜಲ್ಸ ಚಿಕ್ಕ ಪ್ರಮಾಣದಲ್ಲಿ ಜರಗಿಸಲು ನಿಶ್ಚಯಿಸಿರುವುದರಿಂದ ಅಪೇಕ್ಷೆ ಸಲ್ಲಿಸಿದ ಸ್ವಯಂ ಸೇವಕರಿಂದ ಕಾರ್ಯಕರ್ತರನ್ನು ಹೇಗೆ ಆಯ್ಕೆ ಮಾಡುವುದು ಎಂಬ ಸಮಸ್ಯೆ ಎದ್ದಿತ್ತು. ಹೇಗಿದ್ದರೂ ಅದಕ್ಕಾಗಿ ಪುರುಷರು ಮತ್ತು ಲಜ್ನದವರೂ ಸೇವಕರನ್ನು ಆಯ್ಕೆ ಮಾಡಿದರು. ಲಜ್ನದವರು ಡ್ಯೂಟಿಗಾಗಿ ಐದನೇ ಭಾಗದಷ್ಟು ಸೇವಕರನ್ನು ತೆಗೆದರು. ಪುರುಷರು ಮೂರನೇ ಭಾಗದಷ್ಟು ತೆಗೆದರು. ಸೇವೆ ಮಾಡುವ ಸಂದರ್ಭ ಸಿಗಲಿಲ್ಲವೆಂದು ಕೆಲವರು ನಿರಾಶೆಗೊಂಡರು. ಇಲ್ಲಿ ಮೊತ್ತಮೊದಲು ನಾನು ಈ ಎಲ್ಲ ಪುರುಷರೊಡನೆ, ಸ್ತ್ರೀಯರೊಡನೆ, ಹುಡುಗ ಹುಡುಗಿಯರು ಮತ್ತು ಮಕ್ಕಳೊಡನೆ ಹೇಳಬಯಸುತ್ತೇನೆ: ಅಲ್ಲಾಹನು ನಮ್ಮ ಉದ್ದೇಶಗಳ ಪ್ರಕಾರ ಪ್ರತಿಫಲವನ್ನು ನೀಡುತ್ತಾನೆ. ಹಝ್ರ಼ತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಅತಿಥಿಗಳನ್ನು ಸೇವೆ ಮಾಡುವ ನಿಮ್ಮ ಸದುದ್ದೇಶ ಈಡೇರಿದೆ. ನಿಮಗೆ ಸೇವೆ ಮಾಡಲು ಸಂಧರ್ಭ ಸಿಗದಿದ್ದರೂ ಅಲ್ಲಾಹನು ನಿಮ್ಮ ಸದುದ್ದೇಶದ ಕಾರಣದಿಂದ ನಿಮಗೆ ಪ್ರತಿಫಲವನ್ನು ನೀಡುವನು. ಹೇಗಿದ್ದರೂ ಅಲ್ಲಾಹನು ಅವರ ಸೇವೆಯ ಆವೇಶಕ್ಕಾಗಿ ಉತ್ತಮ ಪ್ರತಿಫಲವನ್ನು ನೀಡಲಿ.

ಎರಡನೆಯದಾಗಿ, ಜಲ್ಸ ಮುಕ್ತಾಯಗೊಂಡ ನಂತರದ ಪ್ರಥಮ ಜುಮುಅದಲ್ಲಿ ಜಲ್ಸದ ಕಾರ್ಯಕರ್ತರಿಗೂ ಸ್ವಯಂ ಸೇವಕರಿಗೂ ಕೃತಜ್ಞತೆಯನ್ನು ನನ್ನ ರೂಢಿ ಪ್ರಕಾರ ಅರ್ಪಿಸುತ್ತೇನೆ. ಲೋಕದಾದ್ಯಂತ ಜನರು ನನಗೆ ಪತ್ರಗಳನ್ನು ಬರೆದು ಸ್ವಯಂ ಸೇವಕರಿಗೆ ಕೃತಜ್ಞತೆ ಅರ್ಪಿಸುತ್ತಿದ್ದಾರೆ. ಒಂದು ಸಂದರ್ಭದಲ್ಲಿ ಮಳೆಯ ಕಾರಣದಿಂದ ಪಾರ್ಕಿಂಗ್‌ನಿಂದ ಕಾರುಗಳನ್ನು ಎತ್ತುವುದೇ ದೊಡ್ಡ ಸಮಸ್ಯೆಯಾಗಿತ್ತು. ಅಲ್ಲಿ ಸ್ವಯಂಸೇವಕರು ಅಸಾಧಾರಣವಾಗಿ ಕೆಲಸ ಮಾಡಿದರು. ಕಾರುಗಳನ್ನು ಕೆಸರಿನಿಂದ ಎತ್ತಿ ಹೊರಗೆ ಹಾಕಲಾಯಿತು. ಈ ಕೆಲಸದಲ್ಲಿ ಕೆಲವು ಬಾರಿ ಇತರ ವಿಭಾಗಗಳ ಸೇವಕರು ಸಹ

ಭಾಗಿಯಾಗುತ್ತಿದ್ದರು. ಹೇಗಿದ್ದರೂ ಪಾರ್ಕಿಂಗಿನ ಈ ಅವಸ್ಥೆಯನ್ನು ಕಂಡು ಬೇರೆ ಜಾಗದಲ್ಲಿ ಪಾರ್ಕಿಂಗಿನ ವ್ಯವಸ್ಥೆ ಮಾಡಲಾಗಿತ್ತು. ಹೇಗಿದ್ದರೂ ಮೊದಲ ಮತ್ತು ಎರಡನೇ ದಿನಗಳಲ್ಲಿ ಬಂದಿದ್ದ ಕಾರುಗಳನ್ನು ಅಲ್ಲಿಂದ ತೆಗೆಯುವುದು ಬಹಳ ದೊಡ್ಡ ಸಮಸ್ಯೆಯಾಗಿತ್ತು. ಈ ಕಷ್ಟವನ್ನು ಕ್ಯಾಮೆರದ ಕಣ್ಣುಗಳು ನೋಡಿದುವು. ವಾಹನಗಳನ್ನು ಕೆಸರಿನಿಂದ ಎತ್ತುವಾಗ ಕಾರ್ಯಕರ್ತರು ಮತ್ತು ಸ್ವಯಂ ಸೇವಕರು ಕೆಸರಿನಿಂದ ಆವೃತರಾದುದನ್ನು ಎಂ.ಟಿ.ಎ. ಮೂಲಕ ಲೋಕದಾದ್ಯಂತ ಜನರು ನೋಡಿದರು. ಸೇವಾ ನಿರತರ ಈ ಮನೋಭಾವದ ಬಗ್ಗೆ ನಮ್ಮವರು ಮತ್ತು ಅನ್ಯರು ಬಹಳ ಆಶ್ಚರ್ಯವನ್ನು ಪ್ರಕಟಿಸಿದರು.

ಅದೇ ರೀತಿಯಲ್ಲಿ ನೈರ್ಮಲ್ಯ ವಿಭಾಗ, ಆಹಾರ ಸರಬರಾಜು, ಆಹಾರ ಬೇಯಿಸುವಿಕೆ ಮತ್ತು ಜಲ್ಸದ ಅತ್ಯಂತ ಮಹತ್ವಪೂರ್ಣವಾದ ಕೆಲಸವಾದ ಮಾರ್ಕಿಗಳ (ಡೇರೆಗಳ) ನಿರ್ಮಾಣ, ರಸ್ತೆ ನಿರ್ಮಾಣ ಮೊದಲಾದ ಕೆಲಸಗಳನ್ನು ಮಾಡಲು ಸ್ವಯಂ ಸೇವಕರು ನಿರಂತರವಾಗಿ ಅನೇಕ ವಾರಗಳ ಕಾಲ ಆಗಮಿಸುತ್ತಾ ಇದ್ದರು. ಈಗ ಜಲ್ಸದ ವ್ಯವಸ್ಥೆಯನ್ನು ಮುಕ್ತಾಯಗೊಳಿಸಲು ಸಹ ಅನೇಕ ದಿನಗಳ ಕಾಲ ಸ್ವಯಂ ಸೇವಕರು ಕಾರ್ಯನಿರತರಾಗಬೇಕಾಗುತ್ತದೆ. ಎಂ.ಟಿ.ಎ. ಬಹಳ ಪರಿಶ್ರಮಪಟ್ಟು ಕಾರ್ಯಕ್ರಮಗಳನ್ನು ಚಿತ್ರಿಸಿದರು. ಅವರು ಜಲ್ಸವನ್ನು ತೋರಿಸಿದರಲ್ಲದೆ ವಿವಿಧ ದೇಶಗಳಲ್ಲಿ ಜನರು ಜಮಾಯಿಸಿ ಜಲ್ಸದ ಕಾರ್ಯಕ್ರಮಗಳನ್ನು ವೀಕ್ಷಿಸುವುದನ್ನು ಸಹ ತೋರಿಸಿ ಅವರು ವೈಭವಶಾಲಿ ಅಂತರ್ರಾಷ್ಟ್ರೀಯ ಭವನದ ಚಿತ್ರ ಪ್ರದರ್ಶಿಸಿದರು. ಹೀಗೆ ಅನಾನುಕೂಲ ಪರಿಸ್ಥಿತಿಯಲ್ಲಿ ನಿಸ್ವಾರ್ಥವಾಗಿ ಸೇವೆ ಸಲ್ಲಿಸಿದ ಎಲ್ಲ ಕಾರ್ಯಕರ್ತರಿಗೆ ನಾನು ಕೃತಜ್ಞತೆ ಅರ್ಪಿಸುತ್ತೇನೆ. ಕಾರ್ಯಕರ್ತರಿಗೆ ಕೃತಜ್ಞತೆ ಅರ್ಪಿಸಿದ ನಂತರ ನಾನು ಸಾಮಾನ್ಯವಾಗಿ ವಿವರಿಸುವ ವಿಷಯವನ್ನು ಮುಂದುವರಿಸಲು ನಾನು ಇಚ್ಛಿಸಿದ್ದೆ. ಆದರೆ ಅನೇಕ ಪತ್ರಗಳು ನನಗೆ ಬರುತ್ತಿವೆ. ಲೋಕದ ವಿವಿಧ ದೇಶಗಳಿಂದ ಜಲ್ಸದ ಬಗ್ಗೆ ಅಭಿಪ್ರಾಯಗಳು ಮತ್ತು ಅದನ್ನು ಕೇಳಿದ ನಂತರ ಅದರ ಉತ್ತಮ ಪರಿಣಾಮಗಳ ಬಗ್ಗೆ ನಮ್ಮವರು ಅನ್ಯರು ಅಸಾಧಾರಣವಾಗಿ ತಮ್ಮ ಭಾವನೆಗಳನ್ನು ವ್ಯಕ್ತಪಡಿಸಿದ್ದಾರೆ. ಎಷ್ಟು ಹೆಚ್ಚು ರಿಪೋರ್ಟ್‌ಗಳು ಮತ್ತು ಪತ್ರಗಳು ಬರುತ್ತಿವೆ ಎಂದರೆ, ಈ ವರ್ಷ ಸಹ ಎಂದಿನಂತೆ ಈ ಫೀಡ್‌ಬ್ಯಾಕ್‌ಗಳು ಮತ್ತು ಅನುಗ್ರಹಗಳ ಬಗ್ಗೆ ಇಂದಿನ ಖುತ್‌ಬದಲ್ಲಿ ಪ್ರಸ್ತಾಪಿಸಲು ನಾನು ಯೋಚಿಸಿದೆ. ಎಲ್ಲವನ್ನು ಹೇಳುವುದು ಸಾಧ್ಯವಲ್ಲ. ಕೆಲವನ್ನು ಉದಾಹರಣೆಗೆ ತೆಗೆದಿದ್ದೇನೆ.

ಈ ವರ್ಷದ ಅಪರೂಪ ರೀತಿಯ ವ್ಯವಸ್ಥೆಯಲ್ಲಿ ಜರಗಿಸಲಾದ ಜಲ್ಸವು ಅಲ್ಲಾಹನ ಅನುಗ್ರಹಗಳ ಎಂತಹ ಬಾಗಿಲುಗಳನ್ನು ತೆರೆಯಿತೆಂದರೆ ಅವುಗಳ ಬಗ್ಗೆ ಕೃತಜ್ಞತೆ ಅರ್ಪಿಸುತ್ತಾ ಅಲ್ಲಾಹನ ಮುಂದೆ ಮನುಷ್ಯನು ಬಾಗುತ್ತಾ ಇರಬೇಕಾಗಿದೆ. ಎಂತೆಂತಹ ಅನುಗ್ರಹಗಳನ್ನು ಅಲ್ಲಾಹನು ಜಮಾಅತಿನ ಮೇಲೆ ಸುರಿಸಿದನು. ಇವೆಲ್ಲ ಇದ್ದರೂ ಒಂದು ಕೊರತೆ ಬಗ್ಗೆ ಸಾಮಾನ್ಯವಾಗಿ ಜನರು ಹೇಳುತ್ತಿದ್ದಾರೆ. ಈ ವರ್ಷ ಆಲಮೀ ಬೈಅತ್ ನಡೆಯಲಿಲ್ಲ. ಅದರ ಬಗ್ಗೆ ಅವರಿಗೆ ಬಹಳ ಪ್ರತೀಕ್ಷೆ ಇತ್ತು. ಆದರೆ ಇಂತಹ ಪರಿಸ್ಥಿತಿಯಲ್ಲಿ ಆಲಮೀ ಬೈಅತ್ ವ್ಯವಸ್ಥೆ ಮಾಡುವುದು ಕಷ್ಟಕರವಾಗಿತ್ತು.

ಈಗ ನಾನು ಸಂಕ್ಷೇಪವಾಗಿ ಕೆಲವು ರಿಪೋರ್ಟ್ ಮತ್ತು ಅನಿಸಿಕೆಗಳನ್ನು ಪ್ರಸ್ತಾಪಿಸುವೆನು. ಈ ವರ್ಷ ಪ್ರಥಮ ಸಾರಿ ಲೈವ್ ಸ್ಟ್ರೀಮಿಂಗ್ ಮುಖಾಂತರ ವಿವಿಧ ಜಮಾಅತ್‌ಗಳು ತಮ್ಮ ಸ್ಥಳಗಳಲ್ಲಿಯೇ ಕುಳಿತುಕೊಂಡು ಜಲ್ಸದಲ್ಲಿ ಭಾಗವಹಿಸಿದುವು. ಇಲ್ಲಿ ಜಲ್ಸ ಗಾಹ್‌ನಲ್ಲೂ ಸ್ಕ್ರೀನಿನಲ್ಲಿ ಜನರನ್ನು ಕಾಣಬಹುದಾಗಿತ್ತು. ಯು.ಕೆ.ಯಲ್ಲಿ ಐದು ಸ್ಥಳಗಳಲ್ಲಿ ಈ ವ್ಯವಸ್ಥೆ ಮಾಡಲಾಗಿತ್ತು. ಕೆಲವು ದೇಶಗಳಲ್ಲಿ ಹಲವಾರು ಗಂಟೆಗಳ ವ್ಯತ್ಯಾಸವಿದ್ದರೂ ಅಲ್ಲಿ ಸಾಮೂಹಿಕವಾಗಿ ಜಲ್ಸವನ್ನು ಕೇಳುತ್ತಿದ್ದರು. ಯು.ಕೆ.ಯಲ್ಲದೆ ಬೇರೆ ಇಪ್ಪತ್ತೆರಡು ದೇಶಗಳ ಮೂವತ್ತೇಳು ಸ್ಥಳಗಳಲ್ಲಿ ಈ ವ್ಯವಸ್ಥೆ ಮೂಲಕ ಜನರು ಜಲ್ಸದಲ್ಲಿ ಭಾಗವಹಿಸಿದರು. ಈ ದೇಶಗಳಲ್ಲಿ ಅಮೇರಿಕ, ಕೆನಡ, ಆಸ್ಟ್ರೇಲಿಯಾ, ಇಂಡೋನೇಶಿಯಾ, ಬಂಗ್ಲಾದೇಶ, ಮೌರಿಶಸ್, ಕಬಾಬೀರ್, ಭಾರತ ಬರ್ಕಿನೋ ಫಾಸೋ, ಘಾನ, ನೈಜೀರಿಯಾ, ಗ್ಯಾಂಬಿಯಾ, ತೆನ್‌ಝಾನಿಯಾ, ಫ್ರಾನ್ಸ್, ಸ್ವಿಝರ್‌ಲೇಂಡ್, ಜರ್ಮನಿ, ಸ್ವೀಡನ್, ಬೆಲ್‌ಜಿಯಂ, ಫಿನ್‌ಲ್ಯಾಂಡ್, ಹಾಲೆಂಡ್ ಮೊದಲಾದುವು ಸೇರಿವೆ. ಒಂದು ಅಂದಾಜು ಪ್ರಕಾರ ಮಹಿಳೆಯರನ್ನು ಉದ್ದೇಶಿಸಿ ಮಾಡಿದ ಭಾಷಣವನ್ನು ಮೂವತ್ತು ಮೂವತ್ತೈದು ಸಾವಿರ ಮಹಿಳೆಯರು ನೋಡಿದರು, ಆಲಿಸಿದರು. ಹೀಗೆ ಭಾಗವಹಿಸಿದ ದೇಶಗಳಲ್ಲಿ ಅಮೇರಿಕ, ಕೆನಡ, ಗೋಯಿಟೆಮಾಲಾ, ಕೆಲವು ಕಡೆ ಎರಡು ಜಾಗಗಳಲ್ಲಿ, ಕೆಲವು ಕಡೆ ಮೂರು ಜಾಗಗಳಲ್ಲಿ, ಕೆಲವು ಕಡೆ ನಾಲ್ಕು ಜಾಗಗಳಲ್ಲಿ ಸೆಂಟರ್‌ಗಳು ಮಾಡಲಾಗಿದ್ದವು. ಗಿಯಾನಾ, ಆಸ್ಟ್ರೇಲಿಯ, ಇಂಡೋನೇಶಿಯ, ಬಾಂಗ್ಲದೇಶ, ಮೊರಿಶಿಯಸ್, ಕಬಾಬೀರ್, ಇಂಡಿಯಾ, ಬುರ್ಕಿನಾಫಾಸೋ, ಘಾನ, ನೈಜೀರಿಯ, ಗ್ಯಾಂಬಿಯ, ತನ್ಸಾನಿಯ, ಫ್ರಾನ್ಸ್, ಸ್ವಿಟ್‌ಸರ್‌ಲ್ಯಾಂಡ್, ಜರ್ಮನಿ, ಸ್ವೀಡನ್, ಬೆಲ್ಜಿಯಂ, ಫಿನ್‌ಲ್ಯಾಂಡ್, ಹಾಲೇಂಡ್, ಮುಂತಾದ ದೇಶಗಳು ಭಾಗಿಯಾಗಿದ್ದುವು.

ನೈಜೀರಿಯದಲ್ಲಿ ಒಬ್ಬ ಅಹ್ಮದಿಯೇತರ ಸಹೋದರ ಈಸಾ ಸಾಹಿಬ್ ಜಲ್ಸದ ಮೂರೂ ದಿನಗಳು ಮಿಶನ್ ಹೌಸಿನಲ್ಲಿ ನನ್ನ ಭಾಷಣಗಳನ್ನು ಕೇಳಲು ಬರುತ್ತಿದ್ದರು. ಅವರು ಹೇಳುತ್ತಾರೆ: ಅಹ್ಮದಿಯಾ ಜಮಾಅತ್ ಇಸ್ಲಾಮಿನ ವಿರೋಧಿಯೆಂದು ನಾನು ಕೇಳಿದ್ದೆ. ಅಹ್ಮದಿಯರು ಮಸೀದಿಯಲ್ಲಿ ಟಿ.ವಿ.ಯನ್ನು ಇರಿಸಿರುವರು. ಅದು ಸರಿಯಲ್ಲವೆಂದು ಕೇಳಿದ್ದೆ. ಆದರೆ ಅಹ್ಮದಿಯರು ಐಕ್ಯದಿಂದ ಇರುವ ಹಾಗೆ, ಇಸ್ಲಾಮಿನ ಸಂದೇಶವನ್ನು ತಲುಪಿಸುವ ಹಾಗೆ ಮುಸ್ಲಿಮ್ ಲೋಕವು ಇರುತ್ತಿದ್ದರೆ, ಮುಸ್ಲಿಮರು ಎಷ್ಟು ಶಕ್ತವಾಗುತ್ತಿದ್ದರು ಎಂದರೆ ಲೋಕದ ಯಾವುದೇ ಶಕ್ತಿ ಇಸ್ಲಾಮಿನ ವಿರುದ್ಧ ಮಾತು ಎತ್ತುತ್ತಿರಲಿಲ್ಲ ಎಂದು ಜಲ್ಸವನ್ನು ನೋಡಿದ ನಂತರ ಗೊತ್ತಾಯಿತು. ನಾನು ಜಲ್ಸದಲ್ಲಿ ನೋಡಿದ ಅಹ್ಮದಿಯಾ ಜಮಾಅತಿನ ಐಕ್ಯ ಮತ್ತು ಒಗ್ಗಟ್ಟು ನನ್ನ ದೃಷ್ಟಿಯಲ್ಲಿ ಸತ್ಯದ ಒಂದು ಪುರಾವೆಯಾಗಿದೆ.

ಝೋಂಬಿಯದಲ್ಲಿ ಅಹ್ಮದಿಯರು, ನವ ಅಹ್ಮದಿಯರು ಅಲ್ಲದೇ ಕೆಲವು ಅಹ್ಮದಿಯೇತರ ಸಹೋದರರು ಸಹ ಜಲ್ಸವನ್ನು ನೋಡಿದ್ದರು. ಅಲ್ಲಿ ಒಂದು ಜಾಗದಲ್ಲಿ 35 ಅಹ್ಮದಿಯೇತರರು ಒಟ್ಟು ಸೇರಿದ್ದರು. ಒಬ್ಬ ಕ್ರೈಸ್ತ ಟೀಚರ್ ಜಲ್ಸದ ಕಾರ್ಯಕ್ರಮಗಳನ್ನು ನೋಡಿ ಆಲಿಸಿಕೊಂಡು ಹೀಗೆ ಅಭಿಪ್ರಾಯಪಟ್ಟರು: ಜಲ್ಸದ ಪ್ರೋಗ್ರಾಮ್‌ಗಳಿಂದ ಬಹಳ ಆನಂದಗೊಂಡೆನು. ನನಗೆ ಇಸ್ಲಾಮಿನ ಅಧ್ಯಾಪನೆಗಳ ಬಗ್ಗೆ ಗೊತ್ತಾಯಿತು. ಇಸ್ಲಾಮೇ ಸತ್ಯ ಧರ್ಮವಾಗಿದೆ ಎಂದು ನನ್ನ ಬುದ್ಧಿ ಮತ್ತು ವಿವೇಕದ ಪ್ರಕಾರ ನನಗೆ ಈಗ ಗೊತ್ತಾಗಿದೆ. ನಿರ್ಗತಿಕರ ಸಹಾಯ ಮಾಡುವ ಇಂತಹ ಧರ್ಮ ಬೇರೆ ಇಲ್ಲ. ನನಗೆ ಬಹಳಷ್ಟು ಕಲಿಯಲು ಸಾಧ್ಯವಾಯಿತು.

ಗೇಬೂನಿನ ಮುಬಲ್ಲಿಗ್ ಇಂಚಾರ್ಜ್ ಬರೆಯುತ್ತಾರೆ: ಅಹ್ಮದಿಯೇತರ ಪೊಲೀಸ್ ಆಫೀಸರ್ ತನ್ನ ಪತ್ನಿಯೊಂದಿಗೆ ಜಲ್ಸವನು ಆಲಿಸಲು ಬಂದಿದ್ದರು. ಮೊದಲು ಜಮಾಅತಿನ ಬಗ್ಗೆ ಹೆಚ್ಚು ಅಭಿರುಚಿಯಿರಲಿಲ್ಲ. ಆದರೆ ಜಲ್ಸದಲ್ಲಿ ಒಬ್ಬ ಲಬನಾನಿ ನವ ಅಹ್ಮದಿಯ ಅಹ್ಮದಿಯ್ಯತ್ ಸ್ವೀಕಾರದ ಘಟನೆಯನ್ನು ಕೇಳಿದ ನಂತರ, ಜಲ್ಸದ ನಂತರವೂ ಹೇಗೆ ಎಂ.ಟಿ.ಎ.ಯನ್ನು ನೋಡಬಹುದು ಎಂದು ಕೇಳಿದರು. ಯೂಟ್ಯೂಬ್ ಮೂಲಕವೂ ಎಂ.ಟಿ.ಎ. ನೋಡಬಹುದು ಎಂದು ಅವರೊಡನೆ ಹೇಳಲಾಯಿತು. ಆಗ ಅವರು ಆಗಲೇ ಮೊಬೈಲ್ ತೆಗೆದುಕೊಂಡು ಎಂ.ಟಿ.ಎ. ಫ್ರಂಚ್ ಚ್ಯಾನಲ್ ತೆಗೆದರು ಮತ್ತು ಜಲ್ಸವನ್ನು ನೋಡಲು ಶುರುಮಾಡಿದರು. ಈಗ ನಾನು ಈ ಚ್ಯಾನಲಿನ ಮೂಲಕ ಅಹ್ಮದಿಯಾ ಜಮಾಅತಿನ ಬಗ್ಗೆ ಹೆಚ್ಚು ಕಲಿಯುವೆನು.

ನೈಜೀರಿಯದಿಂದ ಒಬ್ಬ ಅಹ್ಮದಿಯೇತರ ಸಹೋದರ ಜಲ್ಸದ ಕಾರ್ಯಕ್ರಮಗಳನ್ನು ಆಲಿಸಿದ ನಂತರ ಹೇಳಿದರು: ಲೋಕದಲ್ಲಿ ಯಾವುದಾದರೂ ಸತ್ಯ ವಿಭಾಗವಿದ್ದರೆ ಅದು ಅಹ್ಮದಿಯಾ ಜಮಾಅತ್ ಮಾತ್ರವಾಗಿದೆ ಎಂದು ನನಗೆ ದೃಢವಿಶ್ವಾಸ ಬಂದಿದೆ. ನಾನು ಬೇಗನೇ ಇದರಲ್ಲಿ ಪ್ರವೇಶಿಸುತ್ತೇನೆ. ಒಬ್ಬ ಅಹ್ಮದಿಯೇತರ ಸಹೋದರ ಜಲ್ಸದ ಕುರಿತು ತನ್ನ ಅನಿಸಿಕೆಯಲ್ಲಿ ಹೀಗೆ ಹೇಳಿದರು: ಖಂಡಿತವಾಗಿಯೂ ಇದು ಸತ್ಯವಂತರ ಜಮಾಅತ್ ಆಗಿದೆ. ಸತ್ಯವಿಶ್ವಾಸಿಗಳ ಜಮಾಅತ್ ಆಗಿದೆ. ತೀವ್ರ ಮಳೆಯಲ್ಲೂ ಸ್ವಯಂಸೇವಕರು ತಮ್ಮ ಕೆಲಸಗಳಲ್ಲಿ ನಿರತರಾಗಿರುವುದನ್ನು ನಾನು ನೋಡಿದೆ. ಅವರು ಅತಿಥಿಗಳಿಗೆ ಸೌಲಭ್ಯವನ್ನು ಒದಗಿಸುತ್ತಿದ್ದರು. ಅದೇ ರೀತಿಯಲ್ಲಿ ನಾನು ಸ್ತ್ರೀಯರಿಗೆ ನೀಡಿದ ಭಾಷಣವನ್ನು ಕೇಳಿ ಪ್ರಭಾವಿತನಾದೆ.

ಜಪಾನಿನ ಮುಬಲ್ಲಿಗ್ ಇಂಚಾರ್ಜ್ ಬರೆಯುತ್ತಾರೆ: ಹಿರೋಶೀಮಾದ ಒಬ್ಬ ಅಹ್ಮದಿಯೇತರ ಜಪಾನಿ ವ್ಯಕ್ತಿ ಮುಶೀಮಾ ಓಸಾಮೂ ಅವರು ಹೇಳಿದರು: ನಾನು ಜಲ್ಸ ಸಹ ನೋಡುತ್ತಿದ್ದೇನೆ. ಈ ದಿನ ಅಗಸ್ಟ್ ದಿನಾಂಕ 6ರಂದು ಖುತ್‌ಬ ಆಲಿಸಿದೆ. ಆಗ ಅಹ್ಮದಿಯಾ ಜಮಾಅತ್ ಜಪಾನಿಗೆ ಸಲ್ಲಿಸಿದ ಸೇವೆ ನನ್ನ ನೆನಪಿಗೆ ಬಂತು. ಯಾವ ರೀತಿಯಲ್ಲಿ ಜಮಾಅತಿನ ಎರಡನೇ ಖಲೀಫರು ಜುಮಾದ ದಿನವೇ ಆಗಸ್ಟ್ 10ರಂದು 1945ರಲ್ಲಿ ಹಿರೋಶಿಮದ ಅಣುಬಾಂಬಿನ ವಿನಾಶದ ಬಗ್ಗೆ ಶಬ್ದವೆತ್ತಿದ್ದರು. ಈ ಶಬ್ದವು ಹಿರೋಶಿಮದ ಪರವಾಗಿ ಎತ್ತಲಾದ ಮೊದಲ ಶಬ್ದಗಳಲ್ಲಿ ಒಂದಾಗಿತ್ತು. ಅನಂತರ ಈಗಿನ ಖಲೀಫರು ಹಿರೋಶಿಮಗೆ ಬಂದರು. ಆ ಸಂದರ್ಭದಲ್ಲು ಶಾಂತಿ ಮತ್ತು ಸಮಾಧಾನದ ಸಂದೇಶ ನನಗೆ ವಿಶೇಷ ಸಂಗತಿಯಾಗಿದೆ. ಇಂದು ಹಿರೋಶಿಮದ ದಿನದ ಸಂದರ್ಭದಲ್ಲಿ ಎಂ.ಟಿ.ಎ. ನೋಡುವಾಗ ನನ್ನ ಬಯಕೆಯೇನೆಂದರೆ, ಎಂ.ಟಿ.ಎ. ಆಫ್ರಿಕದ ಹಾಗೆ ಎಂ.ಟಿ.ಎ. ಜಪಾನ್ ಸಹ ಬೇಗನೇ ಸ್ಥಾಪಿತವಾಗಲಿ. ಲೋಕವನ್ನು ಒಂದು ವೇದಿಕೆಯಲ್ಲಿ ಒಗ್ಗೂಡಿಸಲು ಮತ್ತು ಶಾಂತಿ ಮತ್ತು ಸಂರಕ್ಷಣೆಗೋಸ್ಕರ ಅಹ್ಮದಿಯಾ ಜಮಾಅತಿನ ವರ್ತನೆ ಎಷ್ಟು ಮಹತ್ವಪೂರ್ಣವಾಗಿದೆ ಎಂದು ಇಂದಿನ ಜಲ್ಸದ ಪರಿಸರ ಮತ್ತು ಲೋಕದ ವಿವಿಧ ಸ್ಥಳಗಳಲ್ಲಿ ಜನರು ಜಮಾಯಿಸಿದುದನ್ನು ಕಂಡಾಗ ನನ್ನ ಹೃದಯದಲ್ಲಿ ಭಾವನೆ ಪ್ರಕಟವಾಯಿತು.

ಝಾಂಬಿಯದ ಒಬ್ಬ ಕ್ರೈಸ್ತ ಅಧ್ಯಾಪಕ ಜಲ್ಸದ ಕಾರ್ಯಕ್ರಮಗಳನ್ನು ಆಲಿಸಿ ಹೇಳಿದರು: ಇಂದು ನಾವು ನಿಮ್ಮ ಖಲೀಫರಿಂದ ಒಂದು ಸಂಗತಿ ಕಲಿತೆವು. ಇಸ್ಲಾಮಿನಲ್ಲಿ ಸ್ತ್ರೀಯರಿಗೆ ಅಭಿಪ್ರಾಯ ಸ್ವಾತಂತ್ರ್ಯದ ಪೂರ್ಣ ಹಕ್ಕನ್ನು ನೀಡಿದೆ. ಇಸ್ಲಾಂ ಸ್ತ್ರೀಯರಿಗೆ ವಿವಾಹದ ವಿಷಯದಲ್ಲಿ ತನ್ನ ಇಷ್ಟದ ಜೋಡಿಯನ್ನು ಆಯ್ಕೆ ಮಾಡಲು ಹಕ್ಕು ನೀಡಿದೆ. ಆದರೆ ಕೆಲವು ಸಮುದಾಯದಲ್ಲಿ ಒತ್ತಾಯಪೂರ್ವಕವಾಗಿ ವಿವಾಹಗಳನ್ನು ಮಾಡಿಸಲಾಗುತ್ತವೆ. ಮನುಷ್ಯನ ಹಕ್ಕುಗಳ ಬಗ್ಗೆ ಗಮನವಹಿಸಲಾಗುವುದಿಲ್ಲ. ಸ್ತ್ರೀಯರ ಹಕ್ಕುಗಳ

ಬಗ್ಗೆ ಒತ್ತುಕೊಡುವ ಧರ್ಮ ಇಸ್ಲಾಂ ಮಾತ್ರವಾಗಿದೆ. ಇಸ್ಲಾಂ ಧರ್ಮ ಪುರುಷನಿಗೆ ಒಂದಕ್ಕಿಂತ ಹೆಚ್ಚು ವಿವಾಹ ಮಾಡಲು ಅನುಮತಿ ನೀಡುತ್ತದೆ. ಅಲ್ಲಿ ನ್ಯಾಯವನ್ನು ಪಾಲಿಸಲು ಪುರುಷರಿಗೂ ತಾಕೀತು ಮಾಡಲಾಗಿದೆ. ನ್ಯಾಯ ಪಾಲಿಸಲು ಸಾಧ್ಯವಿಲ್ಲದಿದ್ದರೆ ಒಂದೇ ವಿವಾಹದಲ್ಲಿ ಸಾಕು ಮಾಡಬೇಕು. ಇದು ಬಹಳ ಸುಂದರವಾದ ಪಾಠವಾಗಿದೆ. ಅಹ್ಮದಿಯತ್ ಮಾತ್ರ ಅದನ್ನು ಎತ್ತಿ ಹಿಡಿಯುತ್ತಿದೆ.

ಅದೇ ರೀತಿ ನೈಜೀರಿಯಾದ ರೀಜನ್ ತಸಾವದಿಂದ ಒಬ್ಬ ಅಹ್ಮದಿಯೇತರ ವ್ಯಕ್ತಿಯಾದ ಮಾಮುನ್ ಗಾಲಿ ಸಾಹಿಬ್ ಹೇಳುತ್ತಾರೆ: ಇದು ನನ್ನ ಮೊದಲ ಅವಕಾಶವಾಗಿತ್ತು. ನಾನು ಬಹಳ ಪ್ರಭಾವಿತನಾಗಿದ್ದೇನೆ. ಈ ಮಾದರಿಯನ್ನು ಇತರ ಮುಸ್ಲಿಂ ವಿಭಾಗದವರು ಸಹ ಅನುಸರಿಸಿದರೆ ಖಂಡಿತವಾಗಿಯೂ ಲೋಕದಲ್ಲಿ ಮುಸ್ಲಿಮರು ಪ್ರಗತಿಯ ಮಜಲುಗಳನ್ನು ದಾಟುವರು. ನೈಜೀರಿಯಾದ ಒಬ್ಬ ಇಂಜಿನಿಯರ್ ಆದ ಉಸಾಮ ಸಾಹಿಬ್ ಹೇಳುತ್ತಾರೆ: ಅತ್ಯಂತ ಹೆಚ್ಚಾಗಿ ನನ್ನನ್ನು ಪ್ರಭಾವಿತಗೊಳಿಸಿದ ಸಂಗತಿಯೇನೆಂದರೆ, ಇಷ್ಟೆಲ್ಲ ದೇಶಗಳ ಪ್ರತಿನಿಧಿಗಳು, ವ್ಯಕ್ತಿಗಳು ಮತ್ತು ಭಾಷೆಗಳ ವ್ಯತ್ಯಾಸವಿದ್ದರೂ ಅನುಸರಣೆಯನ್ನು ತೋರಿಸಿದ್ದು ಮತ್ತು ಕೊರೋನದಂತಹ ನಾಶಕಾರಿ ರೋಗವಿದ್ದೂ ಇಷ್ಟು ಪರ್‌ಫೆಕ್ಟ್ ವ್ಯವಸ್ಥೆ ನೋಡಬೇಕಾದದ್ದೇ ಆಗಿತ್ತು. ನೈಜೀರಿಯದ ಅಮೀರ್ ಸಾಹಿಬ್ ಬರೆಯುತ್ತಾರೆ: ಒಬ್ಬಳು ಅಹ್ಮದಿಯೇತರ ಅತಿಥಿ ಮರ್‌ಯಂ ಸಾಹಿಬ ಹೇಳುತ್ತಾರೆ: ಇಂದು ಅಹ್ಮದಿಯಾ ಜಮಾಅತಿನ ಇಮಾಮರ ಖುತ್‌ಬವನ್ನು ಕೇಳಿ ನನಗೆ ಸ್ತ್ರೀಯರ ಹಕ್ಕುಗಳು ಮತ್ತು ಜವಾಬ್ದಾರಿಗಳ ಸರಿಯಾದ ಅರಿವು ಲಭಿಸಿದೆ. ಆಫ್ರಿಕದಲ್ಲಿ ಹೆಚ್ಚಿನ ಸ್ತ್ರೀಯರ ಹೀನಾಯ ಸ್ಥಿತಿಯ ಬಗ್ಗೆ ಅಭಿವೃದ್ಧಿಗೊಂಡ ದೇಶಗಳಿಗೆ ಚಿಂತಿಸಲು ಸಹ ಸಾಧ್ಯವಲ್ಲ. ನಿಮ್ಮ ಕೆಲಸಗಳು ನಿಮ್ಮ ಮಾತಿನ ಪ್ರಕಾರವಾಗಿದೆ. ನಿಮಗಿಂತ ಉತ್ತಮರನ್ನು ನಾನು ಬೇರೆ ನೋಡಿಲ್ಲ. ಆದ್ದರಿಂದ ಪ್ರತಿಯೊಬ್ಬ ಅಹ್ಮದಿ ತಮ್ಮ ಮನೆಗಳಲ್ಲಿ ಈ ಅಧ್ಯಾಪನೆಗಳ ಮಾದರಿಯನ್ನು ತೋರಿಸಬೇಕು. ಕೇವಲ ಭಾಷಣಕ್ಕಾಗಿ ಅಲ್ಲ. ಇಸ್ಲಾಮಿನ ಯಥಾರ್ಥ ಅಧ್ಯಾಪನೆಗಳ ಬಗ್ಗೆ ಜನರಿಗೆ ಉಂಟಾದ ಪ್ರಭಾವ ನೆಲೆನಿಲ್ಲಲೂ ಬೇಕು. ನೈಜೀರಿಯದ ಒಬ್ಬ ಅಹ್ಮದಿಯೇತರ ಸಹೋದರ ಫರೀದ್ ಮೂಸಾ ಹೇಳುತ್ತಾರೆ. ಅವರು ಸಹ ಸ್ತ್ರೀಯರಿಗೆ ನೀಡಲಾದ ಭಾಷಣವನ್ನು ಶ್ಲಾಘಿಸಿದ್ದಾರೆ. ಅಹ್ಮದಿಯೇತರ ಸ್ತ್ರೀಯಾದ ಮರ್‌ಯಂ ಇಲ್‌ಯಾಸ್ ಸಾಹಿಬ ಹೇಳುತ್ತಾರೆ: ಸ್ತ್ರೀಯರ ಹಕ್ಕುಗಳ ಬಗ್ಗೆ ಅಹ್ಮದಿಯಾ ಜಮಾಅತಿನ ಇಮಾಮ್ ಹೇಳಿದ ಮಾತುಗಳು ಇಸ್ಲಾಮಿನ ಯಥಾರ್ಥ ಅಧ್ಯಾಪನೆಯೆಂದು ಗೊತ್ತಾದಾಗ ನನಗೆ ನಮ್ಮ ಸ್ತ್ರೀಯರ ಬಗ್ಗೆ ಹೆಮ್ಮೆ ಉಂಟಾಯಿತು. ಈ ಸಂಗತಿಯನ್ನು ಎಲ್ಲರೂ ಅರಿತರೆ ಲೋಕವು ಸ್ವರ್ಗವಾಗುವುದು.

ನೈಜೀರಿಯದ ಒಬ್ಬ ಅಹ್ಮದಿಯೇತರ ಸ್ತ್ರೀಯಾದ ನಫೀಸ ಆದ್‌ಮೋಸ್ ಹೇಳುತ್ತಾರೆ: ನಾನು ಮೊದಲ ಬಾರಿ ಅಹ್ಮದಿಯಾ ಜಮಾಅತಿನ ಭಾಷಣವನ್ನು ಕೇಳಿದೆ. ಹಝ್ರತ್ ಪೈಗಂಬರ್(ಸ) ಸ್ತ್ರೀಯರಿಗೆ ಕೊಟ್ಟ ಗೌರವ ಮತ್ತು ಬೆಲೆಯನ್ನು ಯಾರಾದರೂ ಈಡೇರಿಸುತ್ತಿದ್ದರೆ ಅದು ಅಹ್ಮದಿಯಾ ಜಮಾಅತ್ ಮಾತ್ರವಾಗಿದೆ ಎಂದು ನನಗೆ ಸ್ಪಷ್ಟವಾಗಿ ಗೊತ್ತಾಗಿದೆ. ಒಟ್ಟಿನಲ್ಲಿ ನಾನು ಪುನಃ ಹೇಳುತ್ತೇನೆ: ಪ್ರತಿ ಅಹ್ಮದಿ ಪುರುಷರು ಯೋಚಿಸಬೇಕಾದ ಸಂಗತಿಯಾಗಿದೆ. ತಮ್ಮ ವರ್ತನೆಯನ್ನು ತಮ್ಮ ಮನೆಯಲ್ಲಿ ಸರಿಯಾಗಿ ಇರಿಸಿರಿ. ಲೋಕವನ್ನು ಮೋಸಮಾಡಬೇಡಿರಿ.

ನೈಜೀರಿಯಾದ ಅಮೀರ್ ಸಾಹಿಬ್ ಬರೆಯುತ್ತಾರೆ: ಓರ್ವ ಅಹ್ಮದಿಯೇತರ ಮಹಿಳೆ ಮರಿಯಮ್ ಸಾಹಿಬರವರು ಹೇಳುತ್ತಾರೆ: ಇಂದು ಜಮಾಅತೆ ಅಹ್ಮದಿಯಾರ ಇಮಾಮರ ಖುತ್‌ಬವನ್ನು ಆಲಿಸಿ ನನಗೆ ಮಹಿಳೆಯರ ಹಕ್ಕುಗಳು ಹಾಗೂ ಮಹಿಳೆಯರ ಹೊಣೆಗಾರಿಕೆಗಳ ಬಗ್ಗೆ ಸಂಪೂರ್ಣವಾಗಿ ಅರಿವಾಯಿತು ಇಲ್ಲದಿದ್ದರೆ ಇಲ್ಲಿ ಆಫ್ರೀಕದಲ್ಲಿ ಸಾಮಾನ್ಯವಾಗಿ ಎಲ್ಲಾ ಮಹಿಳೆಯರು ತಮ್ಮ ಜೀವನವನ್ನು ಎಷ್ಟು ಕೆಟ್ಟದಾಗಿ ಕಳೆಯುತ್ತಿದ್ದಾರೆ ಎಂಬುದದನ್ನು ಒಂದು ಅಭಿವೃದ್ಧಿ ಹೊಂದಿದ ದೇಶಗಳು ಎಂದಿಗೂ ಭಾವಿಸಿರುವುದಿಲ್ಲ. ನಿಮ್ಮೆಲ್ಲರ ಕಾರ್ಯಗಳು ನಿಮ್ಮ ಮಾತುಗಳ ಪ್ರಕಾರವೇ ಇರುತ್ತದೆ. ಅವರು ಮತ್ತೆ ಹೇಳುತ್ತಾರೆ, ನಿಮ್ಮ ಅಹ್ಮದಿ ಮಹಿಳೆಯರ ಕಾರ್ಯಗಳು ಅವರ ಮಾತುಗಳ ಪ್ರಕಾರವಿರುತ್ತದೆ ಎಂದರೆ ನಿಮಗಿಂತ ಉತ್ತಮರು ಮತ್ತೆ ಯಾರಿಗೂ ನಾನು ನೋಡಲಿಲ್ಲ. ಹೀಗಾಗಿ ಇದು ಕೇವಲ ಭಾಷಣಗಾಗಿ ಸೀಮಿತವಾಗಿರಬಾರದು ಬದಲಿಗೆ ಪ್ರತಿಯೊಂದು ಅಹ್ಮದಿಯರನ್ನು ತಮ್ಮ ಮನೆಗಳಲ್ಲಿ ಈ ಬೋಧನೆಯ ಪ್ರಕಾರ ನಡೆಯಬೇಕು ಹೀಗೆ ಇಸ್ಲಾಮಿನ ನೈಜ ಬೋಧನೆಗಳ ಪ್ರಭಾವವು ಅನ್ಯರ ಮೇಲೆ ಬೀರುತ್ತದೆ.

ನೈಜೀರಿಯದ ಅಮೀರ್ ಸಾಹಿಬ್ ಬರೆಯುತ್ತಾರೆ: ಒಬ್ಬ ಅಹ್ಮದಿಯೇತರ ಸಹೋದರ ಅಲ್‌ಹಾಜ್ ಹುಸೈನ್ ಸಾಹಿಬ್‌ರು ಬಿಸಿನೆಸ್‌ಮ್ಯಾನ್ ಆಗಿರುವರು. ಸಾಕಷ್ಟು ಬ್ಯೂಸಿಯಾಗಿರುತ್ತಾರೆ. ಆದರೂ ಅವರಿಗೆ ಜಲ್ಸದಲ್ಲಿ ಭಾಗವಹಿಸಲು ಆಮಂತ್ರಿಸಲಾದಾಗ ಅವರು ಆಮಂತ್ರಣವನ್ನು ಸ್ವೀಕರಿಸಿದರು. ಜಲ್ಸದ ನಂತರ ಅವರು ಹೇಳಿದರು: ನಾನು ಸುಮ್ಮನೇ ಜಲ್ಸದಲ್ಲಿ ಬಂದಿದ್ದೆ. ಯಾವುದಾದರೂ ಲೌಕಿಕವಾದ ಮೇಳವಾಗಿರಬಹುದು ಎಂದು ಭಾವಿಸಿದ್ದೆ. ಆದರೆ ನಾನು ಜಲ್ಸ ಕೇಳಲು ಶುರುಮಾಡಿದಾಗ, ಮೂರು ದಿನಗಳೂ ಜಲ್ಸದಲ್ಲಿ ಭಾಗವಹಿಸಲು ಉದ್ದೇಶಿಸಿದೆ. ಜಲ್ಸದ ವಾತಾವರಣ ನನ್ನನ್ನು ಅತ್ಯಂತ ಹೆಚ್ಚು ಪ್ರಭಾವಿತಗೊಳಿಸಿತು. ಸ್ವಯಂಸೇವಕರು ಕೆಲಸ ಮಾಡುವುದನ್ನು ನೋಡಿಕೊಂಡು, ಅವರಲ್ಲಿ ಒಂದು ಆವೇಶವಿದೆ, ಅದು ಅವರಿಗೆ ಧೈರ್ಯ ನೀಡುತ್ತಿದೆ ಎಂದು ಅನಿಸಿತು. ಇದು ಲೌಕಿಕವಾದ ಜನರಿಗೆ ಸಾಧ್ಯವಾಗುವ ಸಂಗತಿಯಲ್ಲ.

ಗಿನಿಕನಾಕುರಿಯ ಮುಬಲ್ಲಿಗ್ ಇಂಚಾರ್ಜ್ ಸಾಹಿಬ್‌ರು ಹೇಳುತ್ತಾರೆ: ಕಿನಿಯಾರ್ ರೀಜನಿನ ಲೋಕಲ್ ಮಿಶನರಿ ಬರೆಯುತ್ತಾರೆ: ಪ್ರದೇಶದ ಮೇಯರಿಗೆ ಆಮಂತ್ರಣ ನೀಡಲಾಗಿತ್ತು. ಅವರು ಹೇಳಿದರು. ನಾನು ರೋಗಿಯಾಗಿರುವೆನು. ಆದರೆ ನನ್ನ ಮಗನು ಬರುವರು. ಅವರು ಬಂದಾಗ ಲಜ್ನಗಳನ್ನು ಸಂಬೋಧಿಸಿ ಮಾಡಲಾಗುವ ನನ್ನ ಭಾಷಣ ಶುರುವಾಗಲಿತ್ತು. ವಿದ್ಯುತ್ತಿನ ಸಮಸ್ಯೆ ಅಲ್ಲಿ ಅಲ್ಲಿ ಬಹಳ ಇರುತ್ತಿತ್ತು. ಈಗ ಅಲ್ಲಿ ಮಳೆಗಾಲವಾಗಿದೆ. ಕರಂಟ್ ಹೋದರೆ ಗಂಟೆಗಟ್ಟಲೆ ಇರುವುದಿಲ್ಲ. ಪ್ರೋಗ್ರಾಂ ಶುರುವಾಗುವಾಗ ಕರಂಟ್ ಹೋಯಿತು. ಅತಿಥಿಗಳು ಸಹ ಬಂದಿದ್ದರು. ಜನರೇಟರ್ ಸಹ ಇದ್ದಿರಲಿಲ್ಲ. ಮಿಶನರಿ ಹೇಳುತ್ತಾರೆ: ಇಂದು ಅಹ್ಮದಿಯಾ ಜಮಾಅತಿನ ಸತ್ಯತೆಗಾಗಿ ದೃಷ್ಟಾಂತವನ್ನು ತೋರಿಸಲು ಅಲ್ಲಾಹನಲ್ಲಿ ನಾವು ನೋವಿನಿಂದ ದುಆ ಮಾಡಿದೆವು. ಭಾಷಣಕ್ಕಾಗಿ ಡೈಸಿಗೆ ಬರುವುದಕ್ಕೆ ಮುಂಚೆ ಕರಂಟ್ ಬಂತು. ಅಲ್ಲಾಹನು ಹಝ್ರತ್ ಮಸೀಹ್ ಮೌಊದ್‌ರ ಗುಲಾಮರ ದುಆವನ್ನು ಕೇಳಿದನು. ಹಝ್ರತ್ ಮಸೀಹ್ ಮೌಊದ್‌ರ ಸತ್ಯತೆಗಾಗಿ ಕುರುಹು ತೋರಿಸಿದನು. ಅದರಿಂದ ನಮ್ಮ ಅತಿಥಿಯು ಪ್ರಭಾವಿತಗೊಂಡರು. ಆಶ್ಚರ್ಯಕರವಾದ ಸಂಗತಿಯೇನೆಂದರೆ, ಭಾಷಣ ಮುಕ್ತಾಯಗೊಳ್ಳುತ್ತಲೇ ಕರೆಂಟ್ ಹೋಯಿತು. ಇಷ್ಟು ಸಮಗ್ರ ಭಾಷಣವನ್ನು ಎಂದೂ ಕೇಳಿಲ್ಲವೆಂದು ಅವರು ಸಹ ಹೇಳಿದರು. ಜಮಾಅತಿನ ಬಗ್ಗೆ ಇತರ ಮುಸ್ಲಿಮರು ಪ್ರಚಾರ ಪಡಿಸಿರುವ ಸಂಗತಿಗಳೆಲ್ಲ ತಪ್ಪಾಗಿದೆ.

ಕ್ಯಾಮರೂನಿನ ಮುಅಲ್ಲಿಮ್ ಸಾಹಿಬ್‌ರು ಹೇಳುತ್ತಾರೆ: ಮರ್‌ವಾ ನಗರದ ಸಮೀಪದ ಒಂದು ಗ್ರಾಮದ ಅಹ್ಮದಿಯೇತರ ಚೀಫ್ ಅಲ್‌ಹಾಜಿ ಉಸ್ಮಾನ್ ಸಾಹಿಬ್‌ರು ಜಲ್ಸದ ಕಾರ್ಯಕ್ರಮಗಳನ್ನು ಎಂ.ಟಿ.ಎ. ಆಫ್ರಿಕದ ಮೂಲಕ ನೋಡಿದ್ದರು. ಅವರು ಹೇಳಿದರು: ಇಮಾಂ ಮಹ್‌ದಿ ಬಂದರೆ, ಲೋಕವೆಲ್ಲ ಅವರನ್ನು ನೋಡುವರು ಎಂದು ಚಿಕ್ಕದಿನಿಂತ ಕೇಳುತ್ತಾ ಬಂದಿದ್ದೇವೆ. ಇಂದು ಜಲ್ಸದ ಕಾರ್ಯಕ್ರಮಗಳನ್ನು ನೋಡಿದಾಗ ವಾಸ್ತವಿಕವಾಗಿ ಈ ಜಮಾಅತ್ ಇಮಾಮ್ ಮಹ್‌ದಿಯವರ ಜಮಾಅತ್ ಆಗಿದೆ ಎಂದು ನನಗೆ ದೃಢವಿಶ್ವಾಸವಾಯಿತು. ಅದನ್ನು ಲೋಕವೆಲ್ಲ ಈಗ ನೋಡುತ್ತಿದೆ. ಅನೇಕ ದೇಶಗಳ ಜನರು ಎಂ.ಟಿ.ಎ. ಮೂಲಕ ಜಲ್ಸದಲ್ಲಿ ಭಾಗಿಯಾಗಿದ್ದರು. ಅಹ್ಮದಿಯಾ ಜಮಾಅತಿನ ಇಮಾಮರನ್ನು ನೋಡುತ್ತಿದ್ದರು ಮತ್ತು ಅವರ ಮಾತುಗಳನ್ನು ಆಲಿಸುತ್ತಿದ್ದರು. ಅಲ್ಲಾಹನ ಪ್ರವಾದಿಯ ಮಾತುಗಳು ಈಡೇರಿದ್ದಾಗಿ ನಾನು ಇಂದು ನೋಡಿದೆ.

ಮಾಲಿಯ ಅಮೀರ್ ಸಾಹಿಬ್‌ರು ಬರೆಯುತ್ತಾರೆ: ಕೀತಾ ಪಟ್ಟಣದ ಒಬ್ಬ ಉಸ್ತಾದ್ ಫೋನ್ ಮೂಲಕ ಹೀಗೆ ಹೇಳಿದರು: ನಾನು ಅಹ್ಮದಿಯಲ್ಲವಾದರು ನಾನು ಮತ್ತು ಮನೆಯವರೆಲ್ಲರೂ ಆಸಕ್ತಿಯಿಂದ ಜಲ್ಸದ ಕಾರ್ಯಕ್ರಮಗಳನ್ನು ಕೇಳಿದೆವು. ವಿಶೇಷವಾಗಿ ಖಲೀಫತುಲ್ ಮಸೀಹರ ಭಾಷಣದ ವೇಳೆ ನಾರೆ ಹಾಕಲಾಗುವಾಗ ಮನೆಯ ಎಲ್ಲ ಸದಸ್ಯರು ಆವೇಶದಿಂದ ನಾರೆ ಹಾಕುತ್ತಿದ್ದೆವು. ಉಮರ್ ಬಾರಿ ಸಾಹಿಬ್ ಹೇಳಿದರು: ನಾನು ಬೇಗನೇ ಕುಟುಂಬ ಸಮೇತ ಬಂದು ಅಹ್ಮದಿಯಾ ಜಮಾಅತಿನಲ್ಲಿ ಪ್ರವೇಶಿಸುತ್ತೇವೆ. ಇನ್‌ಶಾ ಅಲ್ಲಾಹ್.

ಮುಬಲ್ಲಿಗ್ ಇಂಚಾರ್ಜ್ ಕೇಮರೂನ್ ಹೇಳುತ್ತಾರೆ: ಕೇಮರೂನಿನ ಚೀಫ್ ಇಮಾಂ ಡವಾಲಾ ಫಾರೂಖ್ ಸಾಹಿಬ್‌ರು ಹೇಳಿದರು: ನಾನು ಎಂ.ಟಿ.ಎ. ಆಫ್ರಿಕದ ಮೂಲಕ ಜಲ್ಸದ ಭಾಷಣಗಳನ್ನು ಕೇಳಿದೆ. ಜಮಾಅತನ್ನು ಜನರು ಕಾಫಿರ್ ಎಂದೂ ಭಯೋತ್ಪಾದಕ ಸಂಘಟನೆಯೆಂದೂ ಹೇಳುತ್ತಾರೆ. ಅದಕ್ಕೆ ಉತ್ತರ ದೊಡ್ಡ ಅಕ್ಷರಗಳಲ್ಲಿ ಸ್ಟೇಜಿನ ಗೋಡೆಯಲ್ಲಿ ಬರೆಯಲಾದ ಖಾತಮುನ್ನಬಿಯ್ಯೀನಿನ ಆಯತ್ ಆಗಿದೆ. ಈಗ ಇನ್‌ಶಾ ಅಲ್ಲಾಹ್ ಎಂ.ಟಿ.ಎ. ಮೂಲಕ ಜಮಾಅತಿನ ಕುರಿತು ಅನೇಕ ತಪ್ಪುಗ್ರಹಿಕೆಗಳು ದೂರವಾಗುವುವು.

ತನ್ಸಾನಿಯದ ಅಮೀರ್ ಸಾಹಿಬ್ ಬರೆಯುತ್ತಾರೆ: ಅರೂಶ ರೀಜನಿನಿಂದ ಒಬ್ಬಳು ಅಹ್ಮದಿಯೇತರ ಮಹಿಳೆಯಾದ ಜಾಬೂ ಸಾಹಿಬ ಹೇಳಿದರು: ಮೊದಲ ಬಾರಿಗೆ ಜಲ್ಸ ಸಾಲಾನ ನೋಡಿದೆ. ಇಷ್ಟು ಸಮಾಧಾನದ ಸಭೆ ನಾನು ನನ್ನ ಜೀವಿತದಲ್ಲಿ ಕಂಡಿಲ್ಲ. ಸಾಮಾನ್ಯವಾಗಿ ಜಲ್ಸದಲ್ಲಿ ಜನರು ಬೊಬ್ಬಿಡುತ್ತಾರೆ. ಜನರನ್ನು ಆಕರ್ಷಿಸಲು ವಿವಿಧ ತಮಾಷೆಯ ಪ್ರೋಗ್ರಾಮುಗಳನ್ನು ಮಾಡುತ್ತಾರೆ. ಆದರೆ ಈ ಜಲ್ಸದಲ್ಲಿ ಅಂತಹದ್ದು ಏನೂ ಇರಲಿಲ್ಲ. ಬದಲಾಗಿ ಪ್ರತಿಯೊಂದು ಕಾರ್ಯಕ್ರಮದಲ್ಲಿ ಇಸ್ಲಾಮಿನ ಯಥಾರ್ಥ ಶಿಕ್ಷಣದ ಬಗ್ಗೆ ಹೇಳಲಾಗುತ್ತಿತ್ತು. ನಿಸ್ಸಂಶಯವಾಗಿಯೂ ಅಹ್ಮದಿಯರಿಗೆ ತಮ್ಮ ಖಲೀಫರೊಂದಿಗೆ ಇರುವ ಪ್ರೀತಿಯ ಉದಾಹರಣೆ ಲೋಕದಲ್ಲಿ ಎಲ್ಲೂ ಸಿಗಲು ಸಾಧ್ಯವಿಲ್ಲ.

ಕೇಮರೂನಿನ ಮರ್ವ ಪಟ್ಟಣದ ಒಬ್ಬ ಲೋಕಲ್ ಚೀಫ್ ಕಾರ್ಯಕ್ರಮಗಳನ್ನು ನೋಡಿ ಹೇಳುತ್ತಾರೆ: ಇಷ್ಟು ಹೆಚ್ಚು ಭಾಷೆಗಳಲ್ಲಿ ಜಲ್ಸ ಸಾಲಾನದ ಕಾರ್ಯಕ್ರಮಗಳು ತರ್ಜುಮೆ ಆಗುತ್ತಿರುವುದು ಮತ್ತು ಜನರು

ಅದರಿಂದ ಪ್ರಯೋಜನ ಪಡೆಯುತ್ತಿರುವುದು ಜಮಾಅತಿನ ದೊಡ್ಡ ಸಂಗತಿಯಾಗಿದೆ. ನಾನು ಜಲ್ಸದಿಂದ ಪ್ರಯೋಜನ ಪಡೆದೆ. ನನ್ನ ಅರಿವು ವರ್ಧಿಸಿದೆ. ಎಂ.ಟಿ.ಎ. ಒಂದು ಅನುಗ್ರಹವಾಗಿದೆ. ಈಗ ನಾನು ಕೇಬಲ್ ಕನಕ್ಷನ್ ಮಾಡುವೆನು. ನನ್ನ ಮನೆಯಲ್ಲಿ ಕುಳಿತುಕೊಂಡು ಎಂ.ಟಿ.ಎ.ದಿಂದ ಪ್ರಯೋಜನ ಪಡೆಯುವೆನು. ನನ್ನ ಅರಿವನ್ನು ವರ್ಧಿಸುವೆನು.

ಈಗ ಅನ್ಯರು ಸಹ ಎಂ.ಟಿ.ಎ.ದಿಂದ ಪ್ರಭಾವಿತರಾಗಿರುವರು. ಯಾರು ಧಾರ್ಮಿಕ ಆಹಾರದ ಮೇಜಿನಿಂದ ಪ್ರಯೋಜನ ಪಡೆಯಲು ಬಯಸುವವರು ಇದರಿಂದ ಪ್ರಯೋಜನ ಪಡೆಯುತ್ತಿದ್ದಾರೆ. ಆಧ್ಯಾತ್ಮಿಕವಾಗಿ ಏಳಿಗೆ ಬೇಕಿದ್ದರೆ ಇದೇ ಅಭಿವೃದ್ಧಿಯ ರಹಸ್ಯವಾಗಿದೆ. ಅಹ್ಮದಿಯರು ಸಹ ಎಂ.ಟಿ.ಎ.ದ ಕಡೆಗೆ ಹೆಚ್ಚು ಗಮನಹರಿಸಬೇಕು.

ಮುಬಲ್ಲಿಗ್ ಇಂಚಾರ್ಜ್ ಗಾಬೂನ್ ಬರೆಯುತ್ತಾರೆ: ಒಬ್ಬ ನವ ಅಹ್ಮದಿ ಹೇಳಿದರು: ಸತ್ಯದಲ್ಲಿ ಇದು ಸಂಪೂರ್ಣ ಲೋಕದ ಜಲ್ಸ ಆಗಿದೆ. ಅದರಲ್ಲಿ ನಾಔಲು ಸಹ ಭಾಗಿಯಾದೆವು. ಇತರ ಅನೇಕ ದೇಶಗಳಿಂದಲೂ ಜನರು ಭಾಗಿಯಾದರು. ಈ ಸಂಗತಿ ಸಹ ನಮ್ಮ ವಿಶ್ವಾಸವನ್ನು ದೃಢಗೊಳಿಸುತ್ತಿದೆ. ಸಮಯದ ವ್ಯತ್ಯಾಸವಿದ್ದರೂ ಲೋಕದೆಲ್ಲಸೆ ಜನರು ಜಲ್ಸದಲ್ಲಿ ಕುಳಿತುಕೊಂಡಿದ್ದರು. ಈ ದೃಶ್ಯವನ್ನು ಅಹ್ಮದಿಯ್ಯತಿಗೆ ಮಾತ್ರ ಮುಂದಿರಿಸಲು ಸಾಧ್ಯ. ಇತರ ಮುಸ್ಲಿಮರಿಗೆ ಇದು ಸಾಧ್ಯವಲ್ಲ.

ಝೇಂಬಿಯಾದ ಲೂಸ ನಗಾಸಿಯ ನವ ಅಹ್ಮದಿ ಅಲಿ ಸಾಹಿಬ್‌ರು ಹೇಳುತ್ತಾರೆ: ನಾನು ನನ್ನ ಪ್ರದೇಶದ ಹೆಡ್‌ಮೇನ್ ಸಹ ಆಗಿದ್ದೇನೆ. ನಾವು ಕ್ರೈಸ್ತ ಧರ್ಮದಿಂದ ಅಹ್ಮದಿಯ್ಯತಿಗೆ ಬಂದಿದ್ದೇವೆ. ನಮ್ಮ ಗ್ರಾಮದಲ್ಲಿ ಅಹ್ಮದಿಯ್ಯತ್ ಫೆಬ್ರವರಿ 2021ರಲ್ಲಿ ಸ್ಥಾಪನೆಗೊಂಡಿತ್ತು. ಇದರ ನಂತರ ಅನೇಕ ಬಾರಿ ಅಹ್ಮದಿಯೇತರ ಉಲೇಮಗಳು ನಮ್ಮ ಪ್ರದೇಶಕ್ಕೆ ಬಂದರು. ನಮ್ಮ ಹೃದಯಗಳಲ್ಲಿ ಅಹ್ಮದಿಯ್ಯತ್ತಿನ ಕುರಿತು ವಿವಿಧ ರೀತಿಯ ಸಂಶಯಗಳನ್ನು ಉಂಟುಮಾಡಲು ಪ್ರಯತ್ನಿಸಿದರು. ನಾವು ಕ್ರೈಸ್ತರಾಗಿದ್ದಾಗ ಯಾರೂ ಕೇಳಲು ಬಂದಿರಲಿಲ್ಲ. ಆದರೆ ಅಹ್ಮದಿಯಾದಾಗ ಅಹ್ಮದಿಯೇತರ ಉಲೇಮಗಳು ಅವರ ಧರ್ಮವನ್ನು ಸರಿಪಡಿಸಲು ಬಂದಿರುವರು. ನವ ಅಹ್ಮದಿ ಹೇಳುತ್ತಾರೆ: ಈಗ ನಾವು ಜಲ್ಸ ಸಾಲಾನ ಯು.ಕೆ.ಯ ನೇರಪ್ರಸಾರ ನೋಡುವ ಸೌಭಾಗ್ಯ ಪಡೆದೆವು. ನಾವು ನಮ್ಮ ಜೀವಿತದಲ್ಲಿ ಮೊದಲ ಬಾರಿಗೆ ವ್ಯವಸ್ಥಾಪಿತ ಜಲ್ಸದ ದೃಶ್ಯವನ್ನು ಕಂಡೆವು. ಅಲ್ಲಿ ಸಾಂಕ್ರಾಮಿಕ ಸ್ಥಿತಿಯಿದ್ದೂ ಇಷ್ಟು ಹಿರಿಯ ಸಂಖ್ಯೆಯಲ್ಲಿ ಜನರು ಭಾಗಿಯಾದರು. ಅನೇಕ ದೇಶಗಳ ಸರ್ಕಾರಿ ಪ್ರತಿನಿಧಿಗಳು ತಮ್ಮ ವೀಡಿಯೋ ಸಂದೇಶಗಳನ್ನು ಕಳುಹಿಸಿದರು. ಅಲ್ಲಾಹನ ಅನುಗ್ರಹದಿಂದ ಜಲ್ಸ ಸಾಲಾನ ನೋಡಿದ ನಂತರ ನಮ್ಮ ಎಲ್ಲ ಸಂಶಯಗಳು ದೂರವಾದುವು. ಅಹ್ಮದಿಯ್ಯತ್ ಒಂದು ಸಣ್ಣ ಸಂಘದ ಹೆಸರಲ್ಲ. ಬದಲಾಗಿ ಒಂದು ಅಂತರ್ರಾಷ್ಟ್ರೀಯ ಜಮಾಅತ್ ಆಗಿದೆ. ಮಹಿಳೆಯರ ಮತ್ತು ಇತರ ಜನರ ಹಕ್ಕುಗಳ ಬಗ್ಗೆ ಇಸ್ಲಾಮಿನ ಶಿಕ್ಷಣದ ಬಗ್ಗೆ ಖ಼ಲೀಫತುಲ್ ಮಸೀಹರು ಹೇಳಿದಾಗ ನಾವು ಅಚ್ಚರಿಗೊಂಡವು. ಸ್ತ್ರೀಯರಿಗೆ ಸಹ ಹಕ್ಕಿದೆ ಎಂದು ಹೇಳಿದಾಗ ಅಚ್ಚರಿಗೊಂಡೆವು. ನಾವು ಮಹಿಳೆಯರಿಗೆ ಯಾವುದೇ ಬೆಲೆ ಕೊಡುತ್ತಿರಲಿಲ್ಲ. ನಾವು ಇಲ್ಲಿ ಕೇಳಿದ ಮತ್ತು ನೋಡಿದ ಸಂಗತಿಗಳನ್ನು ನಾವು ಮರಳಿ ಹೋಗಿ ಇತರರಿಗೂ ಹೇಳುವೆವು. ಇನ್‌ಶಾ ಅಲ್ಲಾಹ್. ಹೀಗೆ ಅವರ ವಿಶ್ವಾಸವು ದೃಢವಾಗುವುದು ಮತ್ತು ಅದರ ಪ್ರಕಾರ ನಡೆಯಲು ಪ್ರಯತ್ನಿಸುವರು.

ಮಲೇಶಿಯಾದ ಒಬ್ಬ ನವ ಅಹ್ಮದಿ ರಸ್ಲಿ ಬಿನ್ ಮೂಪಸೂಲಿ ಹೇಳಿದರು: ಯು.ಕೆ. ಜಲ್ಸ ಸಾಲಾನವನ್ನು ನೋಡಿದ ನಂತರ ನಾನು ಅಲ್ಲಾಹನಗೆ ಬಹಳ ಕೃತಜ್ಞತೆ ಅರ್ಪಿಸುತ್ತಿದ್ದೇನೆ. ನನಗೆ ಅಹ್ಮದಿಯಾ ಜಮಾಅತಿನಲ್ಲಿ ಸೇರಲು ಮತ್ತು ಕಾಲಘಟ್ಟದ ಇಮಾಮರನ್ನು ಗುರುತಿಸಲು ಸೌಭಾಗ್ಯ ಸಿಕ್ಕಿದೆ. ನಾನು ಯು.ಕೆ.ಯಲ್ಲಿ ಇರಲಿಲ್ಲ. ಆದರೂ ನನಗೆ ಖ಼ಲೀಫತುಲ್ ಮಸೀಹರನ್ನು ನೋಡಲು ಮತ್ತು ಅವರ ಭಾಷಣಗಳನ್ನು ಕೇಳುವ ಸಂದರ್ಭ ಸಿಗುತ್ತಿತ್ತು. ನಾನು ಅಹ್ಮದಿಯಾ ಜಮಾಅತಿನಲ್ಲಿ ಸೇರಿರದಿದ್ದರೆ ನನಗೆ ಇದರಿಂದ ವಂಚಿತನಾಗುತ್ತಿದ್ದೆ. ಈಗ ನಾನು ಯಾವಾಗಲೂ ಖಿಲಾಫತ್‌ನೊಂದಿಗೆ ನಿಷ್ಠೆ ಹೊಂದಿದವನೂ ವಿಧೇಯನೂ ಆಗಿರುವೆನೆಂದು ವಾಗ್ದಾನ ಮಾಡುತ್ತೇನೆ.

ಬ್ರಾಝೀಲಿನ ಒಬ್ಬ ಮಹಿಳೆಯಾದ ಪೇಶೀಲಿ ಮಾರ್ಲಿನ್ ಸಾಹಿಬ ಹೇಳುತ್ತಾರೆ: ಕೆಲವು ತಿಂಗಳಿಗೆ ಮುಂಚೆ ಅವರು ಬೈಅತ್ ಮಾಡಿದ್ದರು. ನನಗೆ ಮೊದಲ ಬಾರಿಗೆ ಜಲ್ಸ ಸಾಲಾನ ನೋಡಲು ಅವಕಾಶ ಸಿಕ್ಕಿತು ಎಂಬುದು ನನ್ನ ಸೌಭಾಗ್ಯವಾಗಿದೆ. ಭಾಷೆ ಗೊತ್ತಿರದಿದ್ದರೂ ಬಹಳಷ್ಟು ಕಲಿಯಲು ಸಾಧ್ಯವಾಯಿತು. ಅಲ್ಲಾಹನು ನನಗೆ ಅಹ್ಮದಿಯ್ಯತ್ ಸ್ವೀಕರಿಸಲು ಸೌಭಾಗ್ಯ ನೀಡಿದ್ದನು ಎಂಬುದಕ್ಕೆ ನಾನು ಅಲ್ಲಾಹನಗೆ ಕೃತಜ್ಞತೆ ಅರ್ಪಿಸುತ್ತೇನೆ.

ಗಿನಿ ಬಸಾವ್ ದೇಶದ ಮುಬಲ್ಲಿಗ್ ಇಂಚಾರ್ಜ್ ಬರೆಯುತ್ತಾರೆ: ಜಮಾಅತಿನಿಂದ ಬಹಳ ದೂರದ ಪ್ರದೇಶವಾದ ಕಸೀನಯ ನಾಲ್ವರು ನವ ಅಹ್ಮದಿ ಮಹಿಳೆಯರು ಎಂಟು ಕಿಲೋಮೀಟರ್ ನಡೆದು ತಮ್ಮ ಸಮೀಪದ ಜಮಾಅತಾದ ಮಿಸ್ರಾಗೆ ಜಲ್ಸ ಸಾಲಾನ ಕೇಳಲು ಬಂದಿದ್ದರು. ಅವರು ನನ್ನ ಭಾಷಣವನ್ನು ಕೇಳಿದಾಗ ಅವರು ಹೇಳಿದರು: ಅಲ್ಲಾಹನ ಅನುಗ್ರಹದಿಂದ ನಾವು ಅಹ್ಮದಿಯ್ಯತ್ ಸ್ವೀಕರಿಸಿದ್ದೆವು. ಆದರೆ ನಾವು ಖ಼ಲೀಫತುಲ್ ಮಸೀಹರು ಭಾಷಣವನ್ನು ಕೇಳಿದ ನಂತರ ನಾವು ಎಷ್ಟು ದೊಡ್ಡ ಅನುಗ್ರಹದಿಂದ ದೂರವಿದ್ದೇವೆ ಎಂಬ ಅರಿವು ಉಂಟಾಯಿತು. ಈಗ ನಮ್ಮ ವಿಶ್ವಾಸ ಅಹ್ಮದಿಯ್ಯತ್ತಿನ ಮೇಲೆ ಶೇಕಡ ನೂರರಷ್ಟು ಪರಿಪೂರ್ಣವಾಗಿದೆ. ನಾವು ಖ಼ಲೀಫತುಲ್ ಮಸೀಹರ ಖುತ್‌ಬಗಳನ್ನು ಕೇಳಲು ಬರುವೆವು ಎಂದು ನಾವು ಪ್ರತಿಜ್ಞೆ ಮಾಡಿದ್ದೇವೆ. ಅಲ್ಲಾಹನು ಎಂತಹ ಬದಲಾವಣೆಯನ್ನು ಉಂಟುಮಾಡುತ್ತಿದ್ದಾನೆ ಎಂದು ನೋಡಿರಿ.

ಗಿಯಾನದಿಂದಲೂ ಲೈವ್ ಸ್ಟ್ರೀಮಿಂಗಿನ ಮೂಲಕ ಜನರು ಜಲ್ಸದಲ್ಲಿ ಭಾಗಿಯಾದರು. ಒಬ್ಬ ನವ ಅಹ್ಮದಿಯಾದ ಮುಝಫ್ಫರ್ ಕೋಸಿ ಸಾಹಿಬ್‌ರು ಹೇಳುತ್ತಾರೆ: ಇದು ನನ್ನ ಮೊದಲ ಜಲ್ಸ ಸಾಲಾನ ಆಗಿದೆ. ನನಗೆ ಈ ಅನುಭವ ಬಹಳ ಉತ್ತಮವಾಗಿತ್ತು. ವಿಶೇಷವಾಗಿ ನಾನು ಅಹ್ಮದಿ ಸಹೋದರರೊಂದಿಗೆ ಕುಳಿತುಕೊಂಡು ಜಲ್ಸವನ್ನು ಕೇಳಿದ್ದು, ಖ಼ಲೀಫರನ್ನು ನೋಡಿದ್ದು ಮತ್ತು ಅವರ ಭಾಷಣವನ್ನು ಕೇಳಿದ್ದು ನನಗೆ ಬಹಳ ಉತ್ತಮ ಅನುಭವವಾಗಿತ್ತು. ನಾನು ಎಂದಿಗೂ ಯಾವುದೇ ಮುಸ್ಲಿಂ ಮಹಿಳೆ ಇಷ್ಟು ಉತ್ತಮವಾಗಿ ತಿಲಾವತ್ ಮಾಡಿದ್ದನ್ನು ಕೇಳಿಲ್ಲ. ತಿಲಾವತ್ತನ್ನು ಸಹ ಅವರು ಹೊಗಳಿದರು. ಅನಂತರ ಹೇಳುತ್ತಾರೆ: ನಮ್ಮ ಜಮಾತಿನ ಜನರು ವಿವಿಧ ಗ್ರಾಮಗಳಿಂದ ಊರುಗಳಿಂದ ಜಲ್ಸ ಕೇಳಲು ಒಂದು ಜಾಗದಲ್ಲಿ ಒಟ್ಟು ಸೇರಿದ್ದೆವು. ಇವೆಲ್ಲವೂ ಅಲ್ಲಾಹನು ಈ ಜಮಾಅತಿಗೆ ನೀಡಿದ ಅಹ್ಮದಿಯಾ ಖ಼ಿಲಾಫತಿನ ಅನುಗ್ರಹವಾಗಿದೆ. ಈ ರೀತಿಯಲ್ಲಿ ಲೋಕದ ಅನೇಕ ಜಮಾಅತುಗಳು ಜಲ್ಸ ಸಾಲಾನದಲ್ಲಿ ವಿರ್‌ಚುವಲ್ ಆಗಿ ಭಾಗಿಯಾಗಿದ್ದನ್ನು ನೋಡುವುದು ಆಶ್ಚಯಕರವಾಗಿತ್ತು. ನಾನು ಅನೇಕ ದೇಶಗಳನ್ನು ಹೀಗೆ ಕಂಡೆನು. ಅಲ್ಲಿ ಅಹ್ಮದಿಯಾ ಜಮಾಅತ್‌ಗಳು ಇವೆ ಎಂದು ನನಗೆ ಗೊತ್ತಿರಲಿಲ್ಲ. ಜಮಾಅತಿನ ಸಹೋದರರು ಹೇಗೆ ಒಟ್ಟುಸೇರಿ ಜಲ್ಸಗಾಗಿ ಕೆಲಸ ಮಾಡುತ್ತಿದ್ದಾರೆ ಎಂದು ಸಹ ನೋಡಿದೆ. ಯು.ಕೆ.ಯಲ್ಲಿ ಬ್ಯಾಂಕಿನಲ್ಲಿ ಕೆಲಸ ಮಾಡುವ ಒಬ್ಬ ವ್ಯಕ್ತಿ ಬ್ಯಾಂಕಿಗೆ ರಜೆ ಮಾಡಿ ಜಲ್ಸಗಾಗಿ ಸ್ವಯಂಸೇವಕರಾಗಿ ಕೆಲಸ ಮಾಡುತ್ತಿದ್ದರು.

ಮೊರಿಶಿಯಸ್ಸಿನ ಒಬ್ಬ ನವ ಅಹ್ಮದಿಯಾದ ಸಫ್ವಾನ್ ನಾಇಕ್ ಸಾಹಿಬ್‌ರು ಲೈವ್ ಸ್ಟ್ರೀಮಿಂಗಿನ ಮೂಲಕ ಜಲ್ಸದಲ್ಲಿ ಮೊದಲ ಬಾರಿಗೆ ಭಾಗಿಯಾದರು. ಅವರು ಹೇಳುತ್ತಾರೆ: ನಿಶ್ಚಯವಾಗಿಯೂ ಈ ರೀತಿಯ ಭಾಗವಹಿಸುವಿಕೆ ನನ್ನನ್ನು ಖ಼ಿಲಾಫತಿನೊಂದಿಗೆ ಹೆಚ್ಚು ಸಮೀಪ ಮಾಡುತ್ತಿತ್ತು. ಖ಼ಲೀಫತುಲ್ ಮಸೀಹರ ಪ್ರತಿಯೊಂದು ಪದ ನನ್ನ ಮನಸ್ಸಿಗೆ ತಟ್ಟುತ್ತಿತ್ತು. ಜಮಾಅತಿನಲ್ಲಿ ಸೇರುವ ನನ್ನ ತೀರ್ಮಾನದಿಂದ ನಾನು ಬಹಳ ಸಂತೋಷಗೊಂಡಿದ್ದೇನೆ. ಎಂ.ಟಿ.ಎ,ಯ ಪ್ರೋಗ್ರಾಮಿನಿಂದ ಹಝ್ರ಼ತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಬಗ್ಗೆ ಬಹಳಷ್ಟು ಕಲಿಯುತ್ತಿದ್ದೇನೆ.

ಆಸ್ಟ್ರೇಲಿಯದಿಂದ ಅಶ್ರಫ್ ಝಿಯಾ ಸಾಹಿಬ್ ಹೇಳುತ್ತಾರೆ: ಡೂನ ಟೀಲ ಸಾಹಿಬ ಈ ವರ್ಷದ ಆರಂಭದಲ್ಲಿ ಬೈಅತ್ ಮಾಡಿದ್ದರು. ಅವರು ಹೇಳುತ್ತಾರೆ: ಖ಼ಲೀಫತುಲ್ ಮಸೀಹರು ಹೇಳಿದ ಎಲ್ಲ ಸಂಗತಿಗಳು ಹೃದಯಕ್ಕೆ ತಟ್ಟುವಂತಹದ್ದಾಗಿತ್ತು. ಭಾಷಣಗಳ ನಡುವೆ ನನಗೆ ಕಣ್ಣೀರು ಬರುತ್ತಿತ್ತು. ಇಸ್ಲಾಂ ಖಂಡಿತವಾಗಿಯೂ ಜೀವದಾಯಕ ಮತ್ತು ಸತ್ಯದ ಮಾರ್ಗವಾಗಿದೆ. ನನ್ನ ಜೀವನ ಮೆಲ್ಲ ಮೆಲ್ಲನೆ ಸಂಪೂರ್ಣವಾಗಿ ಬದಲಾಗುತ್ತಿದೆ. ನಾನು ಅಲ್ಲಾಹನಗೆ ಬಹಳ ಕೃತಜ್ಞತೆ ಅರ್ಪಿಸುತ್ತೇನೆ. ನನಗೆ ಅಹ್ಮದಿಯ್ಯತ್ ಸ್ವೀಕರಿಸಲು ಸೌಭಾಗ್ಯ ಲಭಿಸಿದೆ.

ಜಲ್ಸದಲ್ಲಿ ಭಾಗವಹಿಸಿದ ನಂತರ ಅಹ್ಮದಿಯ್ಯತ್ ಸ್ವೀಕರಿಸಿದ ಅನೇಕ ಘಟನೆಗಳು ಇವೆ. ಐವರಿ ಕೋಸ್ಟಿನ ಒಬ್ಬ ಅಹ್ಮದಿಯೇತರ ಸಹೋದರ ಹಸನ್ ಸಾಹಿಬ್ ಹೇಳುತ್ತಾರೆ: ಜಲ್ಸದ ಮೂರು ದಿನಗಳ ಪ್ರೋಗ್ರಾಮುಗಳನ್ನು ನೋಡಲು ಸೌಭಾಗ್ಯ ಸಿಕ್ಕಿತು. ಅತ್ಯಂತ ವಿಶ್ವಾಸವರ್ಧಕವಾಗಿದ್ದವು. ಸುಳ್ಳಿನ ವಯಸ್ಸು ಹೆಚ್ಚಿರುವುದಿಲ್ಲ. ಅದು ಸ್ವತಃ ಸತ್ತು ಹೋಗುತ್ತದೆ. ಸತ್ಯ ಸದಾ ನೆಲೆನಿಲ್ಲುತ್ತದೆ. ಇದೇ ತತ್ವದ ಪ್ರಕಾರ ಅಹ್ಮದಿಯ್ಯತ್ತಿನ ದಿನನಿತ್ಯದ ಪ್ರಗತಿ ಅದರ ಸತ್ಯತೆಯ ಸಬೂತಾಗಿದೆ. ಅವರು ಹೇಳುತ್ತಾರೆ: ಜಲ್ಸ ಸಾಲಾನ ಮುಗಿದ ನಂತರ ನಾವು ಕೆಲವು ಸ್ನೇಹಿತರು ಒಂದು ರೆಸ್ಟೋರೆಂಟಿನಲ್ಲಿ ಮಾತುಕತೆ ನಡೆಸುತ್ತಿದ್ದುವು. ಒಬ್ಬ ಅಪರಿಚಿತ ವ್ಯಕ್ತಿ ನಮ್ಮ ಮಾತುಗಳನ್ನು ಕೇಳಿ ಹೇಳಿದರು: ಇಂದು ಇಸ್ಲಾಮಿನ ಯಥಾರ್ಥ ಶಿಕ್ಷಣಗಳ ಪ್ರಕಾರ ನಡೆಯುವ ಯಾವುದಾದರೂ ಜಮಾಅತ್ ಇದ್ದರೆ ಅದು ಅಹ್ಮದಿಯಾ ಜಮಾಅತ್ ಮಾತ್ರವಾಗಿದೆ. ಇಷ್ಟು ಹೇಳಿ ಆ ಅಪರಿಚಿತ ವ್ಯಕ್ತಿ ಹೊರಟು ಹೋದರು. ಆದರೆ ನಮ್ಮ ಮಾತುಗಳನ್ನು ಸತ್ಯಪಡಿಸಿದರು. ಅದರ ನಂತರ ಹಸನ್ ಸಾಹಿಬ್ ನಮ್ಮ ಮುಅಲ್ಲಿಮರನ್ನು ಭೇಟಿಯಾದರು. ನಾನು ಬೈಅತ್ ಮಾಡಿ ಅಹ್ಮದಿಯ್ಯತ್ತಿನಲ್ಲಿ ಪ್ರವೇಶಿಸಲು ಬಯಸುತ್ತೇನೆ ಎಂದು ಹೇಳಿದರು. ಇನ್ನು ನಾನು ಹೆಚ್ಚು ಸಮಯ ಸತ್ಯದಿಂದ ದೂರವಿರಲಾರೆನು ಎಂದು ಹೇಳಿದರು.

ಕಾಂಗೋ ಬರಾಝೀಲಿನ ಮುಬಲ್ಲಿಗ್ ಇಂಚಾರ್ಜ್ ಹೇಳುತ್ತಾರೆ: ಒಂದು ಜಮಾಅತಾದ ಗಂಬೂಮಾದಲ್ಲಿ ಮೂರು ದಿನಗಳು ಟಿ.ವಿ. ಮತ್ತು ರೇಡಿಯೋದಲ್ಲಿ ಜಲ್ಸದ ಎಲ್ಲ ಪ್ರೋಗ್ರಾಮುಗಳನ್ನು ಲೈವ್ ತೋರಿಸಲು ಸೌಭಾಗ್ಯ ಲಭಿಸಿತು. ಈ ಪ್ರದೇಶದಲ್ಲಿ ಕೇವಲ ಒಂದು ಟಿ.ವಿ. ಸ್ಟೇಶನ್ ಇದೆ. ಅದರಲ್ಲಿ ನಮ್ಮ ಜಲ್ಸದ ಪ್ರೋಗ್ರಾಂ ಪ್ರಸಾರವಾಗುತ್ತಿತ್ತು. ಒಂದು ಅಂದಾಜು ಪ್ರಕಾರ

ನಾಲ್ಕು ಸಾವಿರ ಜನರು ಅಲ್ಲಿ ಜಲ್ಸ ನೋಡಿರಬಹುದು. ಗಂಬೂಮದ ಸುತ್ತಮುತ್ತಲಿನ ಮೂವತ್ತು ಗ್ರಾಮಗಳ ಜಮಾಅತ್‌ಗಳು ಸಹ ರೇಡಿಯೋ ಮೂಲಕ ಜಲ್ಸ ಸಾಲಾನದಲ್ಲಿ ಭಾಗಿಯಾದರು. ಈ ಪ್ರದೇಶಗಳಲ್ಲಿ ಕರೆಂಟಿನ ಸೌಕರ್ಯವಿಲ್ಲ. ಆದ್ದರಿಂದ ಅಲ್ಲಿಯ ಜನರು ರೇಡಿಯೋ ಮೂಲಕ ಕೇಳುತ್ತಾರೆ.

ಅವರು ಅಲ್ಲಿ ನನ್ನ ಎಲ್ಲ ಭಾಷಣಗಳನ್ನು ಅಲ್ಲಿಯ ಲೋಕಲ್ ಭಾಷೆಯಾದ ಲಂಗಾಲದಲ್ಲಿ ಕೇಳಿದರು. ಅವರು ಹೇಳುತ್ತಾರೆ: ಪ್ರೋಗ್ರಾಂ ವಿಜಯಕರವಾಗಿತ್ತು ಅಲ್‌ಹಮ್ದುಲಿಲ್ಲಾಹ್. ಅದರ ಕುರಿತು ಸ್ವಂತ ಜನರು ಮತ್ತು ಅನ್ಯರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಮೂರೂ ದಿನಗಳು ಎಲ್ಲ ಕಡೆ ಜಲ್ಸದ ವಾತಾವರಣವಾಗಿತ್ತು. ಅದೇ ರೀತಿಯಲ್ಲಿ ಜಲ್ಸದಲ್ಲಿ ಮಾಡಲಾಗುವಂತೆ ಊಟದ ವ್ಯವಸ್ಥೆ ಮಾಡಲಾಗಿತ್ತು. ಜಲ್ಸದ ನಡುವೆ 12 ವ್ಯಕ್ತಿಗಳಿಗೆ ಅಹ್ಮದಿಯಾ ಜಮಾಅತಿನಲ್ಲಿ ಪ್ರವೇಶಿಸಲು ಸೌಭಾಗ್ಯ ಸಿಕ್ಕಿತ್ತು.

ಗಿನಿಬಸಾವಿನ ಮುಬಲ್ಲಿಗ್ ಬರೆಯುತ್ತಾರೆ: ಅಲ್ಲಾಹನ ಅನುಗ್ರಹದಿಂದ ಹೆಚ್ಚಿನ ನವ ಅಹ್ಮದಿಗಳು ಅಹ್ಮದಿಯ್ಯತ್ ಸ್ವೀಕರಿಸಿದ ನಂತರ ತಮ್ಮ ತಮ್ಮ ಪ್ರದೇಶಗಳಲ್ಲಿ ತಮ್ಮ ಸ್ನೇಹಿತರಿಗೆ ಮತ್ತು ಸಂಬಂಧಿಕರಿಗೆ ತಬ್ಲೀಗ್ ಮಾಡುತ್ತಿದ್ದಾರೆ. ಜಲ್ಸ ಸಾಲಾನದ ಸಂದರ್ಭದಲ್ಲಿ ಜಮಾಅತಿನ ಸಹೋದರರೊಡನೆ ಪ್ರೋಗ್ರಾಮ್ ನೋಡಲು ಮನವಿ ಮಾಡಲಾದಾಗ ಎಲ್ಲ ನವ ಅಹ್ಮದಿಯರು ಮತ್ತು ಅಹ್ಮದಿಯೇತರರು ಜಲ್ಸದ ಕಾರ್ಯಕ್ರಮಗಳನ್ನು ಕಾಣುವ ಸಲುವಾಗಿ ಹದಿನೆಂಟು ಮತ್ತು ಮೂವತ್ತು ಕಿಲೋಮೀಟರ್ ದೂರವನ್ನು ಸೈಕಲ್ ಸವಾರಿ ಮಾಡುತ್ತಾ ಅಥವಾ ಪಾದಚಾರಿಗಳಾಗಿ ತಲಪಿದರು. ಹೆಚ್ಚಿನವರು ಮೊದಲ ದಿನದ ನನ್ನ ಭಾಷಣವನ್ನು ಕೇಳಲು ಬಂದಿದ್ದರು. ಆದರೆ ಮೊದಲ ದಿನದ ಭಾಷಣವನ್ನು ಕೇಳಿದಾಗ ಅವರು ತೀರ್ಮಾನ ಬದಲಾಯಿತು. ಅವರು ಮೂರೂ ದಿನಗಳು ತಂಗಲು ತೀರ್ಮಾನಿಸಿದರು. ಮೂರನೇ ದಿನದ ಸಮಾರೋಪ ಭಾಷಣವನ್ನು ಕೇಳಿದ ನಂತರ ಈ ಜನರು ಹೇಳಿದರು: ನಿಮ್ಮ ಖಲೀಫರು ನಮ್ಮ ಮನಸ್ಸನ್ನು ಗೆದ್ದಿದ್ದಾರೆ. ಅವರು ಮುಂದಿರಿಸಿದ ಇಸ್ಲಾಮೇ ಯಥಾರ್ಥ ಇಸ್ಲಾಂ ಆಗಿದೆ. ಆ ಸಂದರ್ಭದಲ್ಲಿ 127 ಜನರು ಬೈಅತ್ ಮಾಡಿದರು.

ಕಾಂಗೋದ ಮುಅಲ್ಲಿಮ್ ಇಬ್ರಾಹೀಂ ಸಾಹಿಬ್ ಹೇಳುತ್ತಾರೆ: ಒಬ್ಬ ಕ್ರೈಸ್ತ ಮಿತ್ರನಾದ ಮೋಕ್ ನಿಗಾ ಜೀಬಿ ಸಾಹಿಬ್‌ರನ್ನು ಜಲ್ಸ ನೋಡಲು ಆಮಂತ್ರಿಸಲಾಗಿತ್ತು. ಅವರು ತನ್ನ ಪತ್ನಿಯೊಂದಿಗೆ ಜಲ್ಸದಲ್ಲಿ ಭಾಗಿಯಾದರು. ಜಲ್ಸ ನೋಡಿದ ನಂತರ ಅವರು ತನ್ನ ಪತ್ನಿಯೊಡನೆ ಹೇಳಿದರು: ಈ ರೀತಿಯ ಶಿಕ್ಷಣಗಳು ಮತ್ತು ಮಾರ್ಗದರ್ಶನಗಳು ಬೇರೆಲ್ಲೂ ಸಿಗಲಿಕ್ಕಿಲ್ಲವೆಂದು ನನಗೆ ತೋರುತ್ತದೆ. ನಾವು ನಮ್ಮ ಜೀವಿತದ ಒಂದು ದೀರ್ಘ ಕಾಲ ಕ್ರೈಸ್ತ ಧರ್ಮದಲ್ಲಿ ವ್ಯರ್ಥಗೊಳಿಸಿದೆವು. ಇಲ್ಲಿ ಮೂರು ದಿನಗಳ ಕಾಲ ನಾವು ಕಲಿತುದನ್ನು ಕ್ರೈಸ್ತರಾಗಿ ಜೀವಿಸಿ ಇಷ್ಟರವರೆಗೆ ಸಹ ಕಲಿತುಕೊಳ್ಳಲು ಸಾಧ್ಯವಾಗಲಿಲ್ಲ. ಈಗ ನಮಗೆ ಒಳಿತು ಏನೆಂದರೆ, ನಾವು ಇವರೊಂದಿಗೆ ಭಾಗಿಯಾಗಬೇಕು. ಹೀಗೆ ಪತಿ ಪತ್ನಿ ಮತ್ತು ಮಕ್ಕಳು ಬೈಅತ್ ಮಾಡಿ ಅಹ್ಮದಿಯಾ ಜಮಾಅತಿನಲ್ಲಿ ಪ್ರವೇಶಿಸಿದರು.

ಗಿನಿಬಸಾವ್ ದೇಶದ ಮುಬಲ್ಲಿಗ್ ಇಂಚಾರ್ಜ್ ಹೇಳುತ್ತಾರೆ: ಗಿನಿಬಸಾವಿನ ಬಾಫ್‌ಟಾ ರೀಜಿನಿನ ಒಬ್ಬ ಅಹ್ಮದಿಯೇತರ ವ್ಯಕ್ತಿಯಾದ ಕಂಬ ಜಾವು ಸಾಹಿಬ್ ಜಲ್ಸ ಸಾಲಾನ ಯು.ಕೆ.ಯ ಮೂರೂ ದಿನಗಳ ಕಾರ್ಯಕ್ರಮಗಳನ್ನು ಕೇಳಿದರು. ನನ್ನ ಭಾಷಣಗಳನ್ನು ಸಹ ಕೇಳಿದರು. ಅವರು ಹೇಳಿದರು: ಇಸ್ಲಾಮಿಗೆ ಈಗ ಒಬ್ಬ ನೇತಾರರ ಆವಶ್ಯಕತೆ ಇದೆ. ಆ ನೇತಾರ ಅಹ್ಮದಿಯಾ ಜಮಾಅತಿನಲ್ಲಿ ಖಲೀಫರ ರೂಪದಲ್ಲಿ ಇರುವರು. ಅವರ ಮೂಲಕವೇ ಇಸ್ಲಾಮಿಕ ಲೋಕ ಒಂದಾಗಬಹುದು. ಈ ರೀತಿಯಲ್ಲಿ ಆ ವ್ಯಕ್ತಿ ಜಲ್ಸ ಮುಕ್ತಾಯಗೊಂಡಾಗ ಬೈಅತ್ ಮಾಡಿ ಅಹ್ಮದಿಯರಾದರು.

ಕಾಂಗೋ ಬ್ರಾಝ್ವೆಲಿನ ಒಬ್ಬ ಕ್ರೈಸ್ತ ಸಹೋದರ ಅಂಗೋತಾನಿ ಸಾಹಿಬ್ ಹೇಳುತ್ತಾರೆ: ನಾನು ಎಂದಿಗೂ ಯಾವುದೇ ಧರ್ಮದಲ್ಲಿ ಆಸಕ್ತಿ ತೋರಿಸಿಲ್ಲ. ಏಕೆಂದರೆ ಕ್ರೈಸ್ತರನ್ನು ನೋಡಿ, ಧಾರ್ಮಿಕ ಜನರು ನಿಷ್ಠಾವಂತರಾಗಿರುವುದಿಲ್ಲವೆಂದು ತೋರುತ್ತಿತ್ತು. ನನ್ನ ಸಹೋದರ ಮೊದಲೇ ಅಹ್ಮದಿಯಾ ಜಮಾಅತಿನಲ್ಲಿ ಸೇರಿದ್ದರು. ನನಗೆ ಜಲ್ಸದಲ್ಲಿ ಭಾಗವಹಿಸಲು ಆಮಂತ್ರಿಸಿದರು. ಸಹೋದರನು ಹೇಳಿದ ಕಾರಣ ಬಂದೆನು. ಜಲ್ಸ ನೋಡುತ್ತಿದ್ದಂತೆ ನನ್ನೊಳಗೆ ಬದಲಾವಣೆಗಳು ಉಂಟಾಗಲು ಶುರುವಾದುವು. ಧರ್ಮದೊಂದಿಗೆ ಸಂಬಂಧ ಉಂಟಾಗಲು ಶುರುವಾಯಿತು. ಖಲೀಫರು ಭಾಷಣಗಳನ್ನು ಕೇಳಿ, ಧರ್ಮವು ಒಂದು ಸತ್ಯವಾಗಿದೆ ಎಂದು ನನ್ನ ಹೃದಯ ಸಾಕ್ಷಿ ಹೇಳಿತು. ಸತ್ಯ ಧರ್ಮಕ್ಕೆ ಹೃದಯಗಳನ್ನು ಬದಲಾಯಿಸುವ ಶಕ್ತಿಯಿದೆ. ನಾನು ಜೀವಿತದಲ್ಲಿ ಮೊದಲ ಬಾರಿಗೆ ಇಸ್ಲಾಂ ಅಹ್ಮದಿಯ್ಯತ್ತನ್ನು ಧರ್ಮವಾಗಿ ಸ್ವೀಕರಿಸುತ್ತಿದ್ದೇನೆ.

ನೈಜೀರಿಯದ ಒಬ್ಬ ಅಹ್ಮದಿಯೇತರ ಸಹೋದರನಿಗೆ ಜಲ್ಸ ಆಲಿಸಿ ಬೈಅತ್ ಮಾಡುವ ಸೌಭಾಗ್ಯ ಸಿಕ್ಕಿತು. ಅವರು ಹೇಳುತ್ತಾರೆ: ನಾನು ಜಲ್ಸದ ಪ್ರೋಗ್ರಾಮುಗಳನ್ನು ನೋಡಿ ಬಹಳ ಪ್ರಭಾವಿತನಾದೆನು. ಯಾವ ಸತ್ಯವನ್ನು ಹುಡುಕುತ್ತಿದ್ದೆನೋ ಅದು ನನಗೆ ಸಿಕ್ಕಿದೆ. ಈಗ ನಾನು ಬೈಅತ್ ಮಾಡಲು ಬಯಸುತ್ತೇನೆ.

ಸಿನಿಗಾಲಿನ ಮುಝ್ಫರ್ ಇಕ್ಬಾಲ್ ಸಾಹಿಬರು ಹೇಳುತ್ತಾರೆ: ಅಂಬೂರ್ ರೀಜನಿನಲ್ಲಿ ಜಲ್ಸದ ದಿನಗಳಲ್ಲಿ ನನ್ನ ಭಾಷಣಗಳು ನಾಲ್ಕು ರೇಡಿಯೋ ಮತ್ತು ಒಂದು ಟಿ.ವಿ. ಚಾನಲಿನಲ್ಲಿ ನೇರಪ್ರಸಾರವಾಗುತ್ತಿದ್ದುವು. ಒಂದು ರೇಡಿಯೋದಲ್ಲಿ ತಮ್ಮ ಭಾಷೆಯಲ್ಲಿ ಭಾಷಣಗಳನ್ನು ಕೇಳಿ ಒಬ್ಬರು ಅಹ್ಮದಿಯ್ಯತ್ ಸ್ವೀಕರಿಸಿದರು. ಅವರು ಬಹಳ ವಿದ್ಯಾವಂತರಾಗಿದ್ದರು. ಅವರು ಹೇಳಿದರು: ನಾನು ಜಮಾಅತಿನ ಬಗ್ಗೆ ಬಹಳಷ್ಟು ಕೇಳಿದ್ದೆ. ಆದರೆ ಈಗ ಜಮಾಅತಿನ ಇಮಾಮರ ಮಾತುಗಳನ್ನು ಕೇಳಿ ನನಗೆ ಸತ್ಯದ ಅರಿವಾಗಿದೆ. ಆದ್ದರಿಂದ ನಾನು ಅಹ್ಮದಿಯಾ ಜಮಾಅತಿನಲ್ಲಿ ಪ್ರವೇಶಿಸುತ್ತೇನೆ. ಅದೇ ದಿನ ಅವರು ಕುಟುಂಬ ಸಮೇತ ಬೈಅತ್ ಮಾಡಿದರು.

ಕೇಮರೂನಿನ ಒಬ್ಬ ಲೋಕಲ್ ಇಮಾಂ ಹೇಳುತ್ತಾರೆ: ಜಲ್ಸದ ಒಂದು ಮುಖ್ಯ ಸಂಗತಿ ಅಹ್ಮದಿಯ ಜಮಾಅತಿನ ಇಮಾಮಿನ ಭಾಷಣಗಳಾಗಿವೆ. ಜಮಾಅತಿನ ಖಲೀಫ ಪ್ರತಿಯೊಂದು ಮಾತನ್ನು ಪವಿತ್ರ ಖುರ್‌ಆನ್ ಮತ್ತು ಹದೀಸಿನಿಂದ ಹೇಳುತ್ತಾರೆ. ಅದು ನನ್ನ ಹೃದಯುವನ್ನು ಬಹಳ ಪ್ರಭಾವಿತಗೊಳಿಸಿತು. ಖಂಡಿತವಾಗಿಯೂ ಈ ಜಮಾಅತ್ ಮತ್ತು ಖಲೀಫ ಅಲ್ಲಾಹನ ಕಡೆಯಿಂದಾಗಿದೆ. ನನ್ನ ಹೃದಯ ಸಂತೃಪ್ತಿಗೊಂಡಿದೆ. ಹೀಗೆ ಅವರು ತಮ್ಮ ಸ್ನೇಹಿತರ ಸಮೇತ ಬೈಅತ್ ಮಾಡಿ ಅಹ್ಮದಿಯಾ ಜಮಾಅತಿನಲ್ಲಿ ಪ್ರವೇಶಿಸಿದರು. ನ್ಯಾಯದ ದೃಷ್ಟಿಯಿಂದ ನೋಡುವವರು ಅಲ್ಲಾಹನ ಅನುಗ್ರಹದಿಂದ ಉಲೇಮರಲ್ಲೂ ಇದ್ದಾರೆ. ಅಂತಹವರು ಸತ್ಯವನ್ನು ನೋಡಿ ಅದನ್ನು ಸ್ವೀಕರಿಸುತ್ತಾರೆ. ಮಾಲಿಯಲ್ಲಿ ಅಹ್ಮದಿಯೇತರರು ಜಲ್ಸವನ್ನು ನೋಡಿದ ನಂತರ ಅಹ್ಮದಿಯ್ಯತ್ ಪ್ರವೇಶಿಸಿದರು ಜಲ್ಸಕ್ಕೆ ಮುಂಚೆ ಜಮಾಅತಿನ ರೇಡಿಯೋದಲ್ಲಿ ಜಲ್ಸದ ಬಗ್ಗೆ ಪ್ರೋಗ್ರಾಮುಗಳನ್ನು ಮಾಡಲಾಗಿತ್ತು. ಜಲ್ಸದ ಬಗ್ಗೆ ದಿನಾಲೂ ರೇಡಿಯೋದಲ್ಲಿ ಘೋಷಿಸಲಾಗುತ್ತಿತ್ತು. ನಾವು ಪ್ರತಿಯೊಬ್ಬರೊಡನೆ ಜಲ್ಸ ನೋಡಲು ಮಿಶನಿಗೆ ಬರಲು ಆಮಂತ್ರಿಸಿದೆವು. ಹೀಗೆ ಜಲ್ಸದ ದಿನಗಳಲ್ಲಿ ಅಹ್ಮದಿಯರಲ್ಲದೆ ಅಹ್ಮದಿಯೇತರ ಜನರು ಸಹ ಜಲ್ಸದ ಪ್ರಸಾರಗಳನ್ನು ನೋಡಲು ಬಂದಿದ್ದರು. ಜಲ್ಸದ ಕೊನೆಯ ದಿನ ನಾಲ್ಕು ವ್ಯಕ್ತಿಗಳು ಬೈಅತ್ ಮಾಡಿ ಅಹ್ಮದಿಯ್ಯತಿಗೆ ಪ್ರವೇಶಿಸಿದರು. ಈ ವ್ಯಕ್ತಿಗಳು ವಿದ್ಯಾವಂತರಾಗಿರುವವರು. ಅವರು ಹೇಳುತ್ತಾರೆ: ನಾವು ದೀರ್ಘ ಕಾಲದಿಂದ ಕಾಯಿ ಪಟ್ಟಣದಲ್ಲಿ ರೇಡಿಯೋ ಆಲಿಸುತ್ತಿದ್ದೆವು. ನಮಗೆ ಅಹ್ಮದಿಯ್ಯತ್ ಬಗ್ಗೆ ಅಭಿರುಚಿಯಿತ್ತು. ನಾವು ರೇಡಿಯೋದಲ್ಲಿ ಜಲ್ಸದ ಬಗ್ಗೆ ಕೇಳಿದಾಗ, ಈ ಜಲ್ಸವನ್ನು ಖಂಡಿತ ನೋಡಬೇಕೆಂಬ ತ್ವರೆಯುಂಟಾಯಿತು. ಜಲ್ಸವನ್ನು ನೋಡಿದ ನಂತರ ಅವರು ಹೇಳುತ್ತಾರೆ: ಇಸ್ಲಾಮಿನ ವಿಜಯ ಮತ್ತು ಅಭಿವೃದ್ಧಿ ಕೇವಲ ಅಹ್ಮದಿಯ್ಯತಿನೊಂದಿಗೆ ಸೇರಿಕೊಂಡಿದೆ. ಯಾವ ಇಸ್ಲಾಮನ್ನು ಅಹ್ಮದಿಯಾ ಜಮಾಅತ್ ಮುಂದಿರಿಸುತ್ತಿದ್ದೆಯೋ ಅದೇ ಯಥಾರ್ಥ ಇಸ್ಲಾಂ ಆಗಿದೆ. ಅತ್ಯಂತ ಮುಖ್ಯ ವಿಷಯವೇನೆಂದರೆ, ಮುಸ್ಲಿಮರಿಗೆ ಅವರ ಮಾರ್ಗದರ್ಶನ ಮಾಡುವಂತಹ ಒಬ್ಬ ಖಲೀಫರ ಆವಶ್ಯಕತೆಯಿದೆ. ಈಗಿನ ಕಾಲದಲ್ಲಿ ಇಸ್ಲಾಮಿನಲ್ಲಿ ಖಿಲಾಫತ್ ಅಹ್ಮದಿಯ ಖಿಲಾಫತ್ ಮೂಲಕ ಜಾರಿಯಲ್ಲಿದೆ. ಈಗ ನಾವು ದೃಢವಾದ ಅಹ್ಮದಿಯಾಗಿರುವೆವು. ಒಬ್ಬ ಅಹ್ಮದಿ ನೀಡಬೇಕಾದ ಮಾಸಿಕ ಚಂದಾ ಎಷ್ಟೆಂದು ನಮ್ಮೊಡನೆ ಹೇಳಿರಿ. ನಾವು ಪ್ರತಿ ತಿಂಗಳು ದೀನಿನ ಸೇವೆಗಾಗಿ ಚಂದಾ ಸಹ ನೀಡುವೆವು.

ಮಾಲಿಯ ಅಮೀರ್ ಸಾಹಿಬ್ ಬರೆಯುತ್ತಾರೆ: ಕಾಯಿ ರೀಜನಿನ ಮಿಶನ್ ಹೌಸಿನಲ್ಲಿ ಜಲ್ಸದ ಪ್ರಸಾರಗಳನ್ನು ನೋಡಲು ಅಹ್ಮದಿಯೇತರ ಜನರು ಬಂದರು. ಜಲ್ಸದ ಮೂರನೇ ದಿನ ಬೈಅತಿನ ವಿಶ್ವಾಸವರ್ಧಕ ದೃಶ್ಯಗಳ ಒಂದು ಡೊಕ್ಯೂಮೆಂಟರಿಯನ್ನು ತೋರಿಸಲಾದಾಗ ವಿದ್ಯಾವಂತರಾದ ಅವರು ಬೈಅತಿನ ಶರತ್ತುಗಳು ಏನೆಂದು ಕೇಳಿದರು. ಬಿಡುವಿನ ವೇಳೆ ಉಪಸ್ಥಿತರಿದ್ದ ಎಲ್ಲರಿಗೂ ಮುಅಲ್ಲಿಂ ಸಾಹಿಬ್‌ರು ಬೈಅತಿನ ಶರತ್ತುಗಳನ್ನು ಲೋಕಲ್ ಭಾಷೆಯಲ್ಲಿ ತರ್ಜುಮೆ ಮಾಡಿ ಓದಿ ಹೇಳಿದರು. ಆ ಅಹ್ಮದಿಯೇತರ ವ್ಯಕ್ತಿಗಳು ಹೇಳಿದರು: ಇದು ಇಸ್ಲಾಮಿನ ಸಾರಾಂಶವಾಗಿದೆ. ಇದರಲ್ಲಿ ಸಾಮೂಹಿಕ ಜೀವನ ಸಾಗಿಸಲು ಅತ್ಯುತ್ತಮ ಮಾರ್ಗದರ್ಶನವಿದೆ. ಇದರ ಪ್ರಕಾರ ನಡೆಯುವುದು ಎಲ್ಲರಿಗೂ ಬಹಳ ಮುಖ್ಯವಾಗಿದೆ. ಹೀಗೆ ಜಲ್ಸದ ನಂತರ ಅವರು ಬೈಅತ್ ಮಾಡಿದರು.

ಘಾನದಲ್ಲಿ ಲೈವ್ ಸ್ಟ್ರೀಮಿಂಗಿನ ಮೂಲಕ ಜನರು ಜಲ್ಸದಲ್ಲಿ ಭಾಗವಹಿಸಿದ್ದರು. ಬುಸ್ತಾನೆ ಅಹ್ಮದಿನ ಹಚ್ಚಹಸುರು ಪ್ರದೇಶದಲ್ಲಿ ಜಲ್ಸ ಕೇಳುವ ವ್ಯವಸ್ಥೆ ಮಾಡಲಾಗಿತ್ತು. ಅವರು ಹೇಳುತ್ತಾರೆ: ವಾತಾವರಣ ಬಹಳ ಉತ್ತಮವಾಗಿತ್ತು. ಆವೇಶಭರಿತವಾಗಿತ್ತು. ಎರಡು ಕಡೆಗಳಲ್ಲಿ ಎರಡು ದೊಡ್ಡ ಸ್ಕ್ರೀನ್‌ಗಳಲ್ಲಿ ಸಹೋದರ ಸಹೋದರಿಯರು ನೇರವಾಗಿ ಜಲ್ಸದ ದೃಶ್ಯಗಳನ್ನು ನೋಡುತ್ತಿದ್ದರು. ಮೂರು ದಿನಗಳಲ್ಲಿ 2500ಕ್ಕಿಂತ ಹೆಚ್ಚಿನ ಸಹೋದರ ಸಹೋದರಿಯರು ಜಲ್ಸದಲ್ಲಿ ಭಾಗಿಯಾದರು. ಖುಮಾಸಿ ಅಹ್ಮದಿಯ ಸೆಂಟರ್ ಮಸೀದಿಯಲ್ಲಿ ದೊಡ್ಡ ಮಟ್ಟದಲ್ಲಿ ಏರ್ಪಾಡು ಮಾಡಲಾಗಿತ್ತು. ಅಲ್ಲಿ ಮೂರು ದಿನಗಳಲ್ಲಿ ಸಾವಿರಕ್ಕಿಂತ ಹೆಚ್ಚು ಜನರು ಜಲ್ಸದಲ್ಲಿ ಭಾಗಿಯಾದರು. ಅಪ್ಪರ್‌ವೆಸ್ಟ್ ವಾಹ್‌ನಲ್ಲಿ ಹನ್ನೆರಡು ಮಸೀದಿಗಳಲ್ಲಿ ಒಟ್ಟಾಗಿ ಜಲ್ಸ ಸಾಲಾನದ ಕಾರ್ಯಕ್ರಮಗಳನ್ನು ಕೇಳುವ ವ್ಯವಸ್ಥೆ ಮಾಡಲಾಗಿತ್ತು. ಅದೇ ರೀತಿಯಲ್ಲಿ ಇತರ ಎಲ್ಲ ರೀಜನ್‌ಗಳಲ್ಲಿ ಹದಿನಾಲ್ಕು ಸ್ಥಳಗಳಲ್ಲಿ. ಹೀಗೆ ಇಲ್ಲೂ 2000

ಸಾವಿರಕ್ಕಿಂತ ಹೆಚ್ಚಿನ ಜನರು ಒಟ್ಟಾಗಿ ಜಲ್ಸ ಕೇಳಿದರು. ಇತರ ಚಾನಲ್‌ಗಳ ಮೂಲಕವೂ ಎಂ.ಟಿ.ಎ. ನೋಡುತ್ತಿದ್ದರು.

ಎಂ.ಟಿ.ಎ. ಆಫ್ರಿಕ, ಎಂ.ಟಿ.ಎ ಘಾನವಲ್ಲದೇ ಜಲ್ಸದ ಕಾರ್ಯಕ್ರಮಗಳನ್ನು ಘಾನದ ಇತರ ಮೂರು ಟಿ.ವಿ. ಚಾನಲ್‌ಗಳಲ್ಲೂ ನೋಡಬಹುದಾಗಿತ್ತು.

ಯಮನ್ ದೇಶದ ಅಕ್ರಮ್ ಅಲಿ ಸಾಹಿಬ್ ಹೇಳುತ್ತಾರೆ: ಇಂದು ಖ಼ಲೀಫತುಲ್ ಮಸೀಹರು ಈ ಜಲ್ಸದಲ್ಲಿ ಭಾಷಣಗಳ ಮೂಲಕ ನಮ್ಮ ಹೃದಯಗಳು ಮತ್ತು ಆತ್ಮಗಳಿಗೆ ಹೊಸ ಜೀವನವನ್ನು ನೀಡಿರುವರು. ನಮ್ಮ ಕಣ್ಣುಗಳಿಂದ ಕಣ್ಣೀರು ಬತ್ತಿ ಹೋಗಿದ್ದುವು. ಅದು ಮರಳಿ ಬಂದಿದೆ. ಹೃದಯ ಕಠಿಣವಾದ ನಂತರ ಈಗ ಮೃದುವಾಗಿದೆ. ಲಜ್‌ನವನ್ನು ಸಂಬೋಧಿಸಿ ಖಲೀಫರು ಮಾಡಿದ ಭಾಷಣವನ್ನು ಆಲಿಸಿ ಎಲ್ಲ ಸಮಾಜದವರು ಅದನ್ನು ಕೃತಿರೂಪಕ್ಕೆ ಇಳಿಸುವುದಾದರೆ ಸಮಾಜ ಶೇಕಡಾ ನೂರರಷ್ಟು ಸುಧಾರಿಸಲ್ಪಡುವುದು. ಅದೇ ರೀತಿಯಲ್ಲಿ ಕೊನೆಯ ಭಾಷಣ ಎಲ್ಲ ವ್ಯವಸ್ಥೆಯನ್ನು ಬೆಳಗಿಸಿತು. ಈ ಎಲ್ಲ ವ್ಯವಸ್ಥೆಗೆ ಲೋಕದಲ್ಲಿ ಉದಾಹರಣೆಯಿಲ್ಲ. ಎಲ್ಲ ಮುಖಗಳು ಮುಗುಳ್ನಗುತ್ತಿದ್ದುವು. ಜಮಾಅತ್ತನ್ನು ಮಾಡಿದ್ದು ಅಲ್ಲಾಹನ ಅನುಗ್ರಹವಾಗಿದೆ.

ಯಮನಿನಿಂದ ಯಾಮಿರ್ ಅಲಿ ಸಾಹಿಬ್ ಹೇಳುತ್ತಾರೆ: ಜಲ್ಸದ ಮೂರು ದಿನಗಳು ನಮಗೆ ಹಬ್ಬವಾಗಿತ್ತು. ಅಲ್ಲಿ ನಾವು ಅಲ್ಲಾಹನು ಅನುಗ್ರಹಗಳು ಇಳಿಯುತ್ತಿರುವುದನ್ನು ಮತ್ತು ಹಝ್ರ಼ತ್ ಮಸೀಹ್ ಮೌಊದ್‌ರೊಡನೆ ಅಲ್ಲಾಹನು ಮಾಡಿದ ವಾಗ್ದಾನಗಳು ಈಡೇರುತ್ತಿರುವುದನ್ನು ನೋಡಿದೆವು. ಜಲ್ಸದಿಂದ ಖಿಲಾಫತ್ ಅಹ್ಮದಿಯ್ಯದ ಮೇಲೆ ನಮ್ಮ ವಿಶ್ವಾಸ ದಿನ ಕಳದಂತೆ ವರ್ಧಿಸುತ್ತಾ ಹೋಯಿತು. ಏಕೆಂದರೆ ಯಾವ ರೀತಿಯಲ್ಲಿ ಅಲ್ಲಾಹನ ಸಹಾಯ ಖ಼ಿಲಾಫತಿನೊಂದಿಗೆ ಇದೆ ಎಂದು ನಾವು ನೋಡಿದೆವು. ಖ಼ಿಲಾಫತ್ ಇಲ್ಲದೇ ಅಂಧಕಾರವಲ್ಲದೆ ಬೇರೇನೂ ಇಲ್ಲ. ನಾವು ಶಾರೀರಿಕವಾಗಿ ಜಲ್ಸದಲ್ಲಿ ಭಾಗಿಯಾಗಿರಲಿಲ್ಲ. ಆದರೆ ನಮ್ಮ ಹೃದಯಗಳು ನಿಮ್ಮೊಂದಿಗೆ ಇದ್ದುವು. ನಾವು ಜಲ್ಸದ ಆಧ್ಯಾತ್ಮಿಕ ವಾತಾವರಣವನ್ನು ನಾವು ಅಲ್ಲಿದ್ದೇವೆ ಎಂಬ ರೀತಿಯಲ್ಲಿ ಅನುಭವಿಸುತ್ತಿದ್ದೆವು. ನಾವು ನಿಮ್ಮನ್ನು ನೋಡಿ ಮತ್ತು ನಿಮ್ಮ ಉಪದೇಶಗಳನ್ನು ಕೇಳಿ ಆವೇಶಭರಿತಗೊಳ್ಳುತ್ತಿದ್ದೆವು. ಅದನ್ನು ವಿವರಿಸಲು ಸಾಧ್ಯವಲ್ಲ. ಬಹಳ ಆಳವಾಗಿ ಹೃದಯದಲ್ಲಿ ಪ್ರಭಾವವಾಗುತ್ತಿತ್ತು. ಭಾಷಣಗಳಿಂದ ಬಹಳ ಪ್ರಯೋಜನ ಪಡೆದವು. ಏಕೆಂದರೆ ನನಗೆ ನನ್ನ ಹಲವು ಜವಾಬ್ದಾರಿಗಳ ಬಗ್ಗೆ ಶ್ರದ್ಧೆಯುಂಟಾಯಿತು. ಅದೇ ರೀತಿಯಲ್ಲಿ ನನ್ನ ಅನೇಕ ತಪ್ಪುಗಳ ಬಗ್ಗೆ ನನಗೆ ಗೊತ್ತಾಯಿತು. ನನಗೆ ಅದರ ಅರಿವು ಇರಲಿಲ್ಲ. ವಿವಿಧ ದೇಶಗಳ ಅಹ್ಮದಿಯರು ಒಟ್ಟಾಗಿ ಕುಳಿತುಕೊಂಡು ಜಲ್ಸದಲ್ಲಿ ಭಾಗವಹಿಸುವ ದೃಶ್ಯ ನನ್ನ ಹೃದಯದಲ್ಲಿ ಬಹಳ ನೋವನ್ನು ಉಂಟುಮಾಡಿತ್ತು. ಒಟ್ಟಾಗಿ ಕುಳಿತುಕೊಂಡು ಜಲ್ಸದಲ್ಲಿ ಭಾಗವಹಿಸಲು ಯಮನಿನಲ್ಲೂ ಅಲ್ಲಾಹನು ಜಾಗವನ್ನು ದಯಪಾಲಿಸಲಿ ಎಂದು ನಾನು ದುಆ ಸಹ ಮಾಡಿದೆ.

ಅರ್ದನ್‌ನಿಂದ ಹಾಮಿದ್ ಸಾಹಿಬ್‌ರು ಹೇಳುತ್ತಾರೆ: ಪ್ರತಿ ವರ್ಷ ಲೋಕದ ಎಲ್ಲದ ದೇಶಗಳ ಜನರು ಹಝ್ರ಼ತ್ ಮಸೀಹ್ ಮೌಊದ್‌ರ ಭವಿಷ್ಯವಾಣಿಯ ಸತ್ಯತೆಗೆ ಸಾಕ್ಷಿಗಳಾಗಿ ಜಲ್ಸದಲ್ಲಿ ಭಾಗಿಯಾಗುತ್ತಾರೆ. ಈ ವರ್ಷದ ಜಲ್ಸದ ವಿಶೇಷತೆಯೇನೆಂದರೆ, ಈ ವರ್ಷ ಇಂಟರ್‌ನೆಟ್ ಮತ್ತು ಎಂ.ಟಿ.ಎ. ಮೂಲಕ ಲೋಕದೆಲ್ಲಡೆಯಿಂಧ ಅಹ್ಮದಿಯರು ಹೆಚ್ಚಿನ ಸಂಖ್ಯೆಯಲ್ಲಿ ಇದರಲ್ಲಿ ಭಾಗವಹಿಸಿದರು. ಅಲ್ಲಾಹನು ಪ್ರತಿಯೊಂದು ಸ್ಥಿತಿಯಲ್ಲೂ ಜಮಾಅತಿನ ಸಹಾಯ ಮಾಡುತ್ತಾನೆ. ಏಕೆಂದರೆ ಇದೊಂದು ಸತ್ಯ ಜಮಾಅತ್ ಆಗಿದೆ. ನಾನು ಈ ವರ್ಷದ ಜಲ್ಸದಲ್ಲಿ ಖ಼ಲೀಫರ ಇರುವಿಕೆಯನ್ನು ಒಂದು ದಿವ್ಯದರ್ಶನ ಅಥವಾ ಲೋಕದಲ್ಲಿ ಸ್ವರ್ಗದೊಂದಿಗೆ ಹೋಲಿಸುತ್ತೇನೆ. ಅದರ ಹಣ್ಣುಗಳನ್ನು ನಾವು ಮೂರು ದಿನಗಳಲ್ಲಿ ತಿಂದೆವು.

ಜರ್ಮನಿಯಿಂದ ಅಬ್ದುರ್ರಹ್ಮಾನ್ ಲಬ್‌ನಾನಿ ಸಾಹಿಬ್ ಹೇಳುತ್ತಾರೆ: ನಾನು ಬರ್ಲಿನಿನ ಮಸೀದಿಯಲ್ಲಿ ಅಹ್ಮದಿ ಸಹೋದರರೊಂದಿಗೆ ಮೂರು ದಿನಗಳ ಜಲ್ಸವನ್ನು ಕೇಳಿದೆ. ಜಲ್ಸದ ಆಧ್ಯಾತ್ಮಿಕ ವಾತಾವರಣವನ್ನು ಅನುಭವಿಸಿದೆ. ಜಲ್ಸದಿಂದ ನಾವು ಬಹಳ ಪ್ರಯೋಜನ ಪಡೆದೆವು. ಯಾವ ಆಧ್ಯಾತ್ಮಿಕತೆಯ ಕೊರತೆಯನ್ನು ನಾವು ಅನುಭವಿಸುತ್ತಿದ್ದೆವೋ ಅದು ಮರಳಿ ಬಂತು.

ಫೆಲಸ್ತೀನಿನ ವೆಸ್ಟ್ ಬ್ಯಾಂಕಿನಿಂದ ಉಮರ್ ಸಾಹಿಬ್ ಹೇಳುತ್ತಾರೆ: ಈ ಜಲ್ಸ ದಿನಾಲು ಜರುಗಿ ನಾವು ಪ್ರವಾದಿಗಳು ಮತ್ತು ವಲಿಗಳಂತೆ ಆಗಲು ಬಯಸುತ್ತೇನೆ. ಎಲ್ಲ ಸಹೋದರರೊಂದಿಗೆ ಒಟ್ಟಾಗಿ ಕುಳಿತು ಜಲ್ಸವನ್ನು ಆಲಿಸಿದೆ. ಪ್ರೀತಿ ಮತ್ತು ಸಹೋದರತೆಯ ಒಂದು ವಾತಾವರಣವಾಗಿತ್ತು. ನಮಗೆ ಜಲ್ಸ ಮತ್ತು ಈದ್ ಒಟ್ಟಿಗೆ ಆದಂತಾಗಿತ್ತು.

ಇಂಡೋನೇಶಿಯದ ಒಂದು ಜಮಾಅತಿನ ಒಬ್ಬ ಸಹೋದರ ಸ್ವೀತೀನೋ ಸಾಹಿಬ್ ಹೇಳುತ್ತಾರೆ: ಜಲ್ಸ ನೋಡಿದ ಮತ್ತು ಖ಼ಲೀಫತುಲ್ ಮಸೀಹರ ಭಾಷಣಗಳನ್ನು ಕೇಳಿದ ನಂತರ ನಮ್ಮ ಕುಟುಂಬದಲ್ಲಿ ಖ಼ಿಲಾಫತಿನೊಂದಿಗೆ ಪ್ರೀತಿಯ ಒಂದು ಹೊಸ ಚೈತನ್ಯ ಸೃಷ್ಟಿಯಾಗಿದೆ. ನಾವು ಸಹೋದರತೆಯ ಉನ್ನತ ಮಾದರಿಯನ್ನು ನೋಡಿದೆವು. ಅದು ಲೋಕದಲ್ಲಿ ಎಲ್ಲೂ ಸಿಗುವುದಿಲ್ಲ.

ಆಸ್ಟ್ರೇಲಿಯದಿಂದ ಆತಿಫ್ ಸಾಹಿಬ್‌ರು ಹೇಳುತ್ತಾರೆ: ನೇರಪ್ರಸಾರ ಅಲ್ಲಿ ರಾತ್ರಿ 12:55ಕ್ಕೆ ಶುರುವಾಯಿತು. ಹೀಗಿದ್ದರೂ ಜನರು ಬಹಳ ಗೌರವದೊಂದಿಗೆ ಜಲ್ಸದ ಕಾರ್ಯಕ್ರಮಗಳನ್ನು ಕೇಳಿದರು ಒಟ್ಟಾಗಿ ಅಲ್ಲಿಗೆ ತಲುಪಿದರು. ಒಬ್ಬ ಸಹೋದರ ತನ್ನ ಸಣ್ಣ ಮಗನನ್ನು ಕರೆದುಕೊಂಡು ಬಂದಿದ್ದರು. ಹತ್ತುವರೆಗೆ ಖುತ್‌ಬ ಮುಗಿದಾದ ಅವರು ಮಗನೊಡನೆ ಮನೆಗೆ ಹೋಗಲು ಹೇಳಿದರು. ಆದರೆ ಮಗನು ಹೇಳಿದನು: ಇಲ್ಲ, ನಾನು ಇಲ್ಲೇ ಕುಳಿತುಕೊಂಡು ಭಾಷಣವನ್ನು ಕೇಳುವೆನು. ಹೀಗೆ ಅವನು ಸಹ ರಾತ್ರಿ ಕುಳಿತುಕೊಂಡಿದ್ದನು. ಜಲ್ಸದ ಸಮಾರೋಪ ಭಾಷಣ ರಾತ್ರಿ ತಡವಾಗಿ ಶುರುವಾಗಲಿಕ್ಕೆ ಇತ್ತು. ಮುಂದಿನ ದಿನ ವರ್ಕಿಂಗ್ ಡೇ ಆಗಿತ್ತು. ಆದ್ದರಿಂದ ಜನರು ಮಸೀದಿಗೆ ಬರಲಿಕ್ಕಿಲ್ಲ ಎಂಬ ಚಿಂತೆಯಿತ್ತು. ಆದರೆ ಅಲ್ಲಾಹನ ಅನುಗ್ರಹದಿಂದ ಹೆಚ್ಚಿನ ಸಂಖ್ಯೆಯಲ್ಲಿ ಸಮಾರೋಪ ಭಾಷಣವನ್ನು ಕೇಳಲು ಬಂದರು. ಮಾತ್ರವಲ್ಲ ಅವರ ಸಂಖ್ಯೆ ಆರಂಭಿಕ ಸೆಶನಿನಲ್ಲಿ ಭಾಗವಹಿಸಿದ ಸಂಖ್ಯೆಗಿಂತ ಹೆಚ್ಚಾಗಿತ್ತು.

ಬ್ರೆಜಿಲ್‌ನ ಇಬ್ರಾಹಿಂ ಸಾಹಿಬ್ ಹೇಳುತ್ತಾರೆ: ಅವರು ಗಿನಿಬಿಸ್ಸೌ ಮೂಲದವರಾಗಿದ್ದಾರೆ ಮತ್ತು ಶಿಕ್ಷಣಕ್ಕಾಗಿ ಬ್ರೆಜಿಲ್‌ಗೆ ಹೋಗಿದ್ದಾರೆ. ನಿರ್ದಿಳ್ಟವಾಗಿ ನನ್ನ ಗಮನ ಸೆಳೆದ ಒಂದು ವಿಳಯವೆಂದರೆ ಖಿಲಾಫತ್ ವ್ಯವಸ್ಥೆ ಆಗಿದೆ, ಇದರ ಅಡಿಯಲ್ಲಿ ವಿವಿಧ ದೇಶಗಳ ಜನರು ಒಂದೇ ಸಮಯದಲ್ಲಿ ಭಾಳಣಗಳನ್ನು ಮತ್ತು ಕಾರ್ಯಗಳನ್ನು ಪೂರೈಸಲು ಒಟ್ಟುಗೂಡಿದರು. ಕೇಳುತ್ತಿದ್ದರು ಮತ್ತು ನೋಡುತ್ತಿದ್ದರು. ಅಹ್ಮದಿಯಾ ಜಮಾತ್ ಇಸ್ಲಾಂನ ನಿಜವಾದ ಪ್ರತಿನಿಧಿ ಎಂಬುದಕ್ಕೆ ಇದು ಪುರಾವೆಯಾಗಿದೆ ಮತ್ತು ಇಮಾಮ್ ಮಹ್ದಿ ಬರದಿದ್ದರೆ, ನಮಗೆ ಈ ಐಕ್ಯತೆ ಇರುತ್ತಿರಲಿಲ್ಲ. ಈ ಸಭೆಯ ಮೂಲಕ ಜ್ಞಾನವು ಬಹಳಷ್ಟು ಹೆಚ್ಚಾಗಿದೆ ಎಂದು ನಾನು ಕೃತಜ್ಞನಾಗಿದ್ದೇನೆ ಮತ್ತು ಈ ಜಮಾಅತ್ತಿನ ಸದಸ್ಯನಾಗಿರುವುದಕ್ಕಾಗಿ ನಾನು ಅಲ್ಲಾಹನಿಗೆ ಕೃತಜ್ಞನಾಗಿದ್ದೇನೆ.

ಕಿರ್ಗಿಸ್ತಾನ್‌ನ ಅಟಖನೋವಾ ದಿಲ್ಯಾರ ಸಾಹಿಬ ಹೇಳುತ್ತಾರೆ: ಭಾಳಣಗಾರರ ಭಾಳಣಗಳನ್ನು ಪ್ರಾಮಾಣಿಕವಾಗಿ ಆಲಿಸುವುದು ಮತ್ತು ವೀಕ್ಷಿಸುವುದು ಎಳ್ಟು ಆಸಕ್ತಿದಾಯಕವಾಗಿದೆ ಎಂದು ಅವರು ಹೇಳುತ್ತಾರೆ. ಈ ಕಾಲಘಟ್ಟದ ಖಲೀಫರ ಭಾಳಣಗಳನ್ನು ಕೇಳುತ್ತಾ, ದಾಸನು ಇಸ್ಲಾಂ ಪುನರುಜ್ಜೀವನಗೊಳ್ಳುತ್ತಿರುವ ಜಗತ್ತಿನಲ್ಲಿ ಮುಳುಗುತ್ತಾನೆ. ನಾವೆಲ್ಲರೂ ಕುಟುಂಬವಾಗಿ ಒಟ್ಟಾಗಿ ಈ ಕಾಲದ ಖಲೀಫರ ಭಾಳಣಗಳನ್ನು ಕೇಳುತ್ತಿದ್ದೇವೆ. ನಿರ್ದಿಳ್ಟವಾಗಿ ಹೇಳುವುದಾದರೆ, ಖಲೀಫರ ಲಜ್‌ನದ ಸಭೆಯಲ್ಲಿ ಮಾಡಿದ ಭಾಷಣೆಯಲ್ಲಿ ಇಸ್ಲಾಂನಲ್ಲಿ ಮಹಿಳೆಯರ ಹಕ್ಕುಗಳನ್ನು ವಿವರಿಸಿದರು. ಭಾಳಣವನ್ನು ಕೇಳಿದ ನಂತರ, ಸರ್ವಶಕ್ತನಾದ ಅಲ್ಲಾಹನು ನಮ್ಮನ್ನು ಮಹಿಳೆಯರನ್ನು ಹೇಗೆ ರಕ್ಷಿಸಿದ್ದಾನೆ ಎಂಬುದರ ಕುರಿತು ನಾವು ಅಲ್ಲಾಹನ ಮುಂದೆ ಹೆಚ್ಚು ತಲೆಬಾಗಬೇಕು. ಎಲ್ಲಾ ಭಾಳಣಗಳು ಭಾವನೆಗಳಿಂದ ತುಂಬಿವೆ ಎಂದು ಅವರು ಹೇಳುತ್ತಾರೆ.

ಗೊಎಟಮಾಲಾದ ಸನ್ಮಾನ್ಯ ಬೈರಾನ್ ಸಾಹಿಬ್ ಅವರು ಹೇಳುತ್ತಾರೆ: ನನಗೆ ಜಲ್ಸದ ದಿನವು ವಿಶೇಳ ದಿನವಾಗಿದೆ ಮತ್ತು ಪವಾಡಕ್ಕಿಂತ ಕಡಿಮೆಯಿಲ್ಲ ಏಕೆಂದರೆ ಜಲ್ಸಗೆ ಸ್ವಲ್ಪ ಮುಂಚೆ ಗೊಎಟೆಮಾಲಾದ ಜಮಾಅತ್ತಿನ ಸದಸ್ಯರು ಕರೋನಾ ವೈರಸ್‌ನಿಂದ ಅನಾರೋಗ್ಯಕ್ಕೆ ಒಳಗಾದರು ಮತ್ತು ಕೆಲವರು ಗಂಭೀರ ಸ್ಥಿತಿಯಲ್ಲಿದ್ದರು. ಇಂದು ಗೊಎಟೆಮಾಲಾದ ಎಲ್ಲ ಸ್ನೇಹಿತರು ಇಲ್ಲಿ ಕೂತು ಜಲ್ಸವನ್ನು ಕೇಳುತ್ತಿದ್ದಾರೆ ಮತ್ತು ಯಾವುದೇ ಸದಸ್ಯರಿಗೆ ಅನಾರೋಗ್ಯವಿಲ್ಲ. ನಾನು ಕ್ರಿಶ್ಚಿಯನ್ ಆಗಿದ್ದಾಗ, ನನಗೆ ಪವಾಡಗಳ ಬಗ್ಗೆ ವಿಚಿತ್ರ ಕಲ್ಪನೆ ಇತ್ತು. ಅಹ್ಮದಿಯಾ ಜಮಾತ್‌ಗೆ ಸೇರುವ ಮೂಲಕ, ಪವಾಡಗಳ ವಾಸ್ತವತೆಯನ್ನು ನಾನು ಅರ್ಥಮಾಡಿಕೊಂಡಿದ್ದೇನೆ, ನಿಜವಾದ ಪವಾಡವೆಂದರೆ ಮನುಳ್ಯನಲ್ಲಿ ಶುದ್ಧವಾದ ಬದಲಾವಣೆಯನ್ನು ಸೃಷ್ಟಿಸುವುದು. ಒಂದು ವರ್ಳದ ಹಿಂದೆ, ನಾನು ಒಬ್ಬನೇ ಮಸೀದಿಗೆ ಬರುತ್ತಿದ್ದೆ. ನನ್ನ ಕುಟುಂಬವು ಮಸೀದಿಗೆ ಬಂದು ಇಸ್ಲಾಂಗೆ ಮತಾಂತರಗೊಳ್ಳುವುದು ಅಸಾಧ್ಯವೆಂದು ತೋರುತ್ತಿತ್ತು. ಇಂದು ನಾನು ನನ್ನ ಪತ್ನಿ, ಮಕ್ಕಳು, ತಾಯಿ ಮತ್ತು ಸೋದರ ಮಾವ ಮತ್ತು ಅವರ ಕುಟುಂಬವನ್ನು ಕರೆತಂದಿದ್ದೇನೆ ಮತ್ತು ನಾನು ಈ ಸಭೆಯನ್ನು ಕುಳಿತು ನೋಡುತ್ತಿದ್ದೇನೆ ಮತ್ತು ನಾನು ಇದನ್ನು ಖಂಡಿತವಾಗಿಯೂ ಒಂದು ಪವಾಡವೆಂದು ಪರಿಗಣಿಸುತ್ತೇನೆ. ಅವರು ಪ್ರಾಮಾಣಿಕ ಅಹ್ಮದಿ ಮತ್ತು ಸಾಧಾರಣ ಆದಾಯವನ್ನು ಹೊಂದಿದ್ದಾರೆ, ಆದರೆ ಅವರಿಗೆ ತಬ್‌ಲೀಗ್‌ನ ಬಗ್ಗೆ ಹೆಚ್ಚಿನ ಉತ್ಸಾಹವಿದೆ. ಅವರು ಎಲ್ಲಿಗೆ ಹೋದರೂ, ಅವರು ತಮ್ಮ ಸ್ವಂತ ಖರ್ಚಿನಲ್ಲಿ ಮಸೀದಿಗೆ ಭೇಟಿ ನೀಡಲು ವಿವಿಧ ಸ್ನೇಹಿತರನ್ನು ತಬ್‌ಲೀಗ್ ಮಾಡುತ್ತಾರೆ.

“ಇಂದು ನನಗೆ ಬಹಳ ವಿಶೇಳವಾದ ದಿನ” ಎಂದು ಗೊಎಟೆಮಾಲಾದ ರಾಮಿರೊ ಮಾರ್ಟಿನೆಜ್ ಹೇಳುತ್ತಾರೆ. ಯುಕೆ ಮತ್ತು ಇತರೆಡೆಗಳಲ್ಲಿ ಎಂಟಿಎ ಮುಖಾಂತರ ಜಲ್ಸದ ವೀಡಿಯೋ ತುಣುಕುಗಳನ್ನು ನೋಡಿದಾಗ ಈ ಸಾರ್ವತ್ರಿಕ

ವ್ಯವಸ್ಥೆಯು ನಿಜಕ್ಕೂ ದೈವಿಕ ವ್ಯವಸ್ಥೆ ಎಂದು ನನಗೆ ಮನವರಿಕೆಯಾಯಿತು. ನಿಸ್ಸಂದೇಹವಾಗಿಯು ಇಂದಿನ ಕಾಲಘಟ್ಟದ ಖಲೀಫರು ಅಲ್ಲಾಹನ ಕಡೆಯಿಂದ ನೇಮಿಕಗೊಂಡಿದ್ದಾರೆ ಅವರು ನಮಗೆ ಮುಸ್ಲಿಮರು ಸಮಾಜದಲ್ಲಿ ಯಾವ ರೂಪವನ್ನು ಪಡೆಯಬೇಕು ಎಂದು ನಮಗೆ ತಿಳಿಸುತ್ತಾರೆ. ನಾನು ಬಹಳ ಖುಷಿಯಲ್ಲಿದ್ದೇನೆ. ಇಂದಿನಿಂದ ನಾನು ಖಲೀಫರ ಭಾಷಣಗಳನ್ನು ಯಾವಾಗಲು ಆಲಿಸುತ್ತಿರುತ್ತೇನೆ. ಇವರು 35 ವರ್ಷಗಳ ಕಾಲ ಬೈಬಲ್ ಕಲಿಸುತ್ತಿರುತ್ತಿದ್ದರು. ಅವರು ವಿವಿಧ ಕ್ರಿಶ್ಚಿಯನ್ ಪಂಗಡಗಳ ಸದಸ್ಯರಾಗಿದ್ದರು ಆದರೆ ಭಿನ್ನತೆಗಳಿಂದಾಗಿ ಯಾವಾಗಲೂ ಒಂದು ಪಂಗಡದಿಂದ ಇನ್ನೊಂದು ಪಂಗಡಕ್ಕೆ ಬದಲಾಗುತ್ತಿದ್ದರು. ಸ್ವಸಂಶೋಧನೆಯ ಮೂಲಕ, ಇಸ್ಲಾಂ ಅಹ್ಮದಿಯತ್ ಅನ್ನು ಸ್ವೀಕರಿಸಿದರು. ಅವರ ವಾಸವು ಮಸೀದಿಯಿಂದ ಇಪ್ಪತ್ತು ಕಿಲೋಮೀಟರ್ ದೂರದಲ್ಲಿದೆ. ಅವರು ಅಹ್ಮದೀಯತ್ ಅನ್ನು ಒಪ್ಪಿಕೊಂಡಿದ್ದರಿಂದ, ಒಂದು ಕಾರ್ ಕೆಟ್ಟುಹೋದ ಕಾರಣದಿಂದಾಗಿ ಒಂದು ಶುಕ್ರವಾರ ಮಾತ್ರ ಬಂದಿಲ್ಲ, ಉಳಿದವು ನಿಯಮಿತವಾದ ಶುಕ್ರವಾರದಂದು ಬರುತ್ತದೆ. ಮತ್ತು ಅವರು ತನ್ನ ಮನೆಯಲ್ಲಿ ಐದು ದೈನಂದಿನ ನಮಾಝ್‌ಗಳನ್ನು ನಿರ್ವಹಿಸುತ್ತಾರೆ.

ಗೊಎಟೆಮಾಲಾದ Evalin Gonzalez ಹೇಳುತ್ತಾರೆ: ಯುಕೆಯ ಜಲ್ಸ ಸಾಲಾನಾದಲ್ಲಿ ನೇರವಾಗಿ ಭಾಗವಹಿಸುವ ಮೂಲಕ, ಜಮಾತ್ ಅಹ್ಮದಿಯಾದ ಒಂದು ವ್ಯವಸ್ಥೆಯ ಬಗ್ಗೆ ಸ್ಪಷ್ಟವಾಯಿತು. ಪ್ರತಿಯೊಬ್ಬರೂ ಒಂದು ಹೂವಾಲೆಯಲ್ಲಿ ಪೋಣಿಸುವಂತೆ ತೋರುತ್ತಿದ್ದರು ಮತ್ತು ಈ ವ್ಯವಸ್ಥೆಯ ಭಾಗವಾಗಲು ನಮಗೆ ಅವಕಾಶವನ್ನು ನೀಡಿದ್ದಕ್ಕಾಗಿ ಅಲ್ಲಾಹನಿಗೆ ಧನ್ಯವಾದಗಳು. ಪ್ರಪಂಚದ ದೊಡ್ಡ ಭಾಗವು ಆ ಕಾಲದ ಖಲೀಫನ ಮಾತುಗಳನ್ನು ಕೇಳುವುದರಿಂದ ವಂಚಿತವಾಗಿದ್ದಕ್ಕಾಗಿ ನನಗೆ ಆಗಾಧವಿದೆ. ಅದಕ್ಕಾಗಿಯೇ ಜಗತ್ತಿನಲ್ಲಿ ಸಮಸ್ಯೆಗಳಿವೆ. ಯುದ್ಧದ ಸ್ಥಿತಿ ಇದೆ. ನಾನು ಅಹ್ಮದಿಯತ್ ಅನ್ನು ಪ್ರವೇಶಿಸಿದೆ ಮತ್ತು ಎಲ್ಲವನ್ನೂ ಪ್ರಾರ್ಥನೆಯ ಮೂಲಕ ಮಾಡಬಹುದು ಮತ್ತು ನಮ್ಮ ಅನೇಕ ಸಮಸ್ಯೆಗಳನ್ನು ಪ್ರಾರ್ಥನೆಯ ಮೂಲಕ ಪರಿಹರಿಸಲಾಗಿದೆ ಎಂದು ಅರಿತುಕೊಂಡೆ. ಇಂದಿನ ಖಲೀಫನ ಪ್ರಾರ್ಥನೆಯಿಂದ ನನ್ನ ಶಿಥಿಲಗೊಂಡ ಮನೆಯನ್ನು ರಕ್ಷಿಸಿಕೊಂಡಿತು. ಕಾಲಘಟ್ಟದ ಖಲೀಫರನ್ನು ಕೃತಜ್ಞತೆ ಅರ್ಪಿಸಲು ನನ್ನ ಬಳಿ ಈ ಸಮಯದಲ್ಲಿ ಪದಗಳಿಲ್ಲ. "ಮೊದಲ ಬಾರಿಗೆ, ಇದು ನನಗೆ ಯಶಸ್ಸು ಮತ್ತು ವಿಜಯದ ವರ್ಷ ಎಂದು ನಾನು ಹೇಳಬಲ್ಲೆ" ಎಂದು ಅವರು ಹೇಳಿದರು. ನಾವು ಪರಿಪೂರ್ಣರಲ್ಲ, ಆದರೆ ನಮ್ಮ ಆಧ್ಯಾತ್ಮಿಕತೆಯ ಹೊಸ ಪ್ರಯಾಣ ಆರಂಭವಾಗಿದೆ. ನಾನು ಪ್ರತಿ ವರ್ಷ ಜಲ್ಸಗೆ ಹಾಜರಾಗುವುದನ್ನು ಮುಂದುವರಿಸುತ್ತೇನೆ.

ನೈಜರ್‌ನ ಅಹ್ಮದಿ ಸ್ನೇಹಿತರಾದ ಏಸಿಯಾ ಬಾಬಾ ಹೇಳುತ್ತಾರೆ: ಆತಿಥ್ಯದ ಬಗ್ಗೆ, ಇಮಾಮ್ ಮಹ್ದಿ ಅಲೈಹಿಸ್ಸಲಾಮ್‌ರವರು ತನ್ನ ಅತಿಥಿಗಳ ನೆಮ್ಮದಿಗೆ ಹೇಗೆ ಆದ್ಯತೆ ನೀಡಿದರು ಮತ್ತು ಈ ಕಾಲದ ಖಲೀಫರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ಉದಾಹರಣೆಯನ್ನು ನೀಡಿದರು. ಅತಿಥಿಗಳ ನೆಮ್ಮದಿಗಾಗಿ ಅವರು ತನ್ನ ಹಾಸಿಗೆಯನ್ನೂ ಸಹ ನೀಡಿದ್ದರು, ಇಡೀ ರಾತ್ರಿ ಅವರು ತೊಂದರೆಯಲ್ಲಿ ಕಳೆದಿದ್ದರು. ತದನಂತರ ಅವರ ಉದಾಹರಣೆಯನ್ನು ಸಹೋದರತ್ವದ ವಾತಾವರಣವನ್ನು ನಾನು ಈ ಜಲ್ಸದಲ್ಲಿ ನೋಡಿದೆ. ಖುದ್ದಾಮರು ತನ್ನನ್ನು ನೋಡಿಕೊಳ್ಳದೆ ಕೆಸರಿನಲ್ಲಿ ಸಿಲುಕಿದ್ದ ವಾಹನಗಳನ್ನು ಹೊರತೆಗೆಯುತ್ತಿದ್ದ. ಬಹುಶಃ ಇಂತಹ ಸಹೋದರತ್ವದ ಕೊರತೆಯಿಂದಾಗಿ ಮುಸ್ಲಿಮರು ಇಂದು ಜಗತ್ತಿನಲ್ಲಿ ಅವಮಾನಕ್ಕೊಳಗಾಗಿದ್ದಾರೆ ಮತ್ತು ಈ ಪರಿಹಾರವನ್ನು ನಮಗೆ ವಾಗ್ದಾತ್ತ ಮಸೀಹ್ ಮೌಊದ್‌ನ ಖಲೀಫರು ಹೇಳಿದ್ದಾರೆ.

ಸಮದ್ ಗೋರಿ ಸಾಹಿಬ್ ಅಲ್ಬೇನಿಯಾದಿಂದ ಬರೆಯುತ್ತಾರೆ: ಸ್ನೇಹಿತರಾದ ಡಾ. ಬಿಜಾರ್ ಸಾಹಿಬ್ ಹೇಳುತ್ತಾರೆ: ಈ ಕಾಲದ ಖಲೀಫರ ಭಾಷಣಗಳ ಜೊತೆಗೆ, ಯುಕೆಯಲ್ಲಿ ವಾರ್ಷಿಕ ಜಲ್ಸದ ಇತರ ಕಾರ್ಯಕ್ರಮಗಳನ್ನು ನಾನು ನೋಡಿದ್ದೇನೆ. ಇಂದಿನ ಈ ಯುಗದಲ್ಲಿ, ವಾರ್ಷಿಕ ಜಲ್ಸವು ಜನರ ಮಾರ್ಗದರ್ಶನಕ್ಕಾಗಿ ಒಂದು ಪ್ರಮುಖ ಅವಶ್ಯಕತೆಯಾಗಿದೆ. ಖಲೀಫರ ಭಾಷಣಗಳು ತುಂಬಾ ಸರಳವಾಗಿದ್ದವು ಆದರೆ ಪ್ರಸ್ತುತ ಸಮಯದ ಬಗ್ಗೆ ಉತ್ತಮ ಸಂದೇಶವನ್ನು ಹೊತ್ತಿದ್ದವು. ಮತ್ತು ಎಲ್ಲಾ ನೈತಿಕ ಕಾನೂನುಗಳನ್ನು ಉಲ್ಲಂಘಿಸಿದ ಸಮಯದಲ್ಲಿ ಮತ್ತು ಈ ಜನರು ಮಾನವೀಯತೆಗೆ ಹಕ್ಕುಗಳನ್ನು ನೀಡುತ್ತಾರೆ ಮತ್ತು ಜಗತ್ತನ್ನು ಉಳಿಸುತ್ತಾರೆ ಎಂದು ಜಗತ್ತಿಗೆ ಹೇಳುತ್ತಾರೆ, ಆದರೆ ಈ ತತ್ವಗಳು ಹದಿನೈದು ನೂರು ವರ್ಷಗಳ ಹಿಂದೆ ಇದ್ದವು ಎಂಬುದನ್ನು ಈ ಜನರು ಮರೆಯುತ್ತಾರೆ. ಪ್ರವಾದಿ ಮುಹಮ್ಮದ್(ಸ)ರವರು ನೆಲೆನಿಲ್ಲಿಸಿದ್ದರು ಮತ್ತು ಇಂದಿನ ಕಾಲಘಟ್ಟದಲ್ಲಿ ಪ್ರವದಿ(ಸ)ರವರ ನೈಜ್ಯ ಗುಲಾಮರು ಇಂದು ಅಹ್ಮದಿಯಾ ಜಮಾಅತ್‌ನ್ನು ಸ್ಥಾಪಿಸಿದರು. ಈ ಬಾರಿಯ ಜಲ್ಸ ಸಾಲಾನದಲ್ಲಿ ನಾನು ನೋಡಿದ ದೃಶ್ಯಗಳಲ್ಲಿ, ಆಫ್ರಿಕಾದ ಬಡ ಭಾಗಗಳಲ್ಲಿ ಜಮಾಅತ್ ಅಹ್ಮದಿಯಾ ಮತ್ತು ಹ್ಯುಮಾನಿಟಿ ಫಸ್ಟ್ ಅವರ ಸೇವೆಗಳಿಂದ ನಾನು ಪ್ರಭಾವಿತನಾಗಿದ್ದೆ. ಈ ಮಕ್ಕಳ ಹೊಳೆಯುವ ಕಣ್ಣುಗಳು ಅವರ ಮುಂದೆ ಪ್ರಪಂಚದ ಮಹಾನ್ ನಾಯಕರ ಮಾತುಗಳು ಮತ್ತು ಪ್ರಚಾರಗಳು, ಆ ಕಣ್ಣುಗಳು ಜೀವನದ ಅನ್ವೇಳಕರು ಮತ್ತು ಅವರು ಮೊದಲ ಬಾರಿಗೆ ಆನಂದಿಸುವ ನೀರು ಜೀವನ ಎಂಬ ಸತ್ಯವನ್ನು ಅನಾವರಣಗೊಳಿಸಲಿದ್ದಾರೆ. ರುಚಿ ನೋಡುತ್ತಿದ್ದರು.

ಜಲ್ಸ ಸಾಲಾನದಲ್ಲಿ ಸ್ವೀಕರಿಸಿದ ಸದ್ಭಾವನೆಯ ಸಂದೇಶಗಳು. ಅವರು ಯುಕೆ ಸೇರಿದಂತೆ ಒಂಬತ್ತು ದೇಶಗಳ ಗಣ್ಯರಿಂದ 109 ಸದ್ಭಾವನಾ ಸಂದೇಶಗಳನ್ನು ಸ್ವೀಕರಿಸಲಾಯಿತು. ಇವುಗಳಲ್ಲಿ ವಿಡಿಯೋ ಸಂದೇಶಗಳು, ಆಡಿಯೋ ಸಂದೇಶಗಳು, ಪತ್ರ ಸಂದೇಶಗಳು ಸೇರಿವೆ. ಯುಕೆ ಜೊತೆಗೆ, ಯುಎಸೆ, ಸೆರಾ ಲಿಯೋನ್, ಗ್ಯಾಂಬಿಯಾ, ಸೆನೆಗಲ್, ಕೀನ್ಯಾ, ಸ್ಪೇನ್, ನೆದರ್ಲ್ಯಾಂಡ್ಸ್ ಮತ್ತು ಜರ್ಮನಿ ಸೇರಿದಂತೆ ಇತರ ದೇಶಗಳಿಂದ ಸಂದೇಶಗಳನ್ನು ಸ್ವೀಕರಿಸಲಾಗಿದೆ. ಯುನೈಟೆಡ್ ಕಿಂಗ್‌ಡಮ್‌ನ ಪ್ರಧಾನಿ, ಕೆನಡಾದ ಪ್ರಧಾನಿ, ಅದೇ ರೀತಿ ಯುಕೆನ ಲೇಬರ್ ಪಕ್ಷದ ನಾಯಕ Lib Dems ರವರು, ಇಂತಹ ಅನೇಕ ರಾಜಕಾರಣಿಗಳು ಇದ್ದಾರೆ. ನಂತರ ಎಂಟು ಮಂತ್ರಿಗಳು, ಹನ್ನೊಂದು ಮಂದಿ ಶೇಡೊಮಂತ್ರಿಗಳು, ನಾಲ್ಕು ಮಾಜಿ ರಾಜ್ಯ ಕಾರ್ಯದರ್ಶಿಗಳು, ಲಂಡನ್ ಪೊಲೀಸ್ ಆಯುಕ್ತರು, ಆರು ರಾಷ್ಟ್ರೀಯ ಧಾರ್ಮಿಕ ಮುಖಂಡರು ಮತ್ತು ಹದಿಮೂರು ಮೇಯರ್‌ಗಳಿಂದ ಸಂದೇಶಗಳು ಬಂದವು. ಇದರ ಜೊತೆಗೆ, ವಿವಿಧ ವರ್ಗಗಳಿಗೆ ಸೇರಿದ ವಿವಿಧ ವ್ಯಕ್ತಿಗಳಿಂದ ಸಂದೇಶಗಳನ್ನು ಸಹ ಸ್ವೀಕರಿಸಲಾಗಿದೆ.

ಅಲ್ಲಾಹನ ಅನುಗ್ರಹದಿಂದ ಎಂ.ಟಿ.ಎ. ಆಫ್ರಿಕದೊಂದಿಗೆ ಬೇರೆ ಸ್ಥಳೀಯ ಟಿವಿ ಚ್ಯಾನಲ್‌ಗಳು ಸಹ ಜಲ್ಸದ ಕಾರ್ಯಕ್ರಮಗಳನ್ನು ಪ್ರಸಾರ ಮಾಡಿದುವು. ಆಫ್ರಿಕದಲ್ಲಿ ಐವತ್ತು ಮಿಲಿಯಕ್ಕಿಂತ ಹೆಚ್ಚು ಜನರು ಮಾತನಾಡುವ ಬಾವುಸಾ ಭಾಷೆಯಲ್ಲಿ ಪ್ರಥಮ ಸಾರಿ ಭಾಷಾಂತರ ಮಾಡಿ ಪ್ರಸಾರ ಮಾಡಲಾಯಿತು. ಆಫ್ರಿಕದಲ್ಲಿ 16 ಟಿ.ವಿ. ಚ್ಯಾನಲ್‌ಗಳು ಜಲ್ಸದ ಸಮಾಚಾರ ನೀಡಿದುವು. ಬಿ.ಬಿ.ಸಿ. ಸೌಥ್ ಜಲ್ಸದ ಬಗ್ಗೆ ಡೊಕ್ಯೂಮೆಂಟರಿ ಪ್ರಸಾರ ಮಾಡಿತು. ಬಿ.ಬಿ.ಸಿ. ವರ್ಲ್ಡ್ ಜಲ್ಸದ ಸಮಾಚಾರ ನೀಡಿತು. ನಲ್ವತ್ತು ವೆಬ್‌ಸೈಟ್‌ಗಳು ಜಲ್ಸದ ಸಮಾಚಾರ ನೀಡಿದುವು. ಜಲ್ಸದ ಬಗ್ಗೆ 16 ರೇಡಿಯೋ ಕಾರ್ಯಕ್ರಮಗಳು ಬಿತ್ತರಿಸಲ್ಪಟ್ಟವು. 20 ಪತ್ರಿಕೆಗಳಲ್ಲಿ ಲೇಖನ ಮೊದಲಾದವುಗಳು ಪ್ರಕಟವಾದುವು. 12 ಟಿ.ವಿ. ಚ್ಯಾನಲ್‌ಗಳು ಜಲ್ಸದ ಬಗ್ಗೆ ವರದಿ ನೀಡಿದುವು. ಇವಲ್ಲದೆ ಸೋಶಿಯಲ್ ಮೀಡಿಯಾ ಮೂಲಕ ಅಂದಾಜು 63 ಲಕ್ಷ ಜನರಿಗೆ ಸಂದೇಶ ತಲಪಿದುವು. ಬಂಗ್ಲಾದೇಶದಲ್ಲಿ ಹತ್ತು ಆನ್‌ಲೈನ್ ಪೋರ್ಟಲ್‌ಗಳಲ್ಲಿ ಮತ್ತು ಪತ್ರಿಕೆಗಳಲ್ಲಿ ಜಲ್ಸದ ಸಮಾಚಾರಗಳು ಚಿತ್ರಗಳೊಂದಿಗೆ ಪ್ರಕಟವಾದುವು. ಯೂಟ್ಯೂಬ್‌ನಲ್ಲಿ ಹದಿನೈದು ಮಿಲಿಯಕ್ಕಿಂತ ಹೆಚ್ಚಿನ ಜನರು ವಿಸಿಟ್ ಮಾಡಿದರು. ಇನ್‌ಸ್ಟಾಗ್ರಾಮ್‌ನಲ್ಲಿ ಮೂವತ್ತೈದು ಸಾವಿರ ಜನರು ಎಂ.ಟಿ.ಎ.ದ ಪೇಜ್ ನೋಡಿದರು. 1.97 ಮಿಲಿಯ ಜನರಿಗೆ ಆ ಮೂಲಕ ಸಂದೇಶ ತಲಪಿತು. ಟ್ವಿಟರ್‌ನಲ್ಲಿ ಒಂದು ಲಕ್ಷಕ್ಕಿಂತ ಹೆಚ್ಚು ಜನರು ಎಂ.ಟಿ.ಎ.ದ ಪೇಜ್ ನೋಡಿದರು. ಫೇಸ್‌ಬುಕ್ ಮೂಲಕ 5.5 ಲಕ್ಷ ಜನರಿಗೆ ಸಂದೇಶ ತಲಪಿತು. ಎಂ.ಟಿ.ಎ.ದ ಸ್ವಂತ ವೆಬ್‌ಸೈಟನ್ನು ಒಂದು ಲಕ್ಷ ಸಾರಿ ನೋಡಲಾಯಿತು. ಎಂ.ಟಿ.ಎ. ಆನ್ ಡಿಮ್ಯಾಂಡ್ ಮೂಲಕ 2 ಲಕ್ಷಕ್ಕಿಂತ ಹೆಚ್ಚು ಜನರು ಜಲ್ಸವನ್ನು ವೀಕ್ಷಿಸಿದರು.

ಇದು ಕೆಲವು ವಿಷಯಗಳಿದ್ದವು ಇದರಲ್ಲಿಯೇ ಬಹಳಷ್ಟು ಸಮಯ ಪಡೆಯಿತು. ಅಲ್ಲಾಹನು ಈ ಜಲ್ಸದ ದೂರಗಾಮಿ ಪರಿಣಾಮಗಳನ್ನು ಉಂಟುಮಾಡುವವನಾಗಲಿ. ಸಾತ್ವಿಕ ಆತ್ಮಗಳನ್ನು ಹೊಂದಿದ ಜನರು ಅಹ್ಮದಿಯ್ಯತ್ ಎಂಬ ನೈಜ ಇಸ್ಲಾಮ್ ಕಡೆಗೆ ಮೊದಲಿಗಿಂತ ಮಿಗಿಲಾಗಿ ಗಮನಿಸುವವರಾಗಲಿ. ಅಲ್ಲಾಹನು ಮೌಲವಿ ನಾಮದೇಯರ ಕೆಡುಕುಗಳಿಂದ ಜಮಾಅತನ್ನು ಮತ್ತು ಎಲ್ಲಾ ಸಾತ್ವಿಕರನ್ನೂ ಸಂರಕ್ಷಿಸುವವನಾಗಲಿ – **ಆಮೀನ್.**

************

## ಪವಿತ್ರ ಖುರ್‌ಆನ್

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:

ಪವಿತ್ರ ಖುರ್‌ಆನ್ ವಜ್ರವೈಢೂರ್ಯಗಳ ಒಂದು ನಿಧಿಯಾಗಿದೆ.ಆದರೆ ಜನರು ಅದನ್ನು ಅರಿತಿಲ್ಲ. ***(ಮಲ್‌ಫೂಝಾತ್ ಸಂಪುಟ–2, ಪುಟ–344)***

ಪವಿತ್ರ ಖುರ್‌ಆನಿನ ಮಹಿಮೆ ಎಷ್ಟು ಉನ್ನತವಾಗಿದೆಯೆಂದರೆ ಅದು ಎಲ್ಲ ಮಹಿಮೆಗಳಿಗಿಂತ ಶ್ರೇಷ್ಠವಾಗಿದೆ. ಅದು "ಹಕಮ್" ಆಗಿದೆ ಎಂದರೆ ಅಂತಿಮವಾಗಿ ತೀರ್ಮಾನ ಮಾಡುವುದು; ಅದು "ಮುಹೈಮಿನ್" ಎಂದರೆ ಅದು ಎಲ್ಲ ಮಾರ್ಗದರ್ಶನಗಳ ಸಂಗ್ರಹವಾಗಿದೆ. ಅದು ಎಲ್ಲ ಸಾಕ್ಷ್ಯಾಧಾರಗಳನ್ನು ತನ್ನಲ್ಲಿ ಜಮಾಯಿಸಿದೆ ಮತ್ತು ಶತ್ರು ಸಮೂಹವನ್ನು ಚೆಲ್ಲಾಪಲ್ಲಿಯಾಗಿ ಮಾಡಿದೆ. ಅದರಲ್ಲಿ ಎಲ್ಲ ಸಂಗತಿಗಳ ವಿವರಣೆಗಳಿವೆ. ಅದರಲ್ಲಿ ನಡೆಯಲಿರುವ ಮತ್ತು ನಡೆದ ಸಂಭವಗಳ ಸಮಾಚಾರಗಳಿವೆ. ಅಸತ್ಯವು ಅದರ ಹಿಂದಿನಿಂದಾಗಲೀ ಮುಂದಿನಿಂದಾಗಲೀ ನುಸುಳಲಾರದು. ಅದು ಸರ್ವ ಶಕ್ತನಾದ ದೇವನ ಪ್ರಕಾಶವಾಗಿದೆ. ***(ಖುತ್‌ಬ ಇಲ್‌ಹಾಮಿಯಾ; ರೂಹಾನೀ ಖ಼ಝಾ಼ಇನ್ ಸಂಪುಟ–16, ಪುಟ–103)***

**ಪ್ರೀತಿ ಎಲ್ಲರಲ್ಲು, ದ್ವೇಶವಿಲ್ಲ ಯಾರಲ್ಲು**

**Love for All, Hatred for None**

*(ಪುಟ ಸಂಖ್ಯೆ 01ರ ಉಳಿದ ಭಾಗ)*

## ಮಾನವ ಜೀವನದ ಉದ್ದೇಶ

ಯೋಚಿಸಿ ನೋಡಿರಿ. ಅಲ್ಲಾಹನು ಮೊದಲ ಅಧ್ಯಾಯದಲ್ಲಿಯೇ ಎಷ್ಟೊಂದು ಸಮಂಜಸ ರೀತಿಯಲ್ಲಿ ಔದಾರ್ಯದ ಮಾರ್ಗ ತೋರಿಸಿರುವನು. ಈ ಅಧಾಯದಲ್ಲಿ ಅದರ ಹೆಸರು, ಖಾತಮಲ್ ಕುತುಬ್ (ಅಂತಿಮ ಗ್ರಂಥ) ಮತ್ತು ಉಮ್ಮುಲ್ ಕುತುಬ್ (ಗ್ರಂಥದ ಮೂಲ) ಎಂದಾಗಿದೆ. ಅದರಲ್ಲಿ ಸ್ಪಷ್ಟವಾಗಿ ಹೇಳಲಾಗಿದೆ. ಮಾನವನ ಜೀವಿತದ ಉದ್ದೇಶವೇನು ಮತ್ತು ಅದನ್ನು ಸಾಧಿಸಲು ಮಾರ್ಗವೇನು? ಇಯ್ಯಾಕ ನಅ್‌ಬುದು ಮಾನವ ಗಣದ ನಿಜವಾದ ದಾಹ ಹಾಗೂ ಉದ್ದೇಶವಾಗಿದೆ. ಮತ್ತದು ಇಯ್ಯಾಕ ನಅ್‌ಬುದು ಅನ್ನು ಇಯ್ಯಾಕ ನಸ್ತಯೀನ್ ಮೇಲೆ ಆದ್ಯತೆ ನೀಡಲಾಗಿದೆ, ಹೇಳಲಾಗಿದೆ. ಮೊದಲ ಅವಶ್ಯಕತೆ ಮನುಷ್ಯನು ತನ್ನ ಸಾಮರ್ಥ್ಯ, ಶಕ್ತಿ ಮತ್ತು ಅರಿವಿನೊಂದಿಗೆ ಅಲ್ಲಾಹನ ಸಂಪ್ರೀತಿಯನ್ನು ಪಡೆಯಲು ಎಲ್ಲಾ ರೀತಿಯ ಪ್ರಯತ್ನಗಳನ್ನು ಮಾಡಬೇಕು ಮತ್ತು ಅಲ್ಲಾಹನು ನೀಡಿದಂತಹ ಗುಣಶಕ್ತಿಗಳಿಂದ ತಕ್ಕುದಾದ ಪ್ರಯೋಜನ ಪಡೆಯಬೇಕು. ಅದಾದ ನಂತರ ಮತ್ತೆ ಅಲ್ಲಾಹನಿಂದ ಅದರ ಪರಿಪೂರ್ಣತೆಗಾಗಿ ಹಾಗೂ ಪರಿಣಾಮಕಾರಿಯಾಗಲು ಪ್ರಾರ್ಥಿಸಬೇಕಾಗಿದೆ. ಮಾನವ ಜೀವನದ ಉದ್ದೇಶ ಹಾಗೂ ಗುರಿ ಸರಿಯಾದ ಮಾರ್ಗದಲ್ಲಿ ನಡೆಯುವುದು ಆಗಿದೆ ಮತ್ತು ಅದರ ಬೇಡಿಕೆಯಾಗಿದೆ. ಅದನ್ನು ಈ ಅಧ್ಯಾಯದಲ್ಲಿ ಹೀಗೆ ನಿರೂಪಿಸಲಾಗಿದೆ. ಇಹ್ದಿನಸ್ಸಿರಾತಲ್ (ಅಲ್‌ಫಾತಿಹ 6, 7) (ಓ ದೇವಾ) ನೀನು ನಮ್ಮನ್ನು ಸರಿಯಾದ ಮಾರ್ಗದಲ್ಲಿ ನಡೆಸು, ನಿನ್ನ ಅನುಗ್ರಹಕ್ಕೆ ಪಾತ್ರರಾದವರ ಮಾರ್ಗದಲ್ಲಿ. ಈ ಪ್ರಾರ್ಥನೆಯು ಎಲ್ಲಾ ಸಮಯದಲ್ಲೂ, ಎಲ್ಲಾ ನಮಾಝುಗಳಲ್ಲೂ, ಮತ್ತು ಎಲ್ಲಾ ರಕಾಅತುಗಳಲ್ಲೂ ಮಾಡಲಾಗುತ್ತದೆ. ಅದರ ಅನುಷ್ಠಾನವೇ ಅದರ ಮಹತ್ವಕ್ಕೆ ಸಾಕ್ಷಿಯಾಗಿದೆ. **(ಮಲ್ಫೂಝಾತ್ ಸಂಪುಟ 1, ಪುಟ 321, ಮುದ್ರಣ 2018 ಖಾದಿಯಾನ್)**

*(ಪುಟ ಸಂಖ್ಯೆ 02ರ ಉಳಿದ ಭಾಗ)*

ಇಸ್ಲಾಮಿನಲ್ಲಿ ಈ ಸುವಾರ್ತೆಯನ್ನು ಪ್ರಕಟಪಡಿಸಿಯೂ ಆಗಿದೆ. ಅಲ್‌ಹಮ್ದುಲಿಲ್ಲಾಹ್ ಮಲ್‌ಮಿನ್ನತಿ. ಈ ದಿವ್ಯವಾಣಿ ಅನ್ವಯ 27 ಝಿಲ್‌ಖಅದ 1312 ಹಿ. ಯಲ್ಲಿ, 24 ಮೇ 1895 ನನ್ನ ಮನೆಯಲ್ಲಿ ಗಂಡು ಮಗುವಿನ ಜನನವಾಯಿತು. ಅವನ ಹೆಸರು ಶರೀಫ್ ಅಹ್ಮದ್ ಎಂದು ಇಡಲಾಗಿದೆ. (ಝಿಯಾಉಲ್ ಹಖ್, ರೂಹಾನಿ ಖಝಾಇನ್, ಸಂಪುಟ–9, ಪುಟ–323)

### ಅಬ್ದುಲ್ ಹಖ್ ಸಾಧ್ಯವಾದರೆ ನನ್ನ ಈ ಭವಿಷ್ಯವಾಣಿಯನ್ನು ರದ್ದು ಮಾಡಿ ತೋರಿಸಲಿ

ನನ್ನ ಗ್ರಂಥ ಅಂಜಾಮೆ ಆಥಮ್ ಪುಟ 58 ರಲ್ಲಿ ಒಂದು ಭವಿಷ್ಯವಾಣಿಯಿತ್ತು. ಅದು ಮೌಲ್ವಿ ಅಬ್ದುಲ್ ಹಖ್ಖ್‌ನ ಮುಬಾಹಲದ ನಂತರ ಎಲ್ಲಾ ರೀತಿಯಿಂದಲೂ ಅಲ್ಲಾಹನು ನನಗೆ ಅಭಿವೃದ್ಧಿಯನ್ನು ನೀಡಿದ್ದಾನೆ. ನಮ್ಮ ಜಮಾಅತ್‌ನ್ನು ಸಾವಿರಾರು ಸಂಖ್ಯೆಯವರೆಗೆ ತಲುಪಿಸಿದನು, ನಮ್ಮ ಪ್ರಸಿದ್ಧಿ, ಜ್ಞಾನ ಲಕ್ಷಾಂತರ ಜನರಿಗೆ ಮನವರಿಕೆಯಾಯಿತು. ದಿವ್ಯವಾಣಿ ಅನ್ವಯ, ಮುಬಾಹಲ ನಂತರ ಇನ್ನೊಬ್ಬ ಪುತ್ರನು ನಮಗೆ ದಯಪಾಲಿಸಿದನು. ಅವನ ಜನನದಿಂದ ಮೂರು ಬಾಲಕರಾದರು, ನಾಲ್ಕನೆಯ ಮಗುವಿಗಾಗಿ ನನಗೆ ನಿರಂತರ ದಿವ್ಯವಾಣಿ ಆಗುತ್ತದೆ. ನಾವು ಅಬ್ದುಲ್ ಹಖ್ಖಿನಿಗೆ ದೃಢಪಡಿಸುತ್ತೇವೆ. ಅವರು ಈ ಭವಿಷ್ಯವಾಣಿ ಪೂರ್ಣವಾಗುವವರೆಗೆ ಸಾಯುವುದಿಲ್ಲ. ಈಗ ಅವರ ಕರ್ತವ್ಯವಾಗಿದೆ. ಸಾಧ್ಯವಾದರೆ ಈ ಭವಿಷ್ಯವಾಣಿಯನ್ನು ರದ್ದು ಮಾಡಿ ತೋರಿಸಲಿ. ಈ ಭವಿಷ್ಯವಾಣಿ ನಾಲ್ಕನೆ ಪುತ್ರನ ಕುರಿತು ಆಗಿದೆ. ಈ ಭವಿಷ್ಯವಾಣಿಯ ಎರಡುವರೆ ವರ್ಷಗಳ ನಂತರ ನಾಲ್ಕನೇ ಮಗು ಅಬ್ದುಲ್ ಹಖ್ಖಿನ ಜೀವಿತದಲ್ಲಿಯೇ ಹುಟ್ಟಿದನು. ಅವನ ಹೆಸರು ಮುಬಾರಕ್ ಅಹ್ಮದ್ ಎಂದು ಇಡಲಾಯಿತು. ಅವನು ಇಂದಿಗೂ ಅಲ್ಲಾಹನ ಅನುಗ್ರಹದಿಂದ ಜೀವಂತವಾಗಿದ್ದಾನೆ. ಮೌಲ್ವಿ ಅಬ್ದುಲ್ ಹಖ್ ಈ ಮಗುವಿನ ಸುದ್ದಿ ಇಲ್ಲಿಯವರೆಗೆ ಕೇಳಲಿಲ್ಲ ಎಂದಾದರೆ ನಾವು ಆಲಿಸಿಕೊಳ್ಳುತೇವೆ, ಇದು ಎಷ್ಟೊಂದು ಮಹೋನ್ನತವಾದ ದೃಷ್ಟಾಂತವಾಗಿದೆ, ಎರಡೂ ಹಂತದಿಂದಲೂ ಸತ್ಯವಾಗಿದೆ. ಗಂಡು ಮಗು ಆಗುವವರೆಗೆ ಅಬ್ದುಲ್ ಹಖ್ ಜೀವಂತವಾಗಿದ್ದನು. ಆದರೆ ಈ ವಿಷಯದಲ್ಲಿ ಅಬ್ದುಲ್ ಹಖ್ಖ್‌ನ ಯಾವ ಶಾಪವೂ ಮಂಜೂರಾಗಲಿಲ್ಲ. ತನ್ನ ಶಾಪದಿಂದ ವಾಗ್ದತ್ತ ಪುತ್ರನನ್ನು ಜನಿಸುವುದರಿಂದ ತಡೆಯಲಾಗಲಿಲ್ಲ. ಬದಲು ಒಂದು ಗಂಡು ಮಗು ಜಾಗದಲ್ಲಿ ಮೂರು ಗಂಡು ಮಕ್ಕಳಾದವು. ಇನ್ನೊಂದೆಡೆ ಅಬ್ದುಲ್ ಹಖ್ಖ್‌ನ ಸ್ಥಿತಿ ನೋಡಿರಿ. ಮುಬಾಹಲ ನಂತರ ಅಬ್ದುಲ್ ಹಖ್ ಮನೆಯಲ್ಲಿ ಹನ್ನೆರಡು ವರ್ಷ ಕಳೆದಾಗಿದೆ. ಒಂದು ಮಗು ಸಹ ಹುಟ್ಟಲಿಲ್ಲ. ವಿಷಯ ಸ್ಪಷ್ಟವಿದೆ. ಮುಬಾಹಲ ನಂತರ ಸಂತಾನರಹಿತವಾಗುವುದು ಮತ್ತು 12 ವರ್ಷ ಕಳೆದರೂ ಒಂದೂ ಮಗು ಹುಟ್ಟದೆ ಅಪ್ಪಟ ಸಂತಾನರಹಿತನಾಗಿರುವುದು ದೈವಿಕ ಶಾಪವಲ್ಲವೆ, ಮತ್ತು ಮರಣ ಸಮಾನವಲ್ಲವೆ. ಅಲ್ಲಾಹನು ಹೇಳಿದಂತೆಯೇ. ಇನ್ನ ಶಾನಿಅತ್ ಹುಅರ್ ಅಖ್ತರ್. ನೆನಪಿರಲಿ ಅವನ ಶಾಪದೊಂದಿಗೆಯೇ ಅಬ್ದುಲ್ ಹಖ್ ಮನೆಯಲ್ಲಿ ಯಾವ ಮಗುವೂ ಹುಟ್ಟಲಿಲ್ಲ. ಬದಲು ಸಂತಾನರಹಿತ ಹಾಗೂ ಈ ಅನುಗ್ರಹದಿಂದ ಅಪ್ಪಟ ವಂಚಿತನಾದನು. ಸಹೋದರ ತೀರಿಹೋದನು, ಮುಬಾಹಲ ನಂತರ ಗಂಡು ಮಗು ಹುಟ್ಟುವ ಬದಲು ಪ್ರಿಯ ಸಹೋದರನೂ ಇಹಲೋಕ ತ್ಯಜಿಸಿದನು.

ಇದೀಗ ನ್ಯಾಯವಂತರು ಯೋಚಿಸಲಿ, ಅಲ್ಲಾಹನ ಭಯ ಹೊಂದಿ ಯೋಚಿಸಲಿ, ಈ ದಿವ್ಯಜ್ಞಾನ ಮನುಷ್ಯನಿಂದ ಸಾಧ್ಯವೇ, ಸ್ವಯಂ ಸುಳ್ಳು ಸೃಷ್ಟಿ ಮಾಡಿ ಹೇಳಬಹುದೇ. ನನ್ನ ಮನೆಯಲ್ಲಿ ನಾಲ್ಕನೇ ಗಂಡು ಮಗು ಆಗುವುದು ಎಂದು, ಅಲ್ಲದೆ ವ್ಯಕ್ತಿಯೊಬ್ಬನು ಇಂತಿಷ್ಟು ಕಾಲ ಬದುಕಿರುವರು ಮತ್ತು ಹಾಗೆಯೇ ಆಗುವುದು ಸಹ, ಇಂತಹ ಉದಾಹರಣೆ ಯಾವನೇ ಒಬ್ಬ ಸುಳ್ಳುಗಾರನಿಗಾಗಿ ಆಗದಿದ್ದರೆ ತೋರಿಸಿ. ಅಲ್ಲಾಹನು ಎರಡೂ ಹಂತದಿಂದಲೂ ಅದನ್ನು ಸತ್ಯಮಾಡಿ ತೋರಿಸಿದನು. ಅಂದರೆ ನಾಲ್ಕನೇ ಮಗುವನ್ನು ನೀಡಿದನು ಮತ್ತು ಅಲ್ಲಿಯವರೆಗೆ ಅವನ ಶತ್ರುವನ್ನು ಭವಿಷ್ಯವಾಣಿಯ ಪ್ರಕಾರ ಜೀವಂತನಾಗಿರಿಸಿದನು. ನೆನಪಿರಲಿ. ಮುಬಾಹಲದ ನೂರಾರು ಅನುಗ್ರಹಗಳಲ್ಲಿ ಇದು ಸಹ ಒಂದು ಅನುಗ್ರಹವಾಗಿದೆ. ಅಲ್ಲಾಹನು ಮುಬಾಹಲ ನಂತರ ನನಗೆ ಮೂರು ಗಂಡು ಮಕ್ಕಳನ್ನು ನೀಡಿದನು. ಅಂದರೆ ಶರೀಫ್ ಅಹ್ಮದ್, ಮುಬಾರಕ್ ಅಹ್ಮದ್, ನಸೀರ್ ಅಹ್ಮದ್, ಇದೀಗ ನಾನು ಅಬ್ದುಲ್ ಹಖ್ ಬಗ್ಗೆ ಸಂತಾನರಹಿತನಾಗುವುದನ್ನು ತಪ್ಪು ಹೇಳುತ್ತಿದ್ದೇವೆ ಎಂದಾದರೆ ಅವರು ನಮಗೆ ತೋರಿಸಲಿ. ಮುಬಾಹಲ ನಂತರ ಅವರ ಮನೆಯಲ್ಲಿ ಎಷ್ಟು ಗಂಡು ಮಕ್ಕಳು ಹುಟ್ಟಿದವು. ಅವರು ಎಲ್ಲಿದ್ದಾರೆ. ಅಷ್ಟೇಕೆ ಯಾರಾದರೂ ಮೊದಲ ಮಗುವೇ ನಮಗೆ ತೋರಿಸಲಿ. ಇದು ಶಾಪದ ಪರಿಣಾಮವಲ್ಲದೆ ಮತ್ತೇನು. ನಾನು ಪದೇ ಪದೇ ಬರೆದಾಗಿದೆ. ಅಬ್ದುಲ್ ಹಖ್ ಮುಬಾಹಲ ನಂತರ ಎಲ್ಲಾ ರೀತಿಯ ಕಾರುಣ್ಯಗಳಿಂದ ವಂಚಿತನಾದನು. ಅದೇ ರೀತಿ ಅವನಿಗೆದುರಾಗಿ ನನ್ನ ಮೇಲೆ ಅಲ್ಲಾಹನು ಎಂತಹ ಅನುಗ್ರಹವಾಯಿತೆಂದರೆ, ಇಹಪರದ ಯಾವೆಲಾ ಅನುಗ್ರಹವಿದೆಯೋ ಅಲ್ಲಾಹನು ನನಗೆ ನೀಡದೆ ಇಲಿಲ್ಲ. ಸಂತಾನ ಅವನು ದಯಪಾಲಿಸಿದನು ಅದು ಎರಡರಿಂದ ಐದಾದರು, ಸಂಪತ್ತಿನಲ್ಲಿ ಕಾರುಣ್ಯ ದೊರೆಯಿತು, ಲಕ್ಷೋಪಲಕ್ಷ ರೂಪಾಯಿಗಳು ಬಂದವು, ಗೌರವದಲ್ಲಿ ಉನ್ನತಿಯಾಯಿತು. ಲಕ್ಷಾಂತರ ಜನರು ನನ್ನ ಬೈಅತ್ ಮಾಡಿದರು. ಅಲ್ಲಾಹನ ನೆರವಿನಲ್ಲಿ ಅನುಗ್ರಹವಾಯಿತು. ನೂರಾರು ದೃಷ್ಟಾಂತಗಳು ನನ್ನ ಪರ ಜಾಹೀರಾದವು. (ಹಖೀಖತುಲ್ ವಹಿ. ರೂಹಾನಿ ಖಝಾಇನ್ ಸಂಪುಟ–22, ಪುಟ–364)

### ಅಬ್ದುಲ್ ಹಖ್ ಭವಿಷ್ಯವಾಣಿ ಮತ್ತು ಗಂಡು ಮಗು ಆಗುವುದು ಎಂಬ ಜಾಹೀರಾತು ಪ್ರಕಟಣೆ ಎಲ್ಲವು ವ್ಯರ್ಥವಾಯಿತು.

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ. ಆಕ್ಷೇಪ ನಿಮ್ಮ ಸ್ಥಿತಿಯ ಮೇಲಾಗುತ್ತದೆ. ನಿಮ್ಮ ಮುಖದಿಂದಲೆ ಹೊರಟಿತು. ಅಲ್ಲಾಹನ ಅನುಗ್ರಹದಿಂದ ನನಗೆ ಗಂಡು ಮಗು ಆಗುವುದು, ಆ ಭವಿಷ್ಯವಾಣಿಯನ್ನು ಪತ್ರಿಕೆಯಲ್ಲಿ ಪ್ರಕಟಿಸಿದರು ಅಂದರೆ ಆ ಮಗು ಒಳಗಿಂದೊಳಗೆ ಕರಗಿ ಹೋಯಿತೇ, ಹೊರಗೆ ಬರಲು ಸಾಧ್ಯಯವಾಗಲಿಲ್ಲವೇ, ಅಕಟಾ! ಅದು ಮೃತ್ಯು ಹೊಂದಿ ಆದರೂ ಹುಟ್ಟಿದ್ದರೆ ಏನಾದರೂ ಮಾತಿತ್ತು. ಮುಬಾಹಲದ ಕೆಟ್ಟ ಪರಿಣಾಮ ನಿಮ್ಮ ಮೇಲೆ ಹೀಗೂ ಆಯಿತು. ನೀವು ಸಂತಾನದಿಂದ ವಂಚಿತರಾಗಿದ್ದೀರಿ. ಅಂತೂ ನನ್ನ ಮನೆಯಲ್ಲಿ ಸಂತಾನದ ಸುವಾರ್ತೆಯಿಂದಾಗಿ 4 ಗಂಡು ಮಕ್ಕಳಾದವು. ಪ್ರತಿಯೊಂದು ಮಗುವಿನ ಜನನಕ್ಕಿಂತ ಮುಂಚೆ ಅಲ್ಲಾಹನು ವಾರ್ತೆ ನೀಡಿದನು. ನಾನು ಅದನ್ನು ಸಾವಿರಾರು ಜನರಲ್ಲಿ ಪ್ರಕಟಪಡಿಸಿದ್ದೇನೆ. ಆದರೆ ನೀವು ಹೇಳಿ, ನಿಮ್ಮ ಮನೆಯಲ್ಲಿ ಯಾವುದರ ಜನನವಾಯಿತು. (ತೊಹಫಗಝ್ನವಿಯಾ, ರೂಹಾನಿ ಖಝಾಇನ್, ಸಂಪುಟ–15, ಪುಟ–555)

### ನಾಲ್ಕನೆ ಮಗುವಿನ ಜನನದ ಸುದ್ಧಿಯ ಭವಿಷ್ಯವಾಣಿ ವಿಜೃಂಭಣೆಯಿಂದ ಮಾಡಲಾಗಿತ್ತು.

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ. ಈ ವಿನೀತನ ಮನೆಯಲ್ಲಿ ನಾಲ್ಕು ಗಂಡು ಮಕ್ಕಳಾಗುವರು. ಮತ್ತು ಅಬ್ದುಲ್ ಹಖ್ ಗಝ್ನವಿ ಸಹ ಬದುಕಿರುವನು. ನಾಲ್ಕನೆ ಮಗು ಸಹ ಹುಟ್ಟುವುದು ಎಂಬುದನ್ನು ಎಷ್ಟೊಂದು ವಿಜೃಂಭಣೆಯಿಂದ ಪ್ರಕಟಪಡಿಸಲಾಗಿತ್ತು. ಮತ್ತು ಎಷ್ಟೊಂದು ಸ್ಪಷ್ಟ ರೂಪದಲ್ಲಿ ಪೂರ್ಣಗೊಂಡಿದೆ. ಆದರೆ ಯಾರು ಅದರ ಮೇಲೆ ವಿಶ್ವಾಸ ತಂದರು, ಇವೆಲ್ಲಾ ದೃಷ್ಟಾಂತಗಳು ಕೇವಲ ಒಂದೆರಡಲ್ಲ. ಬದಲು ಒಂದು ನೂರಾ ಐವತ್ತಕ್ಕಿಂತ ಹೆಚ್ಚಾಗಿವೆ. ಈ ದೃಷ್ಟಾಂತಗಳನ್ನು ವೀಕ್ಷಿಸಿದ ಸಾಕ್ಷಿಗಳನ್ನು ಅವರು ಇಂದಿಗೂ ಜೀವಂತವಾಗಿದ್ದಾರೆ. ಅವರನ್ನು ಸಾಲುಗಟ್ಟಿ ನಿಲ್ಲಿಸಿದರೆ ಒಂದು ದೊಡ್ಡ ಸರಕಾರದ ಸೈನ್ಯದಂತೆಯೇ ಕಾಣುವುದು. ಅಷ್ಟೊಂದು ದೃಷ್ಟಾಂತಗಳನ್ನು ನೋಡಿಯೂ, ಯಾವ ದೃಷ್ಟಾಂತನು ಪ್ರಕಟವಾಗಿಲ್ಲ ಎನ್ನುವುದು ಎಷ್ಟು ದೌರ್ಜನ್ಯಕರ ಮಾತಾಗಿದೆ. (ಮಝೂಲುಲ್ ಮಸೀಹ್, ರೂಹಾನಿ ಖಝಾಇನ್, ಸಂಪುಟ–18, ಪುಟ–407)

### ಅಬ್ದುಲ್ ಹಖ್ ಸಂತಾನರಹಿತನಾಗಿಯೇ ಉಳಿದ ಅದು ಮರಣ ಹೊಂದುವ ಆಜ್ಞೆಯಂತೆಯೇ ಇದೆ.

ಸಯ್ಯದನಾ ಹಝ್ರತ್ ಮಸೀಹ್ ಮೌಊದ್ (ಅ) ನುಡಿದರು. ಅಂತೆಯೇ ಅಬ್ದುಲ್ ಹಖ್ ಎದ್ದನು ಮತ್ತು ಅವನು ಮುಬಾಹಲ ಮಾಡಿ ತನ್ನ ಶಾಪಗಳಿಂದ ನನ್ನ ವಿನಾಶ ಬಯಸಿದನು. ಆದರೆ ಎಲ್ಲಾ ರೀತಿಯಿಂದಲೂ ನನಗೆ ಪ್ರಗತಿ ಸಿಕ್ಕಿತು. ಅದು ಮುಬಾಹಲ ನಂತರದ್ದೆ ಆಗಿವೆ. ಹಲವು ಲಕ್ಷ ಜನರು ನನ್ನ ಅನುಯಾಯಿಯಾದರು. ಎಷ್ಟೋ ಲಕ್ಷ ರೂಪಾಯಿಗಳು ಬಂದವು. ಪ್ರಪಂಚದಾದ್ಯಂತ ತನ್ನ ಗೌರವ ಪ್ರಸಿದ್ಧಿ ಹರಡಿತು. ಅಷ್ಟೇಕೆ ವಿದೇಶದವರು ಸಹ ನನ್ನ ಜಮಾಅತಿಗೆ ಸೇರಿದರು. ಮತ್ತು ಹಲವು ಮಕ್ಕಳ ಜನನವಾಯಿತು. ಆದರೆ ಅಬದುಲ್ ಹಖ್ ಸಂತಾನರಹಿತವಾಗಿಯೇ ಉಳಿದ ಅದು ಮರಣದ ಆಜ್ಞೆಯಂತೆಯೇ ಇವೆ. ಒಂದಿಷ್ಟು ಅವನಿಗೆ ಅಲ್ಲಾಹನ ಕಾರುಣ್ಯ ದೊರೆಯಲಿಲ್ಲ. ಮೊದಲಾಗಲಿ, ನಂತರವಾಗಲಿ ಅವನಿಗೆ ಯಾವ ಗೌರವವು ದೊರೆಯಲಿಲ್ಲ.

ಇನ್ನ ಶಾನಿಅಕ್ ಹುಅಲ್‌ಅಬ್ತರ್‌ಗೆ ಸರಿ ಹೊಂದಿದನು. (ಹಖೀಖತುಲ್ ವಹಿ ಪುಟ 348)

**ಅಬ್ದುಲ್ ಹಖ್ ಕೊನೆಗೆ ಸಂತಾನರಹಿತನಾಗಿಯೇ ಉಳಿದ. ಅವನ ಮೇಲೆ ಮುಬಾಹಲ ಪೂರ್ಣರೂಪದಲ್ಲಿ ಪರಿಣಾಮ ಬೀರಿದೆ.**

ಸಯ್ಯಿದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ನುಡಿದರು. ಅಬ್ದುಲ್ ಹಖ್‌ನಿಗೆ ಮುಬಾಹಲ ನಂತರ ನಾನು ನನ್ನ ಇನ್ನೊಂದು ಗ್ರಂಥವಾದ ಅನ್ವಾರುಲ್ ಇಸ್ಲಾಮಿನಲ್ಲಿ ಎಷ್ಟೋ ಸಲ ಸಂಬೋಧಿಸಿ ಬರೆದಿದ್ದೇನೆ. ನೀವು ನಿಮ್ಮ ಪ್ರಾರ್ಥನೆಯಿಂದ ಮುಬಾಹಲ ಪರಿಣಾಮದಿಂದ, ರಕ್ಷಿಸಿಕೊಳ್ಳುವುದಾದರೆ ನಿಮ್ಮ ಮನೆಯಲ್ಲಿ ಹೇಗಾದರೂ ಒಂದು ಗಂಡು ಮಗು ಪಡೆಯಲು ಪ್ರಯತ್ನಪಡಿಸರಿ. ನೀವು ಸಂತಾನರಹಿತವಾಗಿ ಉಳಿದರೆ ಮುಬಾಹಲ ಪರಿಣಾಮ ಎಂದಾದೀತು.

ಅಂದ ಹಾಗೆ ಅಷ್ಟೊಂದು ತಾಕೀತಿನ ನಂತರ ಅವಶ್ಯವಾಗಿ ಪ್ರಾರ್ಥಿಸಿರಬಹುದು. ಆದರೂ ಅಂತಿಮವಾಗಿ ಸಂತಾನರಹಿತವಾಗಿಯೇ ಉಳಿದರು. ಅದಕ್ಕಿಂತ ಹೆಚ್ಚು ದೃಷ್ಟಾಂತ ಇನ್ನೇನಾದೀತು. (ಹಖೀಖತುಲ್ ವಹಿ, ಪುಟ 348 ಟಿಪ್ಪಣಿ).

**ಹದಿನಾಲ್ಕು ವರ್ಷ ಕಳೆದಾಗಲೂ ಅಬ್ದುಲ್ ಹಖ್ಖನ ಬಳಿ ಯಾವ ಸಂತಾನವು ಆಗಲಿಲ್ಲ.**

ಸಯ್ಯಿದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ. ಅಬ್ದುಲ್ ಹಖ್ ಗಝ್ನವಿ, ಅಮೃತ್‌ಸರ ಮುಬಾಹಲ ನಂತರ ತನ್ನ ಬಗ್ಗೆ ಮುಬಾಹಲದ ಪರಿಣಾಮ ಹೀಗೆ ವ್ಯಕ್ತಪಡಿಸಿದ್ದರು. ನನ್ನ ಸಹೋದರ ತೀರಿಕೊಂಡಿದ್ದಾನೆ. ಅವನ ಹೆಂಡತಿಯಿಂದ ನನ್ನ ವಿವಾಹವಾಗಿದೆ. ಅವಳು ಬಸರಿಯಾಗಿದ್ದಾಳೆ, ಅವಳಿಗೆ ಗಂಡು ಮಗು ಆಗುವುದು. ಅದನ್ನು ಮುಬಾಹಲದ ಫಲ ಎಂದು ಭಾವಿಸಲಾಗುವುದು. ಆದರೆ ಅದರ ಪರಿಣಾಮ ಏನಾಯಿತು, ಏನೂ ಹುಟ್ಟಲಿಲ್ಲ. ಇಲ್ಲಿಯವರೆಗೆ ಹದಿನಾಲ್ಕು ವರ್ಷ ಕಳೆದರೂ ಅಪಮಾನದ ವಿಫಲತೆಯ ಜೀವನ ಕಳೆಯುತ್ತಿದ್ದಾರೆ. ಅದರ ವಿರುದ್ಧವಾಗಿ ಮುಬಾಹಲ ನಂತರ ನನ್ನ ಮನೆಯಲ್ಲಿ ಎಷ್ಟೇ ಮಕ್ಕಳು ಜನ್ಮ ಪಡೆದರು. ಮತ್ತು ಎಷ್ಟೋ ಲಕ್ಷ ಜನರು ಬೈಅತ್ ಮಾಡಿದರು ಮತ್ತು ಎಷ್ಟೋ ಲಕ್ಷ ರೂಪಾಯಿಗಳು ಬಂದವು ಮತ್ತು ಪ್ರಪಂಚದಾದ್ಯಂತ ತನ್ನ ಹೆಸರು ಖ್ಯಾತಿ ಪಸರಿಸಿತು. ಮತ್ತು ಹಲವು ಶತ್ರುಗಳು ಮುಬಾಹಲ ನಂತರ ಮರಣ ಹೊಂದಿದರು ಮತ್ತು ಸಾವಿರಾರು ದೈವಿಕ ದೃಷ್ಟಾಂತಗಳು ನನ್ನ ಪರವಾಗಿ ಪ್ರಕಟವಾದವು. (ಹಖೀಬತುಲ್ ವಹಿ, ಪುಟ 444 ಟಿಪ್ಪಣಿ)

ಸಯ್ಯಿದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ನುಡಿಯುತ್ತಾರೆ. ಯಾವುದೇ ಮೌಲ್ವಿಯೊಬ್ಬರು ನಮಗೆ ತಿಳಿಸಿಕೊಡಲಿ. ಅಬ್ದುಲ್ ಹಖ್ಖನಿಗೆ ಮುಬಾಹಲ ನಂತರ ಲೋಕದಲ್ಲಿ ಯಾವ ಗೌರವ ಉಂಟಾಯಿತು. ಯಾವ ಪ್ರಸಿದ್ಧಿ ಜನರಲ್ಲಿ ಹರಡಿತು. ಯಾವ ಸಾಂಪತ್ತಿಕ ವಿಜಯಗಳ ಬಾಗಿಲು ಅವರ ಮೇಲೆ ತೆರೆಯಿತು. ಯಾವ ಶೈಕ್ಷಣಿಕ ಅರ್ಹತೆಯ ಕಿರೀಟ ಅವರಿಗೆ ಧರಿಸಲಾಯಿತು. ಕೇವಲ ನಿಷ್ಪ್ರಯೋಜಕ ರೀತಿಯಲ್ಲಿ ಗಂಡು ಮಗು ಆಗುವ ದಾವೆ ಮಾಡಿದ್ದನು. ಅದನ್ನೇ ಮುಬಾಹಲದ ಪರಿಣಾಮ ಎಂದು ಭಾವಿಸಲು. ಆದರೆ ಅವರ ದುರಾದೃಷ್ಟ ಆ ದಾವೆಯೂ ಸುಳ್ಳಾಯಿತು. ಇಲ್ಲಿಯವರೆಗೂ ಆ ಹೆಣ್ಣಿನ ಹೊಟ್ಟೆಯಿಂದ ಒಂದು ಇಲಿ ಸಹ ಹುಟ್ಟಲಿಲ್ಲ. ಆದರೆ ಅದರ ಎದುರಾಗಿ ಅಲ್ಲಾಹನು ನನ್ನ ದಿವ್ಯವಾಣಿಯನ್ನು ಪೂರ್ಣಗೊಳಿಸುತ್ತಾ ನನಗೆ ಪುತ್ರ ದಯಪಾಲಿಸಿದನು. (ಝಮೀಮ ರಿಸಲ ಅಂಜಾಮೆ ಆಥಮ್, ರೂಹಾನಿ ಖಝಾಈನ್, ಸಂಪುಟ–11, ಪುಟ–316, ಅಡಿಟಿಪ್ಪಣಿ)

ಸಯ್ಯಿದ್‌ನಾ ಹಝ್ರತ್ ಮಸೀಹ್ ಮೌಊದ(ಅ) ನುಡಿಯುತ್ತಾರೆ. ಅಬ್ದುಲ್ ಹಖ್ ಮುಬಾಹಲ ನಂತರ ಒಂದು ಪತ್ರಿಕೆ ಹೊರಡಿಸಿದ್ದನು. ಒಂದು ಗಂಡು ಮಗು ನನ್ನ ಮನೆಯಲ್ಲಿ ಹುಟ್ಟುವನು, ಅಂದ ಹಾಗೆ ಅಲ್ಲಾಹನ ಅನುಗ್ರಹ ಮತ್ತು ಔದಾರ್ಯದಿಂದ ನನ್ನ ಮನೆಯಲ್ಲಂತೂ ಗಂಡು ಮಗು ಹುಟ್ಟಿತು. ಅವನ ಹೆಸರು ಶರೀಫ್ ಅಹ್ಮದ್ ಎಂದಾಗಿದೆ. ಅವನಿಗೆ ಸುಮಾರು ಎರಡು ವರ್ಷ ವಯಸ್ಸಾಗಿದೆ. ಈಗ ಅನಿವಾರ್ಯವಾಗಿರುತ್ತದೆ. ಅಬ್ದುಲ್ ಹಖ್ಖನಿಗೆ ಕೇಳಬೇಕು. ಆ ಮುಬಾಹಲದ ಅನುಗ್ರಹದಿಂದಾಗಿ ಹುಟ್ಟಿದ ಮಗ ಎಲ್ಲಿ ಹೋಯಿತು. ಹೊಟ್ಟೆಯ ಒಳಗಿಂದೊಳಗೆ ಕರಗಿ ಹೋಯಿತೇ ಅಥವಾ ಮಿಲನದಿಂದ ಪಲಾಯನ ಮಾಡಿ ವೀರ್ಯವಾಯಿತೆ, ಇದನ್ನು ಹೊರತು ಇನ್ನಾವುದರ ಹೆಸರು ಅಪಮಾನ ಎಂದಾಗಿದೆ, ಅವನು ಏನೆಲ್ಲ ಹೇಳಿದ್ದನೋ ಯಾವುದೂ ಪೂರ್ಣಗೊಳ್ಳಲಿಲ್ಲ ಮತ್ತು ಏನೆಲ್ಲ ನಾನು ಅಲ್ಲಾಹನ ದಿವ್ಯವಾಣಿ ಪಡೆದು ಹೇಳಿದೆನು. ಅದನ್ನು ಪೂರ್ಣಗೊಳಿಸಿದ್ದಾನೆ. (ಅದೇ ಪುಟ 311 ಟಿಪ್ಪಣಿ)

ಮುಂದಿನ ಸಂಚಿಕೆಯನ್ನು ಇನ್ಶಾಅಲ್ಲಾಹ್ ನಾವು ಸಯ್ಯಿದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರವರ ಇನ್ನೊಂದು ಬಹುಮಾನದ ಪಂಥಾಹ್ವಾನ ಕುರಿತು ವಿವರಿಸುವೆವು. **(ಮನ್ಸೂರ್ ಅಹ್ಮದ್ ಮಸ್ರೂರ್)**

*(ಪುಟ ಸಂಖ್ಯೆ 1ರ ಉಳಿದ ಭಾಗ)*

ದೇವದೂತರು ಅವತರಿಸುತ್ತಾರೆ ಎಂದರ್ಥ. ಪ್ರವಾದಿಗಳ ಮೇಲೆ ಮತ್ತು ಸತ್ಯವಿಶ್ವಾಸಿಗಳ ಮೇಲೆ ಅವರ ಸಾಮರ್ಥ್ಯಕ್ಕನುಗುಣವಾಗಿ ಅಥವಾ ಅರ್ಹತೆಗೆ ಅನುಗುಣವಾಗಿ ಅವರ ಮೇಲೆ ದೇವದೂತರು ಅವತರಿಸುತ್ತಾರೆ. ಅವು ಅನುಗ್ರಹಗಳ ದೇವದೂತರಾಗಿರುತ್ತಾರೆ. ಅವು ಮುಹಮ್ಮದ್ ರಸೂಲುಲ್ಲಾಹ್ (ಸ) ರವರಿಗೆ ಮಾತ್ರ ಕಾಣಲು ಸಾಧ್ಯವಾಗುತ್ತದೆ. ಅಲ್ಲಾಹನ ಪ್ರಕೋಪಕ್ಕೆ ಕಾರಣರಾಗುವವರೆಗೆ ಹೇಗೆ ಕಾಣಲು ಸಾಧ್ಯವಾದೀತು. ಅವರ ಮೇಲೆ ಅವತರಿಸುವುದಾದರೆ ಪ್ರಕೋಪವುಳ್ಳ ದೇವದೂತರೇ ಅವತರಿಸುವುದು, ಆ ಸಮಯ ದೇವದೂತರನ್ನು ಕಾಣುವುದು ಯಾವ ಪ್ರಯೋಜನವು ನೀಡುವುದಿಲ್ಲ. ಏಕೆಂದರೆ ಅವು ಅವರನ್ನು ನಾಶಪಡಿಸಲು ಬರುವುವು. ಅವರು ಬಂದ ಮೇಲೆ ಅವಿಶ್ವಾಸಿಗಳಿಗೆ ಯಾವ ಕಾಲಾವಕಾಶವು ದೊರೆಯದು. ಅಂದ ಹಾಗೆ ಬದರ್ ಯುದ್ಧ ಸಂದರ್ಭದಲ್ಲಿ ಈ ಶಿಕ್ಷಿಸುವ ದೇವದೂತರೇ ಬಂದಿದ್ದವು ಮತ್ತು ಕೆಲ ಅವಿಶ್ವಾಸಿಗಳಿಗೆ ದಿವ್ಯಸ್ವಪ್ನ ರೂಪದಲ್ಲಿ ಕಾಣಲು ಸಾಧ್ಯವಾಯಿತು. ಆದರೆ ಆ ಸಮಯ ಅವರ ವಿನಾಶದ ಸಮಯವಾಗಿತ್ತು. ಆಗ ಅವರಿಂದ ಅವರಿಗೆ ಯಾವ ಪ್ರಯೋಜನ ಪಡೆಯಲು ಸಾಧ್ಯವಿತ್ತು. ಇಲ್ಲಿ ಒಂದು ಬಹುವಿವೇಕದ ಮಾತು ಅಡಗಿದೆ. ಅದೇನೆಂದರೆ ದೇವದೂತರ ವಾಣಿ ಮನುಷ್ಯನ ಗುಣಗಳಂತೆಯೇ ಇರುತ್ತವೆ. ಯಾವ ಸ್ವಭಾವದ ಮನುಷ್ಯನಿರುವನು. ಅದಕ್ಕೆ ತಕ್ಕಂತೆಯೇ ವಾಣಿಯಾಗಿರುವುದು. ಸಾಮಾನ್ಯವಾಗಿ ದೇವವಾಣಿಯಾದ ಕೂಡಲೇ ಜನರು ತಮ್ಮನ್ನು ಬಹು ದೊಡ್ಡ ವ್ಯಕ್ತಿ ಎಂದು ತಿಳಿದುಕೊಳ್ಳುತ್ತಾರೆ. ಆದರೆ ಅದು ಸರಿಯಾಗಿರುವುದಿಲ್ಲ. ಏಕೆಂದರೆ ದೇವವಾಣಿಯ ಮನುಷ್ಯನ ಸ್ವಭಾವಕ್ಕೆ ತಕ್ಕಂತೆಯೇ ಇರುತ್ತದೆ. ಖಾದಿಯಾನಿನಲ್ಲಿ ಒಬ್ಬ ಗುಡ್ಡಗಾಡು ಮನುಷ್ಯ ನೀಡುತ್ತಿದ್ದ ಅವನು ಮಜೂರಿ ಕೆಲಸಕ್ಕಾಗಿ ಬರುತ್ತಿದ್ದ ಅವನು ಸಾಮಾನ್ಯತ: ನಮ್ಮ ಬಳಿಯೇ ಕೂಲಿ ಕೆಲಸ ಇತ್ಯಾದಿ ಮಾಡುತ್ತಿದ್ದ. ಕೆಲವೊಮ್ಮೆ ಯಾವುದೋ ಕೆಲಸಕ್ಕಾಗಿ ಹಝ್ರತ್ ಖಲೀಫತುಲ್ ಮಸೀಹ್ ಪ್ರಪ್ರಥಮರು (ರ) ಅವರ ಬಳಿ ಬರುತ್ತಿದ್ದನು. ಹಝ್ರತ್ ಖಲೀಫತುಲ್ ಮಸೀಹ್ ಅವನಿಗೆ ನಮಾಝ್ ನಿರ್ವಹಿಸಲು ತಾಕೀತು ಮಾಡುತ್ತಿದ್ದರು.ಆಗ ಅವನು ಹೇಳುತ್ತಿದ್ದ: "ನಮಾಝ್" ಸಾನೂ ಪಚದಿ ನೈಂ" (ಅಂದರೆ ನಮಾಝ್ ನಮಗೆ ಹಿಡಿಸುವುದಿಲ್ಲ) ಆಕಸ್ಮಾತ್ತಾಗಿ ಒಂದು ದಿನ ಅವರು (ರ) ಅವನಿಗೆ ನಮಾಝ್ ನಿರ್ವಹಿಸುತ್ತಿದ್ದನ್ನು ಕಂಡರು. ನಿರ್ವಹಣೆಯ ನಂತರ ಅವಳಿಗೆ ಕೇಳಿದರು. ಏನು ವಿಷಯ? ಅವನು ಉತ್ತರಿಸಿದನು. ಇಂದು ನನಗೆ ದೇವವಾಣಿಯಾಗಿದೆ. "ಉರ್ ಓಯೆ ಸೊರಾ ನಮಾಝ್ ಪಢ್" (ಅಂದರೆ ಓ ಹಂದಿಯೇ ಏಳು ಎದ್ದು ನಮಾಝ್ ನಿರ್ವಹಿಸು) ಆದುದರಿಂದ ನಾನು ನಮಾಝ್ ನಿರ್ವಹಿಸುವುದನ್ನು ಪ್ರಾರಂಭಿಸಿದ್ದೇನೆ. ಇದೀಗ ಸ್ಪಷ್ಟವಿದೆ. ಈ ದೇವವಾಣಿ ಶೈತಾನನಿಂದಲಂತೂ ಆಗಲು ಸಾಧ್ಯವಿಲ್ಲ. ಇದು ದಿಟವಾಗಿಯೂ ದೇವವಾಣಿಯಾಗಿತ್ತು. ಆದರೆ ಅವನ ಸ್ವಭಾವಕ್ಕೆ ತಕ್ಕಂತೆ ಇತ್ತು. ಅಂದ ಹಾಗೆ ಕೇವಲ ದೇವವಾಣಿ ಮುಖ್ಯವಲ್ಲ. ಬದಲು ಆ ದೇವವಾಣಿ ಅಲ್ಲಾಹನಿಂದ ಅವನ ಪ್ರೀತಿಯ ಇಂಗಿತ ಅಥವಾ ಆ ದಾಸನ ಪ್ರತಿ ಸ್ಥಾನಮಾನ ಕುರಿತು ಸೂಚನೆ ಇದೆಯೇ? ಎಂಬುದು ಮುಖ್ಯವಾಗಿರುತ್ತದೆ.

ಈ ವಚನದಿಂದ ಒಂದು ಸಾಮಾನ್ಯ ನಿಯಮದ ಅರಿವಾಗುತ್ತದೆ. ಅದೇನೆಂದರೆ ದೇವದೂತರೂ ಅವರ ಹಕ್ಕಿನಂತೆ ಅವತರಿಸುತ್ತಾರೆ. ಸತ್ಯವಿಶ್ವಾಸಿಗಳಲ್ಲಿ ಕಿರಿಯರು, ಹಿರಿಯರು, ಅಲ್ಲಾಹನಿಂದ ನಿಯುಕ್ತರಾದವರು, ನಿಯುಕ್ತರೇತರರು ಎಂಬ ದರ್ಜೆಗಳಿರುತ್ತವೆ. ಅದೇ ರೀತಿ ಪ್ರವಾದಿಗಳ ಸ್ಥಾನಮಾನದಲ್ಲಿ ವ್ಯತ್ಯಾಸವಿರುತ್ತದೆ. ಹಝ್ರತ್ ಖಾತಮನ್ನಬಿಯೀನ್(ಸ) ರವರು ಸಹ ಝಕರಿಯ, ಇಲ್ಯಾಸ್ ಮತ್ತು ಯೂಸೂಫ್ ಪ್ರವಾದಿಗಳಂತೆಯೇ ಪ್ರವಾದಿ ಅನಿಸಿಕೊಳ್ಳುತ್ತಿದ್ದರು. ಅಂದ ಹಾಗೆ ಯಾವ ರೀತಿ ಹೆಸರಿನ ಸಮಾನತೆ ಎಲ್ಲರಿಗೂ ಒಂದು ದರ್ಜೆ ನೀಡುವುದಿಲ್ಲವೋ, ಅದೇ ರೀತಿ ಎಲ್ಲರ ದೇವವಾಣಿ ಸಹ ಒಂದೇ ರೀತಿಯದ್ದು ಆಗದು. ಪ್ರತಿಯೊಬ್ಬ ಪ್ರವಾದಿಯ ದೇವವಾಣಿ ಅವರ ಘನತೆಗೆ ತಕ್ಕಂತೆ ಇರುತ್ತದೆ. ಈ ವಾಸ್ತವವನ್ನು ದೃಷ್ಟಿಯಲ್ಲಿಟ್ಟುಕೊಂಡರೆ ತೌರಾತ್, ಇಂಜೀಲ್, ಝಬೂರ್, ಪವಿತ್ರ ಖುರ್‌ಆನ್‌ನಂತೆ ಏಕೆ ಅದ್ವಿತೀಯ ಗ್ರಂಥವಲ್ಲ ಎಂಬ ಸಮಸ್ಯೆ ಇತ್ಯರ್ಥಗೊಳ್ಳುತ್ತದೆ. ಯಾವಾವ ಪ್ರವಾದಿಗಳಿಗೆ ದೇವವಾಣಿ ಅವತರಿಸಿದೆಯೋ ಅವರವರ ಘನತೆಗೆ ತಕ್ಕಂತೆ ಅಲ್ಲಾಹನು ಅನುಗ್ರಹಿಸಿರುವನು. ವಿವಿಧ ದರ್ಜೆಗಳ ಕಾರ್ಯಗಳನ್ನು ವಿವಿಧ ಪ್ರವಾದಿಗಳಿಗೆ ನೀಡಿ ಒಂದೇ ರೀತಿಯ ಸಾಮಗ್ರಿ ನೀಡಲು ಹೇಗೆ ಸಾಧ್ಯವಿತ್ತು? ಅಂದು ಅವರವರ ಕಾರ್ಯ ವಿಧಾನದಂತೆಯೇ ಅವರಿಗೆ ಸಾಮಗ್ರಿಗಳನ್ನು ಒದಗಿಸಲಾಗುತ್ತಿತ್ತು. ಮತ್ತು ಕಾರ್ಯಕ್ಷೇತ್ರದಂತೆಯೇ ಕಾರ್ಯಕರ್ತರನ್ನು ನಿಯುಕ್ತಗೊಳಿಸಲಾಗುತ್ತಿತ್ತು. **(ತಫ್ಸೀರ್ ಕಬೀರ್, ಸಂಪುಟ–5, ಪುಟ–13, ಮುದ್ರಣ 2010 ಖಾದಿಯಾನ್)**

**ಸೂಚನೆ**

ಓದುಗರಲ್ಲಿ ವಿನಂತಿಸಿಕೊಳ್ಳುವುದೇನಂದರೆ ಈ ಪತ್ರಿಕೆಯ ಬಗ್ಗೆ ತಮ್ಮ ಅಭಿಪ್ರಾಯಗಳು ಹಾಗೂ ಸಲಹೆ ಸೂಚನೆಗಳಿದ್ದಲ್ಲಿ ನಮ್ಮನ್ನು ನೇರವಾಗಿ ಸಂಪರ್ಕಿಸಿ.

**email: www.kannadabadar@gmail.com**

**Mob or whatsapp: 8050330779**

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

Weekly **BADAR** Qadian

Distt: Gurdaspur (Pb.) INDIA Qadian - 143516

Postal Reg. No: 3000039689/2020-22 Vol No.02, Thursday, 16 September 2021, Issue No. 37

EDITOR
TARIQ AHMED IDRIS.
Mobile : +91 8050330779
e-mail: kannadabadar@gmail.com
website:www.akhbarbadarqadian.in

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION:Rs.575/- (Per Issue: 10/- ) (WEIGHT: 20-50, grms / issue)

## *ಸಯ್ಯದನಾ ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್‌ರವರ ಜರ್ಮನಿಯ ಪ್ರವಾಸ (ಮೇ, ಜೂನ್ 2015)*

**(ಬದರ್ ಸಂಚಿಕೆ 36ರ ವರದಿಯ ಉಳಿದ ಭಾಗ)**

* ಮೆಸೆಡೋನಿಯಾದಿಂದ ಬಂದ ಅತಿಥಿ ಒಬ್ಬರು ಕೇರೋದಿ ಮತ್ರೋಸ್ಕಿ ಸಾಹಿಬ್ ಹೇಳಿದರು. ನಾನು ನಿಮ್ಮ ಜಮಾಅತಿನಿಂದ ತುಂಬಾ ಪ್ರಭಾವಿತನಾಗಿದ್ದೇನೆ. ನಾನು ಜೀವನದಲ್ಲಿ ಮೊದಲ ಬಾರಿಗೆ ಇಷ್ಟೊಂದು ಉತ್ತಮ ಜನರೊಂದಿಗೆ ಭೇಟಿಯಾಗಿದ್ದೇನೆ. ನನಗೆ ಎಲ್ಲಕ್ಕಿಂತ ಪ್ರಭಾವಿತಗೊಳಿಸಿದ ವಿಷಯ ಎಂದರೆ ಇಸ್ಲಾಮಿನ ಸಂದೇಶ. ಅದು ನನಗೆ ಇಲ್ಲಿ ದೊರೆತಿದೆ. ನಿಮ್ಮಲ್ಲಿ ಈ ಗೋಡೆಗಳ ಮೇಲೆ ಹಾಕಲಾದ ಸಂದೇಶ ಫಲಕಗಳು ಕೇವಲ ಪದಗಳಲ್ಲ. ಒಂದೇ ರೀತಿಯ ನಿಮ್ಮ ಕರ್ಮಗಳಾಗಿವೆ. ನೀವು ಪ್ರೀತಿಸುತ್ತೀರಿ. ಶಾಂತಿಯನ್ನು ಪ್ರದರ್ಶಿಸುತ್ತೀರಿ. ಇವೆಲ್ಲ ಮಾತುಗಳು ನಮ್ಮ ಮೇಲೆ ಗಹನವಾದ ಪ್ರಭಾವ ಬೀರಿದೆ.

* ಮೊಸೆಡೋನಿಯಾದಿಂದ ಬಂದ ಓರ್ವ ಅತಿಥಿ ವರಿಚ್ ನಜಾತ್ ಸಾಹಿಬ್ ಹೇಳುತ್ತಾರೆ. ನನ್ನ ಮೇಲೆ ಜಲ್ಸದ ತುಂಬಾ ಪ್ರಭಾವವಿದೆ. ಜಲ್ಸದಲ್ಲಿ ಮಾಡಲಾದ ಭಾಷಣಗಳು ತುಂಬಾ ಉತ್ತಮವಾಗಿದ್ದವು. ಶಾಂತಿ, ಅನ್ಯ ಧರ್ಮಗಳಿಗೆ ಗೌರವ, ಪರಸ್ಪರ ಪ್ರೀತಿಸುವುದು ಮತ್ತು ಶಾಂತಿ ಸ್ಥಾಪನೆಯೇ ಅದರ ಸಾರಾಂಶವಾಗಿತ್ತು. ಅದರಿಂದ ವ್ಯಕ್ತವಾಗುವುದೇನೆಂದರೆ ಅಹ್ಮದಿಯಾ ಜಮಾಅತ್ ಪ್ರೀತಿ ಮತ್ತು ಶಾಂತಿಯನ್ನು ಬಯಸುತ್ತದೆ. ಯಾರೊಡನೆಯೂ ದ್ವೇಷ ಇಷ್ಟಪಡುವುದಿಲ್ಲ. ಈ ಜಮಾಅತ್ ಎಲ್ಲ ಜನರಿಗೆ ಪ್ರೀತಿಯತ್ತ ಕರೆ ನೀಡುತ್ತದೆ ಮತ್ತು ಎಲ್ಲರನ್ನು ಗೌರವಿಸುವುದು ಇಸ್ಲಾಮಿ ಶಿಕ್ಷಣವೇ ಆಗಿದೆ.

* ಮೆಸೆಡೋನಿಯಾದಿಂದ ಬಂದ ಇನ್ನೊರ್ವ ಅತಿಥಿ Julija Coneuska ಸಾಹಿಬಾ ಹೇಳುತ್ತಾರೆ. ಹುಝೂರರನ್ನು ನೋಡಿ ನಾನು ತುಂಬಾ ಪ್ರಭಾವಿತನಾಗಿದ್ದೇನೆ. ಅವರು ನಮಗೆ ಸ್ವಾಗತಿಸಿದ ರೀತಿ ಕಂಡು ಅಚ್ಚರಿಯಾಯಿತು. ನಮ್ಮ ಜ್ಞಾನಭಂಡಾರ ನೋಡಿ ಬೆರಗಾದೆ. ನಿಮಗೆ ಶಿಕ್ಷಣದ ಮೇಲೆ ಪ್ರಭುತ್ವವಿದೆ. ನಿಮ್ಮ ವ್ಯಕ್ತಿತ್ವ ಶಾಂತಿಪೂರ್ಣ ವ್ಯಕ್ತಿತ್ವವಾಗಿದೆ. ಖಲೀಫರಲ್ಲಿ ಒಂದು ಆಧ್ಯಾತ್ಮಿಕ ಶಕ್ತಿಯಿದೆ. ಅದು ಎಲ್ಲರನ್ನು ತನ್ನತ್ತ ಸೆಳೆಯುತ್ತದೆ. ಅವರ ಎಲ್ಲ ರೀತಿಯ ಪ್ರಶ್ನೆಗಳಿಗೆ ಉತ್ತರ ನೀಡುವ ಪರಿ. ಇಂತಹ ಪ್ರಶ್ನೆಗಳಿಗೆ ಡಾಕ್ಟರುಗಳು ಸಹ ಉತ್ತರ ನೀಡಲಾರರು. ಖಲಿಫರು ಸರ್ವರೀತಿಯಲ್ಲಿ ನಮ್ಮ ಬಗ್ಗೆ ಕಾಳಜಿ ವಹಿಸಿದರು. ನಮಗಾಗಿ ವಿಶೇಷ ಗಮನ ನೀಡಿದರು.

* ಅದೇ ಅತಿಥಿ ಹೇಳಿದರು. ನಾನು ಸಾಮಾಜಿಕ ಕಾರ್ಯಕರ್ತೆಯಾಗಿ ಕಾರ್ಯನಿರ್ವಹಿಸುತ್ತಿದ್ದೇನೆ. ಈ ಜಲ್ಸಾ ಲೋಕದ ಎಲ್ಲಾ ಮುಸಲ್ಮಾನರನ್ನು ಒಗ್ಗೂಡಿಸಿದೆ. ನಾನು ಧರ್ಮಿಕವಾಗಿ ಕ್ರೈಸ್ತಳಾಗಿದ್ದೇನೆ. ಆದರೂ ಈ ದಿನಗಳಲ್ಲಿ ತುಂಬ ಸಂತಸ ಭಾವಿಸುತ್ತಿದ್ದೇನೆ. ಈ ರೀತಿಯ ಕಾರ್ಯಕ್ರಮದಲ್ಲಿ ಮೊದಲ ಬಾರಿಗೆ ಭಾಗವಹಿಸುತ್ತಿದ್ದೇನೆ. ಈ ಜಲ್ಸವು ತುಂಬ ಒಳ್ಳೆಯ ಪ್ರಭಾವ ನಮ್ಮ ಮೇಲೆ ಬೀರಿದೆ. ಎಲ್ಲರನ್ನೂ ಸಮಾನ ರೀತಿಯಲ್ಲಿ ವ್ಯವಹರಿಸುತ್ತಿದ್ದು, ಇದು ನನ್ನ ಮೊದಲ ಅನುಭವವಾಗಿದೆ. ನಾನು ಇಲ್ಲಿ ಉಪಸ್ಥಿತನಿದುದ್ದದ್ದಕ್ಕೆ ತುಂಬ ಸಂತೋಷದ ವಿಷಯವಾಗಿದೆ. ನಾನು ನಿಮ್ಮ ಉತ್ತಮ ಭವಿಷ್ಯಕ್ಕಾಗಿ ಶುಭಕಾಂಕ್ಷಿಯಾಗಿದ್ದೇನೆ.

* ಮೆಸೆಡೋನಿಯಾದಿಂದ ಬಂದ ಒಬ್ಬ ಅತಿಥಿ Tony Aitouski ಸಾಹಿಬ್ ಹೇಳುತ್ತಾರೆ;

ನಾನೊಬ್ಬ ಪತ್ರಕರ್ತನಾಗಿದ್ದೇನೆ. ನಾನು ಈ ವರ್ಷ ಜಲ್ಸಕ್ಕೆ ಬಂದದ್ದು ಸಂತೋಷದ ವಿಷಯವಾಗಿದೆ. ಇದು ನನಗೆ ಒಂದು ಹೊಸ ಅನುಭವ. ಪತ್ರಕರ್ತನ ನೆಲೆಯಲ್ಲಿ ಹಲವು ಕಾರ್ಯಕ್ರಮಗಳಲ್ಲಿ ಭಾಗವಹಿಸಿರುತ್ತೇನೆ. ಆದರೆ ಇದು ಎಲ್ಲದಕ್ಕಿಂತ ಉತ್ತಮ ಕಾರ್ಯಕ್ರಮವಾಗಿತ್ತು. ಅತ್ಯಧಿಕ ಜನರು ಇದರಲ್ಲಿ ಭಾಗವಹಿದ್ದಾರೆ. ಎಲ್ಲಾ ಏರ್ಪಾಡುಗಳು ಸುವ್ಯವಸ್ಥಿತವಾಗಿವೆ. ಇಲ್ಲಿ ಶಿಸ್ತು ಇದೆ. ಅಲ್ಲಾಹನ ದೃಷ್ಟಿಯಲ್ಲಿ ಎಲ್ಲರೂ ಸಮಾನರು ಎಂಬ ಮಾತು ನನಗೆ ಅತ್ಯಧಿಕ ಪ್ರಭಾವಿತನನ್ನಾಗಿ ಮಾಡಿದೆ. ಎಲ್ಲ ಜನರಲ್ಲಿ ಸಹಿಷ್ಣುತೆ ಇದೆ ಧರ್ಮ, ಸಮುದಾಯ, ಭಾಷೆ, ಕಾರಣ ನಿಮಿತ್ತ ಯಾವ ಗೊಂದಲಗಳು ಇಲ್ಲ. ಒಬ್ಬ ಅಮುಸ್ಲಿಮ ನೆಲೆಯಲ್ಲಿ ನನಗೆ ಇದು ತುಂಬ ಮುಖ್ಯ ವಿಷಯವಾಗಿದೆ.

ಮುಂದುವರೆದು ಅವರು ಹೇಳಿದರು. ನಿಮ್ಮ ಈ ಸಂದೇಶ Love For All, Hatred for None ಮಾನವರಲ್ಲಿ ಏಕತೆ ಮೂಡಿಸಲು ಕಾರಣವಾಗುತ್ತದೆ. ಈ ಮೂಲಕ ಮಾನವೀಯತೆ ಬಲಗೊಳ್ಳುತ್ತದೆ. ನನಗೆ ಈ ಧ್ಯೇಯ ತುಂಬ ಮೆಚ್ಚುಗೆಯಾಗಿದೆ. ನಿಮ್ಮ ಯಶಸ್ಸು ಪೂರ್ಣ ಭವಿಷ್ಯಕ್ಕಾಗಿ ಶುಭಾಕಾಂಕ್ಷಿಯಾಗಿದ್ದೇನೆ.

* ಮೆಸೆಡೋನಿಯಾದಿಂದ ಬಂದ ತಂಡದ ಅತಿಥಿಯೋರ್ವರು Aki Akiov ಸಾಹಿಬ್ ಹೇಳಿದರು. ಈ ಜಲ್ಸದಲ್ಲಿ ಭಾಗವಹಿಸಿ ತುಂಬ ಪ್ರಭಾವಿತನಾಗಿದ್ದೇನೆ. ನನ್ನ ಆಶಯಗಳು ಪೂರ್ಣಗೊಂಡಿವೆ. ನಾನು ಮುಸ್ಲಿಮನಾಗಿದ್ದೇನೆ. ಇದೀಗ ನಾನು ಅಹ್ಮದಿಯಾ ಜಮಾಅತಿನಲ್ಲಿ ಸೇರಬಯಸುತ್ತೇನೆ.

* ಮೆಸೆಡೋನಿಯಾದಿಂದ ಬಂದ ಓರ್ವ ಅತಿಥಿ Sabina Ramadanova ಸಾಹಿಬ ಹೇಳಿದನು. ನಾನು ಮೊದಲ ಬಾರಿಗೆ ಜಲ್ಸದಲ್ಲಿ ಭಾಗವಹಿಸಿರುತ್ತೇನೆ. ಜಲ್ಸದಲ್ಲಿ ಮೊದಲ ಪ್ರಭಾವ ಬೀರಿದ್ದು ಜಮಾಅತಿನ ಕಾರ್ಯಕರ್ತರ ಕಾರ್ಯವೈಖರಿಯಾಗಿದೆ. ಅವರುಗಳು ಎಲ್ಲರತ್ತ ಗಮನಹರಿಸುತಿದ್ದರು. ಅತಿಥಿ ಸತ್ಕಾರದ ರೀತಿ ತುಂಬ ಒಳ್ಳೆಯ ರೀತಿಯಲ್ಲಿ ನೆರವೇರಿಸಿದರು.

ಮುಂದುವರೆದು ಹೇಳಿದರು. ವಸತಿಯ ವ್ಯವಸ್ಥೆಯು ತುಂಬಾ ಚೆನ್ನಾಗಿತ್ತು. ಆದರೆ ಜಲ್ಸ ಸ್ಥಳದಿಂದ ತುಂಬಾ ದೂರವಿತ್ತು ಅದಕ್ಕಾಗಿ ನನಗೆ ತುಂಬಾ ಕಾಯಬೇಕಾಯಿತು. ವಸತಿ ಸೌಲಭ್ಯವು ಜಲ್ಸಕ್ಕೆ ಹತ್ತಿರವಾಗಿರುತ್ತಿದ್ದರೆ ಶೆಖೆಯಿಂದ ಕಷ್ಟಪಡಬೇಕಾಗುತ್ತಿರಲಿಲ್ಲ. ಭಾಷಣಗಳನ್ನು ಹೆಚ್ಚು ಗಮನಕೊಟ್ಟು ಕೇಳಬಹುದಾಗಿತ್ತು. ದಣಿವು ಆಗುತ್ತಿರಲಿಲ್ಲ. ಏಕೆಂದರೆ ಸಭಾಂಗಣಕ್ಕೆ ಬಂದ ನಂತರ ಬಳಲುವಂತಾಗುತಿತ್ತು. ಮತ್ತು ಏನಾದರೂ ತಿಂಡಿತಿನಸು ಬಯಸುವಂತಾಗುತಿತ್ತು.

ಅಲ್ಲದೇ ಅವರು ಹೇಳಿದರು. ಮೊದಲ ಬಾರಿಗೆ ಜಲ್ಸದಲ್ಲಿ ಬರುವವರಿಗೆ ವಿಶೇಷ ಗಮನವಿರಿಸಬೇಕು. ಮತ್ತು ಅವರಿಗೆ ಎಲ್ಲವು ಮನವರಿಕೆ ಮಾಡಿಕೊಡಬೇಕು. ಮೊದಲು ಅವರಿಗೆ ಇಸ್ಲಾಮ್ ಧರ್ಮ ಪರಿಚಯಿಸಬೇಕು ಮತ್ತು ಇನ್ನೂ ಅಧಿಕ ಶಿಕ್ಷಣ ನೀಡಬೇಕು. ಆಗ ಅವರು ಇಸ್ಲಾಮ್ ಧರ್ಮ ಸ್ವೀಕರಿಸಬಹುದು.

* ಮೆಸೆಡೋನಿಯಾ ತಂಡದ ಅತಿಥಿ ಒಬ್ಬರು Dragan Georgiev ಸಾಹಿಬ್ ಹೇಳಿದರು. ನಾನು ಮೊದಲ ಬಾರಿಗೆ ಜಲ್ಸದಲ್ಲಿ ಭಾಗವಹಿಸಿರುತ್ತೇನೆ. ಇಲ್ಲಿ ಎಲ್ಲವೂ ತುಂಬಾ ವೈಭವಯುತವಾಗಿದ್ದವು.

**(ಮುಂದುವರಿಯುವುದು)**

### *126 ನೇ ಜಲ್ಸಾ ಸಾಲಾನ ಖಾದಿಯಾನ್*

ಸಯ್ಯದನಾ ಹುಝೂರ್ ಅನ್ವರ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್‌ರವರು 126ನೇ (ವಾರ್ಷಿಕ ಸಮ್ಮೇಳನ) ಜಲ್ಸಾ ಸಾಲನ ಖಾದಿಯಾನಿಗೆ 24, 25 ಮತ್ತು 26ನೇ ಡಿಸೆಂಬರ್ 2021 (ಶುಕ್ರವಾರ, ಶನಿವಾರ ಮತ್ತು ಭಾನುವಾರ) ದ ದಿನಾಂಕಗಳ ಅನುಮತಿ ನೀಡಿದ್ದಾರೆ. ಎಲ್ಲಾ ಸದಸ್ಯರು ಇಂದಿನಿಂದಲೇ ದುಆ ಮಾಡಬೇಕಾಗಿ ಹಾಗೂ ಈ ಸಮ್ಮೇಳನದಲ್ಲಿ ಭಾಗವಹಿಸಲು ವಿನಂತಿ. ಅಲ್ಲಾಹನು ನಮಗೆಲ್ಲ ಈ ಸಮ್ಮೇಳನದಲ್ಲ ಭಾಗಿಯಾಗಲು ತೌಫೀಕ್ ನೀಡಲೀ. ಜಲ್ಸಾ ಸಾಲಾನ ಪ್ರತಿಯೊಂದು ವಿಷಯದಲ್ಲೂ ಅನುಗ್ರಹದಾಯಕವಾಗಲಿ ಅದೇ ರೀತಿ ಶುದ್ಧ ಆತ್ಮಗಳ ಮಾರ್ಗದರ್ಶನಕ್ಕೆ ಕಾರಣವಾಗಲಿ ಎಂದು ದುಆ ಮಾಡುತ್ತಾಯಿರಿ. **ಜಝಾಕುಮಲ್ಲಾಹ್.**

**(ನಾಝಿರ್ ಇಸ್ಲಾಹ್-ವ-ಇರ್‌ಶಾದ್ ಖಾದಿಯಾನ್)**

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**

**NATIONAL TOLL FREE**

**1800-103-2131**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.